ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಸಾರ್ವಜನಿಕ ಮಹತ್ವತೆಯಿರುವ ವಿಷಯದ ಬಗ್ಗೆ ಅಲ್ಪಕಾಲಾವಧಿಯ ಚರ್ಚೆ.

ರಾಜ್ಯದ ನಾನಾಭಾಗಗಳಲ್ಲಿ ಕೋಮುವಾರು ಘರ್ಷಣೆ ನಡೆದ ಬಗ್ಗೆ

ಅಧ್ಯಕ್ಷರು.—ಈಗ ಮುಂದೆ ನಿಯಮ ೬೨ರ ಪ್ರಕಾರ ಚರ್ಚೆ. ಇದನ್ನು ನಾಳೆ ಇಟ್ಟು ಕೊಳ್ಳೋಣವೋ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಮೊನ್ನೆ ದಿನ ೩ ಗಂಟೆಗೆ ಚರ್ಚೆ ಪ್ರಾರಂಭವಾದುದು ೭ ಗಂಟೆಯವರೆಗೂ ನಡೆದಿದೆ. ಈಗ ನನ್ನ ಸಲಹೆ, ನಿಮ್ಮ ಪರಿಶೀಲನೆ ಗಾಗಿ ಇಷ್ಟೇ ಇದೆ. ಈಗ ಮಾನ್ಯ ಗೃಹಮಂತ್ರಿಗಳು ಇದರ ಬಗ್ಗೆ ತಮ್ಮ ಹೇಳಿಕೆ ನೀಡಲಿ. ನಂತರ ಅದರ ಮೇಲೆ ಮಾನ್ಯ ಸದಸ್ಯರು ವಿವರಣೆ ಕೇಳುವುದಿದ್ದರೆ ಕೇಳಲಿ. ಅದೂ ಕೂಡಾ ಪರಿಣಾಮ ಕಾರಿಯಾಗುತ್ತದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ವಿಷಯದ ಬಗ್ಗೆ ಬಹಳ ಜನರು ಮಾತನಾಡುವವರಿ ದ್ದಾರೆ. ಇದು ಬಹಳ ಗಂಭೀರದ ವಿಷಯ ಇದೆ.

ಅಧ್ಯಕ್ಷರು.—ಒಂದು ತೀರ್ಮಾನ ಕೊಡಬೇಕಾದರೆ ಸಭಾನಾಯಕರ ಮತ್ತು ಈ ಕಡೆಯವರ ಅಭಿಪ್ರಾಯವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ವಿಷಯವನ್ನು ನಾವು ಇಲ್ಲಿ ಚರ್ಚೆಗೆ ತೆಗೆದುಕೊಂಡ ಉದ್ದೇಶವಾದರೂ ಏನೂ ? ಆ ಉದ್ದೇಶ ಸಫಲವಾಗಬೇಕಾದರೆ ಎಲ್ಲರೂ ಮಾತನಾಡಬೇಕಾಗುತ್ತದೆ ಎರಡೂವರೆ ತಾಸು ಮಾತನಾಡಬೇಕಾಗುತ್ತದೆ. ಈಗಾಗಲೇ ಐದುವರೆ ಗಂಟೆ ಆಗಿದೆ. ಇನ್ನು ಯಾವಾಗ ಪ್ರಾರಂಭ ಮಾಡುವುದು ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ೨ ತಾಸು ಆಗುತ್ತದೆಂದು ಹೇಳಿದರು. ಹೀಗೇ ಎಷ್ಟು ದಿವಸ ೨ ತಾಸು ಕಳೆಯಬೇಕು ? ಈ ಬಗ್ಗೆ ಮೊನ್ನೆಯ ದಿವಸ ಚರ್ಚೆಯಾಗಿದೆ. ಬಿ. ಎ. ಸಿ. ನಲ್ಲಿ ಮಾನ್ಯ ಕೆ. ಹೆಚ್. ಪಾಟೀಲರು, ಶ್ರೀಮತಿ ನಾಗರತ್ನಮ್ಮನವರು ಸಹಾ ಇದ್ದರು. ಮಾನ್ಯ ಮೊಯಿಲ್ಲಿಯವರೂ ಕೂಡಾ ಇದ್ದರು. ಅವರೆಲ್ಲಾ ಆಗ್ರಹಪಡಿಸಿದಮೇಲೆ ಇದನ್ನು ೪ ಗಂಟೆಗೆ ತೆಗೆದುಕೊಂಡು ಮುಗಿಸೋಣವೆಂದಾಯಿತು. ಇದರ ಬಗ್ಗೆ ಆಗಲೇ ೪ ಗಂಟೆ ಚರ್ಚೆಯಾಗಿದೆ. ಈ ಬಗ್ಗೆ ಚರ್ಚೆಯಾಗುತ್ತಾ ಹೋಗಬೇಕೆಂದರೆ, ಆ ಮಾತು ಬೇರೆ. ಈ ಒಂದು ಘಟನೆ ಯಾವಾಗ ನಡೆದಿದೆ ? ಚರ್ಚೆಯ ಬಗ್ಗೆ ನಾನು ವಿರುದ್ಧ ಅಲ್ಲ,

ಶ್ರೀ ಕೆ. ಹೆಚ್. ಪಾಟೀಲ್.—ಇವತ್ತು ೪ ಗಂಟೆಗೆ ಪ್ರಾರಂಭ ಮಾಡಲು ಎಲ್ಲರೂ ಒಪ್ಪಿದ್ದೆವು. ೪ ಗಂಟೆಗೆ ಚಾಲೂ ಆಗಲಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಇದು ಬಂದದ್ದು ಹೇಗೆ ? ಆಳಂದ, ರಾಮನಗರ, ಬೆಳಗಾಂನಲ್ಲಿ ಗೋಲೀಬಾರ್ ಆಯಿತು. ಅದೇನೂ ನಿನ್ನೆ ಮೊನ್ನೆ ಆದ ಘಟನೆಯೇ ? ಇದೇನೂ ಅಹಮದಾಬಾದ್ ಅಥವಾ ಬರೋಡಾದಲ್ಲಿ ಆದಂತಹ ಘಟನೆಯೇ ?

ಶ್ರೀ ಎ. ಎಂ. ಇಂಡಸ್‌ಗೇರಿ.—ಮಾನ್ಯ ಮುಖ್ಯಮಂತ್ರಿಯವರು......

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದೇನೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಮಾನ್ಯ ಮುಖ್ಯ ಮಂತ್ರಿಯವರ ಹೇಳಿಕೆ ಮುಗಿಯಲಿ.

ಶ್ರೀ ರಾಮಕೃಷ್ಣಹೆಗ್ಡೆ.—ಅದನ್ನು ಸಮರ್ಥನೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದೇನೂ ಪಾಕಿಸ್ಥಾನದಲ್ಲಿ, ಅಫ್‌ಘಾನಿಸ್ತಾನದಲ್ಲಿ ಆದ ಘಟನೆಯಲ್ಲ.

ಶ್ರೀ ರಾಮಕೃಷ್ಣ ಹೆಗ್ಡೆ.—ಪಾಕಿಸ್ಥಾನದ, ರಷ್ಯಾದ ಸುದ್ದಿ ನಮಗೆ ಏಕೆ ಬೇಕು? ಅದ ನಮಗೆ ಬೇಡ. ಪ್ರತಿದಿನ ಪತ್ರಿಕೆಗಳಲ್ಲಿ ಓದಿದರೆ, ಇಲ್ಲಿ ಎಷ್ಟು ಜನರು ಸತ್ತರು, ಎಷ್ಟು ಜನರನ್ನು ಕೊಂದರು ಎಂದು ಬರುತ್ತಿದೆ. ದೇವರ ದಯೆಯಿಂದ ಕರ್ನಾಟಕದಲ್ಲಿ ಅಂತಹ ಅನಾಹುತ ಆಗಿಲ್ಲ. ಅಲ್ಲಿ ಆದದ್ದೂ ಖಂಡನೀಯ ಅದು ಆಗಕೂಡದು. ಬೇಕಾದರೆ ಅದನ್ನು ಓದಿ ಹೇಳುತ್ತೇನೆ. ಇಲ್ಲಿ ಸಂದರ್ಭ ಇಲ್ಲ ಎಂದು ನಾನು ಅದನ್ನು ಹೇಳುತ್ತಿಲ್ಲ. ಗೃಹಸಚಿವರು ಇದರ ಬಗ್ಗೆ ಹೇಳಬಹುದು. ಇಡೀ ದೇಶದಲ್ಲಿ ಮೇಜರ್ ಕೋಮುವಾರು ಘರ್ಷಣೆಗಳು ೭೫–೭೬ರ ಅವಧಿಯಲ್ಲಿ ಎಷ್ಟಾಗಿವೆ? ಯಾವ ಯಾವ ರಾಜ್ಯದಲ್ಲಿ ಆಗಿವೆ ಎಂಬ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಸಚಿವರು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ದೇಶದ ಅನೇಕ ರಾಜ್ಯಗಳ ಹೆಸರುಗಳಿವೆ. ಆದರೆ ನಮ್ಮ ಕರ್ನಾಟಕದ ಹೆಸರು ಇಲ್ಲ. ಆದ್ದರಿಂದ, ದಯವಿಟ್ಟು ಇಂಥ ಸಣ್ಣ ವಿಚಾರಕ್ಕೆಲ್ಲಾ ಬಹಳ ದೊಡ್ಡ ಅರ್ಥ ಕೊಟ್ಟು ಮನಸ್ಸನ್ನು ಪುನಃ ಪುನಃ ಕಲಕುವುದು ಬೇಡ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮನಸ್ಸನ್ನು ಪುನಃ ಪುನಃ ಕಲಕುವ ಮಾತನ್ನು ಯಾರೂ ಇಲ್ಲಿ ಆಡಬಾರದು. ಉದಾಹರಣೆಗೆ ಬೆಳಗಾಂ ವಿಚಾರವನ್ನೇ ತೆಗೆದುಗೊಳ್ಳಿ. ಈಗ ನಾವು ಒಂದು ಅಂಡರ್ ಸ್ಟ್ಯಾಂಡಿಂಗಿಗೆ ಬಂದಿದ್ದೇವೆ. ಈ ವಿಚಾರವಲ್ಲಿ ಚರ್ಚೆ ಮಾಡಲಿಕ್ಕೆ ಕಳೆದ ತಿಂಗಳು ನಾನು ಬೊಂಬಾಯಿಗೆ ಹೋಗಬೇಕಾಗಿತ್ತು. ಆದರೆ ಹೋಗಲಿಕ್ಕೆ ಸಾಧ್ಯವಾಗಲಿಲ್ಲ. ಇಲ್ಲಿ ಮಾತನಾಡುವುದಕ್ಕೆ ಆ ಕಡೆಯ ಮಾನ್ಯ ಸದಸ್ಯರಿಗೆ ಈ ಕಡೆಯ ಮಾನ್ಯ ಸದಸ್ಯರಿಗೆ ಸಾಕಷ್ಟು ವಿಷಯ ಇರಬಹುದು. ಕೇವಲ ಮಾತನಾಡುವುದರಿಂದ ಯಾವ ಕಾರ್ಯವನ್ನೂ ನಾವು ಸಾಧನೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಕೊಂಡು ಬಂದಮೇಲೆ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕೆಂಬ ಬಗ್ಗೆ ಒಂದು ಐಡಿಯ ಬರುತ್ತದೆ. ಆಳಂದ್ ಮತ್ತು ರಾಮನಗರದಲ್ಲಿ ನಡೆದಂಥ ಘಟನೆ ಬಗ್ಗೆ ಬಹಳ ವ್ಯಥೆ ಪಟ್ಟಿದ್ದೇವೆ. ಯಾವ ಒಂದು ಜೀವವನ್ನೂ ತೆಗೆದುಕೊಳ್ಳತಕ್ಕ ಅಧಿಕಾರವನ್ನು ದೇವರು ನಮಗೆ ಕೊಟ್ಟಿಲ್ಲ. ಎಲ್ಲಿಯವರೆಗೆ ನಾವು ಒಬ್ಬರಿಗೆ ಜೀವವನ್ನು ಕೊಡುವುದಕ್ಕೆ ಸಾಮರ್ಥ್ಯ ಇರುವುದಿಲ್ಲ ಅಲ್ಲಿಯವರೆಗೂ ಇನ್ನೊಂದು ಜೀವವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸಣ್ಣಪುಟ್ಟ ವಿಷಯಗಳಿಗೆ ಚರ್ಚೆಮಾಡುವುದು ಬೇಡ. ಬೇರೆ ಸಂದರ್ಭ ಬಂದಾಗ ಅವರು ಮಾತನಾಡಲಿ ಈಗ ಇಲ್ಲಿಗೇ ಇದನ್ನು ಮುಗಿಸೋಣ. ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕರ್ನಾಟಕ ರಾಜ್ಯದಲ್ಲಿ ಕೋಮುವಾರು ಘರ್ಷಣೆ ಆಗಿಲ್ಲ. ಆದ್ದರಿಂದ ನಮ್ಮ ಕರ್ನಾಟಕದ ಹೆಸರು ಪಾರ್ಲಿಮೆಂಟ್‌ನಲ್ಲಿ ಬರಲಿಲ್ಲ ಎಂದು ಹೇಳಿದಿರಿ. ನಿನ್ನೆಯ ದಿವಸ ತಾವು ಈ ಸದನದಲ್ಲಿ ಉತ್ತರವನ್ನು ಕೊಡುವಾಗ ೧೯೭೫–೭೬ನೇ ಸಾಲಿನಲ್ಲಿ ೧೨ ಪ್ರಕರಣ ಮತ್ತು ೭೬–೭೭ನೇ ಸಾಲಿನಲ್ಲಿ ೫ ಪ್ರಕರಣಗಳು ನಡೆದಿವೆ ಎಂದು ತಾವೇ ನಿನ್ನೆಯ ದಿವಸ ಹೇಳಿದ್ದೀರಿ.

ಶ್ರೀ ಬಿ. ರಾಚಯ್ಯ.—ಮೇಜರ್ ಕಮ್ಯುನಲ್ ರಯಟ್ಸ್ ಆಗಿಲ್ಲ ಎಂದು ಹೇಳಿದ್ದುದು ಅದು ಒಂದೂ ಆಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ರಾಜ್ಯದಲ್ಲಿ ಮೇಜರ್ ಕಮ್ಯುನಲ್ ಕ್ಲಾಷಸ್ ಒಟ್ಟು ೧೭ ನಡೆದಿದೆ. ಬ್ಯಾಕ್‌ವರ್ಡ್ ಕ್ಲಾಸ್‌ನವರು ೨ ಜನ ಸತ್ತರೆ ಅದು ನಿಮ್ಮ ದೃಷ್ಟಿಯಲ್ಲಿ ಮೇಜರ್ ಅಲ್ಲ, ಮೈನಾರಿಟೀಸ್ ೩ ಜನ ಸತ್ತರೆ ಅದು ನಿಮ್ಮ ದೃಷ್ಟಿಯಲ್ಲಿ ಮೇಜರ್ ಅಲ್ಲ. ಇದು ಮೇಜರ್ರೇ ಅಥವಾ ಮೈನರ್ರೇ ಎಂಬುದನ್ನು ಆನಂತರ ಚರ್ಚೆ ಮಾಡೋಣ. ನಿಮ್ಮ ಅಧಿಕಾರದ ಅವಧಿಯಲ್ಲಿ ಕಳೆದ ಸಾಲಿನಲ್ಲಿ ಮತ್ತು ಈ ಸಾಲಿನಲ್ಲಿ ಒಟ್ಟು ೧೭ ಕಮ್ಯುನಲ್ ಕ್ಲಾಷಸ್ ಆಗಿವೆ. ಬಿಜಾಪುರದಲ್ಲಿ, ಬೆಳಗಾಂನಲ್ಲಿ, ಹುಬ್ಬಳ್ಳಿಯಲ್ಲಿ, ರಾಮನಗರದಲ್ಲಿ ಇನ್ನೂ ಮುಂತಾದ ಕಡೆಗಳಲ್ಲಿ ಈ ಕಮ್ಯುನಲ್ ಕ್ಲ್ಯಾಷಸ್ ಆಗಿದೆ. ಈ ಅಂಕಿ ಅಂಶಗಳನ್ನು ಡಿಲೇ ಮಾಡುವುದು ಬೇಡ, ನಾನು ಉತ್ತರ ಕೊಡುತ್ತೇನೆ. ನೀವು ಯಾರೂ ಕ್ಲಾರಿಫಿಕೇಷನ್ ಕೇಳುವುದು ಬೇಡ. ಇದನ್ನು ಇಲ್ಲಿಗೇ ಮುಗಿಸೋಣವೆಂದು ನೀವು ಹೇಳುವುದೂ ಬೇಡ, ಸ್ವಾಮಿ ಇನ್ನೂ ಮಾತನಾಡತಕ್ಕ ಸದಸ್ಯರು ಬಹಳ ಮಂದಿ ಇದ್ದಾರೆ. ನಾಳೆ ನಾನ್ ಅಫಿಷಿಯಲ್ ಬಿಸಿನೆಸ್ ಇದೆ. ಅದನ್ನು ತೆಗೆದುಹಾಕಿ ಇದನ್ನೇ ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದುದ್ದು ಸರಿ ಇದುವರೆಗೆ ಆಗಿರತಕ್ಕಂಥ ಘಟನೆಗಳು ಇನ್ನು ಮುಂದೆ ಆಗದಿರುವಂತೆ ನೋಡಿಕೊಳ್ಳಬೇಕು. ಈ ಬಗ್ಗೆ ನಾವು ಸಲಹೆ ಕೊಡಬೇಕಾಗಿದೆ, ಆದ್ದರಿಂದ ನಮಗೆ ಮಾತನಾಡಲು ಅವಕಾಶ ಕೊಡಿ ಯಾರಾದರೂ ಹಿಂಸೆ, ದುಷ್ಕೃತ್ಯ, ಪ್ರಚೋದನೆ ಮಾಡಿದರೆ ಅಂಥವರಿಗೆ ಶಿಕ್ಷೆ ಕೊಡಿ. ಇಲ್ಲಿ ಪ್ರಚೋದನ ಕಾರಿಯಾಗಿ ಯಾರೂ ಮಾತನಾಡುವುದಿಲ್ಲ. ತಾವು ಬೇಕಾದರೆ ಮಾತನಾಡತಕ್ಕ ಸದಸ್ಯರಿಗೆ ನಿರ್ದಿಷ್ಟವಾಗಿ ೫ ಅಥವಾ ೧೦ ನಿಮಿಷ ಎಂದು ಗೊತ್ತು ಮಾಡಿ. ಆದರೆ ಈ ಬಗ್ಗೆ ಮಾತನಾಡತಕ್ಕ ಸದಸ್ಯರಿಗೆ ತಾವು ದಯಮಾಡಿಟ್ಟು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು.—ಈಗಾಗಲೇ ೪ ತಾಸು ಚರ್ಚೆಯಾಗಿದೆ. ಈಗ ಮಾನ್ಯ ಸಚಿವರು ಉತ್ತರ ಕೊಡಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಇವತ್ತು ಮಾತನಾಡಲು ನನ್ನ ಹೆಸರನ್ನು ಕೊಟ್ಟಿದ್ದೇನೆ. ಇವತ್ತು ನಾನು ಒಂದು ಪಕ್ಷವನ್ನು ಪ್ರತಿನಿಧಿಸುತ್ತಿದ್ದೇನೆ ನಾನು ಮಾತನಾಡಲು ಅವಕಾಶವೇ ಸಿಕ್ಕಿಲ್ಲ. ಆದ್ದರಿಂದ ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಈ ಬಗ್ಗೆ ಸುಮಾರು ೪ ತಾಸು ಚರ್ಚೆಯಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಪೋಲೀಸರು ಏನು ಅವ್ಯವಹಾರ ಮಾಡಿದ್ದಾರೆಂಬುದನ್ನು ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಸ್ವಯಂ ಪ್ರೇರಿತರಾಗಿ ಉತ್ತರವನ್ನು ಕೊಡುತ್ತಿರುವುದರಿಂದ ಯಾವತ್ತು ಬೇಕಾದರೂ ಕೊಡಬಹುದು. ಆದರೆ ಮಾನ್ಯ ಸಭಾನಾಯಕರು ಹೇಳಿದ್ದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅವರು ಆಡಿದ ಮಾತಿನಂತೆ ನಡೆದುಕೊಳ್ಳುತ್ತಿಲ್ಲ. ಆದರೆ ನಾನು ಮಾತ್ರ ಯಾವತ್ತೂ ಹೇಳಿದ ಮಾತಿಗೆ ತಪ್ಪಿ ನಡೆದಿಲ್ಲ. ಇವತ್ತು ೪ ಗಂಟೆಗೆ ಈ ವಿಷಯ ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಆದರೆ ತೆಗೆದುಕೊಳ್ಳಲಿಲ್ಲ. ಆದ್ದರಿಂದ ನಾವು ಸುಮ್ಮನೆ ಕುಳಿತೆವು ಮಾನ್ಯ ರಾಚಯ್ಯನವರು ಹೇಳಿಕೆಯನ್ನು ಕೊಡಬೇಕಾದರೆ ಅವರು ಯಾವತ್ತು ಬೇಕಾದರೂ ಕೊಡಲಿ ಯಾರೋ ಒಬ್ಬ ರಿಟೈರ್ಡ್ ಕ್ಯಾಪ್ಟನ್‌ನನ್ನು ಹಿಡಿದುಕೊಂಡು ಹೋದರು ಎಂದು ಪತ್ರಿಕೆಯಲ್ಲಿ ಬರುತ್ತದೆಂದು ಇಟ್ಟುಕೊಳ್ಳೋಣ.........

ಅಧ್ಯಕ್ಷರು.—ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ......

ಶ್ರೀ ಕೆ. ಹೆಚ್. ಪಾಟೀಲ್.—ನಮ್ಮ ಕರ್ನಾಟಕದ ಜನರು ಬಹಳ ನೀತಿವಂತರು ಬಹಳ ಪ್ರಾಮಾಣಿಕರು, ಮಾನ್ಯ ರಾಮಕೃಷ್ಣ ಹೆಗ್ಗಡೆಯವರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಈ ಕರ್ನಾಟಕ ರಾಜ್ಯದಲ್ಲಿ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ನಾನು ಒಪ್ಪುತ್ತೇನೆ, ಸಂತೋಷ...

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ನಿಯಮ ೩೩೪ರಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿ, ಈ ಬೆಂಗಳೂರು ನಗರದಲ್ಲಿ ಕೊಲೆ ಸುಲಿಗೆ, ದರೋಡೆ ಮಹಿಳೆಯರ ಮೇಲೆ ಅತ್ಯಾಚಾರ ಮುಂತಾದವು ನಡೆಯುತ್ತಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ನಿನ್ನೆಯ ದಿವಸವೇ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು......

(ಗೊಂದಲ)

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನಿಯಮ ೩೩೪ಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಲಿ. ಮೊದಲು ಇದನ್ನು ಮುಗಿಸೋಣ. ಅನಂತರ......

ಶ್ರೀ ಎಸ್. ಬಂಗಾರಪ್ಪ.—ಸಚಿವರು ಅನಂತರ ಉತ್ತರ ಕೊಡಲಿ......

ಅಧ್ಯಕ್ಷರು.—ಅವರು ನಿನ್ನೆಯೇ ಉತ್ತರ ಕೊಡಬೇಕಾಗಿತ್ತು. ಆದರೆ ಆಗಲಿಲ್ಲ. ಆದ್ದರಿಂದ ಈಗ ಅವರು ಉತ್ತರ ಕೊಡಲಿ...

(ಗೊಂದಲ)

ಅಧ್ಯಕ್ಷರು.—ಇದನ್ನು ಮುಗಿಸೋಣವೋ ಅಥವಾ ಬೇಡವೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ಮಂತ್ರಿಗಳು ಉತ್ತರ ಕೊಡುವುದು ಬೇಡ. ನಾಳೆ ಕೊಡಲಿ.

ಶ್ರೀ ಎಸ್. ಬಂಗಾರಪ್ಪ.—ಇನ್ನೇನು ಸಭೆಯನ್ನು ಮುಂದಕ್ಕೆ ಹಾಕುತ್ತಿದ್ದೀರಿ.

ಅಧ್ಯಕ್ಷರು.—ನಾನು ಸಭೆಯನ್ನು ಇನ್ನೂ ಮುಂದಕ್ಕೆ ಹಾಕಿಲ್ಲ. ಈಗ ನಿಯಮ ೩೩೪ಕ್ಕೆ ಸಚಿವರು ಉತ್ತರ ಕೊಡಬೇಕೋ ಅಥವಾ ಸಭೆಯನ್ನು ಮುಂದಕ್ಕೆ ಹಾಕಬೇಕೋ ಹೇಳಿ. ಮಾನ್ಯ ಸಚಿವರು ನಿಯಮ ೩೩೪ಕ್ಕೆ ನಿನ್ನೆಯೇ ಉತ್ತರ ಕೊಡಬೇಕಾಗಿತ್ತು. ಆದರೆ ಆಗಲಿಲ್ಲ, ಆದ್ದರಿಂದ ಈಗಲಾದರೂ ಅವರು ಉತ್ತರ ಕೊಡಲಿ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಜೆಂಡ ಪ್ರಕಾರ ಸಭೆಯ ಕಾರ್ಯಕಲಾಪವನ್ನು ನಡೆಸಿ ಎಂದರೆ ನೀವು ಬೇರೆ ಯಾವುದೋ ವಿಷಯವನ್ನು ಇದರಲ್ಲಿ ಮಿಕ್ಸಪ್ ಮಾಡುತ್ತಿದ್ದೀರಿ. ದಯವಿಟ್ಟು ಹಾಗೆ ಮಾಡಬೇಡಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕಾನೂನು ಪಾಲನೆ ವಿಚಾರದಲ್ಲಿ ಇಲ್ಲಿ ಪ್ರಸ್ತಾಪ ಮಾಡಿದ್ದರು.

ಶ್ರೀ ಎಸ್. ಬಂಗಾರಪ್ಪ.—ರಾಮನಗರದ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈಗ ನೀವು ನಿಯಮ ೩೩೪ಕ್ಕೆ ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಇಂಟರ್‌ಫಿಯರ್ ಆದವರೆಲ್ಲರಿಗೂ ನೀವು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ. ಈಗ್ಗೆ ೩ ದಿವಸದ ಹಿಂದೆಯೇ ಸಚಿವರು ಉತ್ತರ ಕೊಡಬೇಕಾಗಿತ್ತು. ಕೊಡುವುದಕ್ಕೆ ಆಗದೆ, ಮುಂದುಮುಂದಕ್ಕೆ ಹೋಗುತ್ತಿದೆ. ಚರ್ಚೆಯಲ್ಲಿ ಮಧ್ಯೆ ಬಾಯಿ ಹಾಕಿದವರಿಗೆಲ್ಲಾ ನೀವು ಅವಕಾಶ ಕೊಡಬೇಡಿ. ಅವರೇನು ಲೀಡರ್ ಆಫ್ ಅಪೋಸಿಷನ್ ಪಾರ್ಟಿ ಅಲ್ಲ. ನಮ್ಮ ಬಗ್ಗೆ ಅವರು ಸ್ವಲ್ಪಮಟ್ಟಿಗೆ ಸಹಕಾರವನ್ನು ನೀಡಬೇಕು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ನಾನು ೩೩೪ರ ಮೇರೆಗೆ ನೋಟೀಸ್ ಕೊಟ್ಟದ್ದು ಮುಂದಕ್ಕೆ ಹೋಗುತ್ತಲೇ ಇದೆ. ಅದಕ್ಕೆ ಸರ್ಕಾರದಿಂದ ಉತ್ತರ ಬಂದಿಲ್ಲ. ಬೇರೆ ಯವರಿಗೆ ಎಲ್ಲರಿಗೂ ಅವಕಾಶವನ್ನು ಕೊಡುತ್ತಿದ್ದೀರಿ. ೩೩೪ರ ಕೆಳಗೆ ಕಳುಹಿಸಿದಂಥ ವಿಚಾರ ಮೂರು ದಿವಸಗಳಿಂದ ಮುಂದಕ್ಕೆ ಹೋಗುತ್ತಿದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರುಗಳಿಗೆ ನಾನು ಏನು ಹೇಳುತ್ತಿದ್ದೇನೆಂದರೆ ನಮ್ಮ ಮುಂದೆ ಈಗಿರತಕ್ಕಂಥ ಚರ್ಚೆ ಇದನ್ನು ಮುಂದುವರಿಸಬೇಕೇ ಅಥವಾ ನಾಳೆಯ ದಿವಸ ತೆಗೆದುಕೊಳ್ಳಬೇಕೇ ಎನ್ನುವುದು ಇದೆ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ನಿನ್ನೆಯಿಂದ ಒತ್ತಾಯ ಮಾಡು ತ್ತಿದ್ದಾರೆ. ಅವರಿಗೆ ಮಾನ್ಯ ಸಚಿವರು ಉತ್ತರವನ್ನು ಕೊಡಲು ರೆಡಿ ಇದ್ದಾರೆ. ಉತ್ತರವನ್ನು ಕೊಟ್ಟನಂತರ ಚರ್ಚೆಯನ್ನು ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ತಾವು ಗಮನಕೊಟ್ಟು ಕೇಳಲಿಲ್ಲ. ಮಾನ್ಯ ಮಂತ್ರಿಗಳು ಹೇಳಿದರು ೩೩೪ರ ಕೆಳಗೆ ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಏನು ಕೇಳಿದ್ದಾರೆ ಅದಕ್ಕೆ ಉತ್ತರ ರೆಡಿ ಇದೆ. ಓದುತ್ತೇನೆ, ಓದಿದ ಉತ್ತರ ಸಮಾಧಾನವಾಗದೆ ಇದ್ದರೆ ಓರಲ್‌ಆಗಿ ರಿಪ್ಲೇ ಕೊಡುತ್ತೇನೆಂದು ಹೇಳಿದರು. ಅದರಮೇಲೂ ಸಮಾಧಾನವಿಲ್ಲದಿದ್ದರೆ ಬೇರೆ ಉತ್ತರವನ್ನು ಹೇಳುತ್ತೇನೆಂದು ಹೇಳಿದರು. ಹೀಗೆ ೩೩೪ರ ಮೇಲೆಯೇ ಎಲ್ಲವನ್ನು ಹೇಳಿ ಮುಗಿಸಿ ಹೋಗಬೇಕು ಎನ್ನುವುದು ಅವರ ಖಯಾಲಿ. ಅದನ್ನು ಅರ್ಥಮಾಡಿಕೊಂಡೆ ನಾವು ತಮಗೆ ಅರಿಕೆ ಮಾಡಿಕೊಳ್ಳು ವುದೇನೆಂದರೆ ಮೊದಲು ಚರ್ಚೆಗೆ ಅವಕಾಶವನ್ನು ಮಾಡಿಕೊಡಿ, ಅನಂತರ ಅವರು ಕೇಳಿರುವ ಪ್ರಶ್ನೆಗೆ ೧೦ ಪೇಜು ಉತ್ತರವಿದ್ದರೂ ಕೊಡಲಿ. ನಾವು ಸಮಾಧಾನದಿಂದ ಕುಳಿತುಕೊಂಡು ಕೇಳುತ್ತೇವೆ.

(ಗೊಂದಲ)

SRI K. H. PATIL.—When the agenda is not complete today, naturally it will be carried over to the next day. But the Minister has a right to make a statement any day, but he need not refer to 334. He can make a statement of his own. But the agenda which is placed before is not reached today, it will be carried over to the next day.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ವಿಷಯ ಇಷ್ಟೇ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರ ರೀತಿಯಲ್ಲಿ ಏನೋ ವಿರೋಧಪಕ್ಷದವರು ವಿಷಯಾಂತರ ಮಾಡಬೇಕು, ವಿಚಾರದ ಬಗ್ಗೆ ಕೆರಳಿಸಬೇಕು, ಗೂಬೆ ಕೂರಿಸಬೇಕೆಂದು ಹೇಳಿ ಅವರೇ ಕೆರಳಿಸುತ್ತಿದ್ದಾರೆ. ಈ ವಿಷಯ ಚರ್ಚೆಯಾಗುವಾಗ ಅವರು ಇರಲಿಲ್ಲ. ಬೆಳಗಾಂ, ಆಳಂದ್, ರಾಮನಗರ ಈ ವಿಚಾರದ ಬಗ್ಗೆ ಸೌಮ್ಯವದಿಂದ ವಿಚಾರ ಮಾಡುತ್ತೇನೆ, ಮತ್ತೆ ನಾವು ನೀವು ಹೇಳಿದಹಾಗೆ ಇಂದು ಮುಗಿಸಿಬಿಡುತ್ತೇವೆಂದು ಹೇಳಿದರು. ನಾವು ಆ ವಿಷಯವನ್ನು ಮುಗಿಸಲಿಕ್ಕೆ ಅಡ್ಡಿ ಬರುವುದಿಲ್ಲವೆಂದು ಈಗಾಗಲೇ ಸನ್ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಶ್ರೀನಿವಾಸ್‌ರವರು ಸೂಚನೆ ಕೊಟ್ಟಿದ್ದಾರೆ. ಆದರೆ ತಾವು ಲೀಸ್ಟ್‌ನಲ್ಲಿದ್ದುದನ್ನು ಪೋಸ್ಟ್‌ಪೋನ್ ಮಾಡಿದ ರೂ ವಿರೋಧಪಕ್ಷದವರು ಅದನ್ನು ವಿರೋಧಿಸುವಂಥ ಯೋಚನೆಯನ್ನೂ ಕೂಡ ಮಾಡಲಿಲ್ಲ. ಈ ಮಧ್ಯೆ ಬಂದ ಬಿ. ಡಿ. ಎ. ಬಿಲ್ ನಾಲ್ಕು ಗಂಟೆಗೆ ತೆಗೆದುಕೊಂಡು ಅದಕ್ಕೆ ಅವಕಾಶ ಮಾಡಿಕೊಟ್ಟು ನಾಲ್ಕು ಗಂಟೆಯಾದಮೇಲೆ ಒತ್ತಾಯ ಮಾಡಬಹುದೆಂದು ತಿಳಿದು ಯಾವ ಗೊಂದಲವೂ ಇಲ್ಲದಂತೆ ಬಿಲ್ ಪಾಸ್ ಮಾಡಿಕೊಟ್ಟಿದ್ದೇವೆ. ಸರ್ಕಾರಕ್ಕೆ ಸಹಾಯ ಮಾಡಬೇಕೆಂದು ಬಿಲ್ ಪಾಸ್ ಮಾಡಲು ಹೋಗಿ ಈಗ ವೇಳೆ ೫ ಗಂಟೆಯಾಗಿದೆ. ಐದು ಗಂಟೆಯಾದಮೇಲೆ ಈ ವಿಚಾರವನ್ನು ನಾಳೆ ತೆಗೆದುಕೊಳ್ಳೋಣವೆಂದು ಹೇಳಿ ಪಂಜಾಬ್, ಪಾಕೀಸ್ತಾನ, ಲೆಬನಾನ್‌ನಲ್ಲಿ ನಡೆದದ್ದನ್ನು ಲೋಕಾಭಿರಾಮವಾಗಿ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡು ಮಾತನಾಡುತ್ತಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇಷ್ಟು ಸಿಟ್ಟು ಕೆರಳಿಸಲಿಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳೇ ಕಾರಣವೆಂದು ಹೇಳಬೇಕಾಗುತ್ತದೆ. ಇಂಥ ಕೆಲಸಕ್ಕೆ ಅವರು ಹೋಗಬಾರದು,

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಎಲ್ಲಾ ಸಂದರ್ಭಗಳಲ್ಲೂ ಸೌಮ್ಯವದಿಂದ ನಾವು ವರ್ತಿಸಿದ್ದೇವೆ. ಸಭೆಯ ಗೌರವ ಘನತೆಯನ್ನು ಕಾಪಾಡಿಕೊಂಡು ಬಂದಿದ್ದೇವೆ. ಇಷ್ಟೊಂದು ಗಹನವಾದ ವಿಚಾರವನ್ನು ನಾವು ಎತ್ತಿದಾಗ ಅದನ್ನು ಸಾರಸಗಟು ತೆಗೆದುಕೊಂಡು ನಮ್ಮನ್ನು ಕೆರಳಿಸುವಂತೆ ಮಾನ್ಯ ಸಭಾನಾಯಕರು ಹೇಳಿದರೆ ಅದನ್ನು ಸಹಿಸಿಕೊಂಡು ನಾವು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ, ನಿಯಮ ೩೩೪ರಲ್ಲಿ ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅದರ ಬಗ್ಗೆ ಹೇಳಿಕೆ ಕೊಡುವುದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ಆದರೆ ಇವೊತ್ತು ಗೊಂದಲಮಯವಾಗಿ ಇರುವಂಥ ವಿಷಯ ಬಂದಿರುವಾಗ ಅದನ್ನು ಹಾಗೆಯೇ ನಿಲ್ಲಿಸಿ ಬಿಡತಕ್ಕಂಥದ್ದು ಸೂಕ್ತವಲ್ಲ. ಆದಕ್ಕೆ ತಾವು ಚರ್ಚೆಮಾಡುವುದಕ್ಕೆ ಅವಕಾಶವನ್ನು ಕೊಡಿ. ಕೆಲವು ಮಾನ್ಯ ಸದಸ್ಯರು ಮಾತನಾಡಬೇಕೆಂದಿದ್ದಾರೆ. ಇಂತಿಷ್ಟು ಸಮಯದಲ್ಲಿ ಮುಗಿಸಬೇಕೆಂದು ಅಪ್ಪಣೆ ಕೊಡಿ ಅದಕ್ಕೆ ನಾವು ಬೇಡವೆಂದು ಹೇಳುವುದಿಲ್ಲ. ನಿಯಮ ೩೩೪ರ ಮೇರೆಗೆ ತೆಗೆದುಕೊಂಡಂಥ ವಿಷಯವನ್ನು ಮುಗಿಸಬೇಕೆಂದು ಹೇಳಿ ನಾಲ್ಕು ಗಂಟೆಯಾಯಿತು, ಐದು ಗಂಟೆಯಾಗುತ್ತಿದೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟು ಮುಗಿಸಬೇಕಾಗಿದೆ ಎಂದು ಹೇಳಿ ಅಷ್ಟಕ್ಕೆ ಹೋದರೆ ಈ ವಿಧವಾದ ರೀತಿಯಲ್ಲಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಸಹಕಾರ ಎರಡೂ ಕಡೆಯಿಂದಲೂ ಇರಬೇಕು ಒಂದುಕಡೆ ಇದ್ದರೆ ಸಾಲದು. ಈ ಬಗ್ಗೆ ತಾವು ಸಾವಧಾನದಿಂದ ಚಿಂತನೆಮಾಡಿ. ಇದರ ಬಗ್ಗೆ ಚರ್ಚೆಮಾಡಲು ಅಪ್ಪಣೆ ಕೊಡಿ. ನಾವು ಹಿಂದೆ ಅನೇಕ ಸಂದರ್ಭಗಳಲ್ಲಿ ೩೩೪ರ ಪ್ರಕಾರ ತೆಗೆದುಕೊಂಡ ವಿಷಯದ ಬಗ್ಗೆ ದಿನಗಟ್ಟಲೇ ಚರ್ಚೆಮಾಡಿದ್ದುದು ಇದೆ. ವಿರೋಧಪಕ್ಷದವರೇನೂ ಹೊಸ ಸಂಪ್ರದಾಯವನ್ನು ಪ್ರಾರಂಭಮಾಡಿಲ್ಲ. ನಮ್ಮಲ್ಲಿ ಸಾಕಷ್ಟು ನಿದರ್ಶನಗಳು ಇವೆ. ೩೩೪ನೇ ನಿಯಮದ ಮೇರೆಗೆ ಬಂದ ವಿಷಯದ ಬಗ್ಗೆ ಇಡೀ ದಿವಸ ಚರ್ಚೆ ನಡೆದದ್ದುದು ಇದೆ. ಶೂನ್ಯವೇಳೆಯಲ್ಲಿಯೂ ಗಂಟೆಗಟ್ಟಲೇ ಚರ್ಚೆ ನಡೆದದ್ದುದು ಇದೆ. ಆದ್ದರಿಂದ ತಾವು ಇಷ್ಟು ಸಮಯದಲ್ಲಿ ಮುಗಿಸಬೇಕೆಂದು ಹೇಳಿದರೆ ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ವಿಚಾರ ಕೊನೆ ಹಂತಕ್ಕೆ ಬಂದಿತ್ತು. ವಿಚಾರ ಯಾವುದು ಚರ್ಚೆಯಲ್ಲಿದೆ

ಎನ್ನತಕ್ಕಂಥದ್ದನ್ನು ದಯವಿಟ್ಟು ಕೇಳಬೇಕು. ಪಂಜಾಬ್‌ನ್ನು ಉದಾಹರಣೆ ಕೊಟ್ಟು ಸಾಮಾನ್ಯವಾಗಿ ಮಾತನಾಡತಕ್ಕಂಥ ಪದ್ಧತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಬಿಟ್ಟರೆ ಬಹಳ ಒಳ್ಳೆಯದು.

ಒಬ್ಬ ಮಾನ್ಯ ಸದಸ್ಯರು.—ಪಂಜಾಬ್, ಮತ್ತೊಂದು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದನ್ನು ನಾವು ಓದಿದ್ದೇವೆಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ಆರೀತಿ ಹೇಳಲಿಲ್ಲ. ಈಗ ಸದನದಲ್ಲಿ ಇತ್ತೀಚೆಗೆ ದೇಶದಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ಮಾತನಾಡಿರತಕ್ಕಂಥದ್ದು ಒಳ್ಳೆಯದಲ್ಲ. ಈ ವಿಚಾರವನ್ನು ಪ್ರಸ್ತಾಪ ಮಾಡುವಾಗ ನಾವು ಸೌಮ್ಯಮದಿಂದಿದ್ದೇವೆಂದು ಯಾವುದೋ ಒಂದು ಗುಂಪಿಗೆ ಬೆಂಬಲವನ್ನು ಕೊಟ್ಟು ಮಾತನಾಡತಕ್ಕಂಥ ಧಾಟಿ ಕುಮಕ್ಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ಕಡೆಯ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅಂಕಿಸಂಖ್ಯೆಯ ಮೇಲೆ ಮಾತನಾಡಲಿಕ್ಕೆ ಇಲ್ಲಿರತಕ್ಕಂಥವರು ಬಂದಿಲ್ಲ. ಚರ್ಚೆಮಾಡಿದರೆ ವಿಷಯ ಕಲುಶಿತವಾಗುತ್ತದೆ ಎನ್ನುವ ಭಾವನೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಇದ್ದರೆ ಇಲ್ಲಿಯವರೆಗೆ ಆದ ಚರ್ಚೆಗೆ ಏತಕ್ಕೆ ಅವಕಾಶ ಕೊಟ್ಟಿರಿ ? ಚರ್ಚೆಯಾಗದೆಹೋದರೆ ಬೆಲೆಯೇ ಇರುವುದಿಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಮ್ಮ ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ತಾವು ಕಾರ್ಯಕ್ರಮದ ಪಟ್ಟಿಯಲ್ಲಿ ವಿಷಯವನ್ನು ಚರ್ಚೆಗೆ ತಂದಿರುವುದರಿಂದ ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಬಂದಿದ್ದೇವೆ. ಅದಕ್ಕೋಸ್ಕರವಾಗಿ ತಾವು ಇದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಮುಕ್ತಾಯಮಾಡಬೇಕು. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ಈಗ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾರೆ.

೫–೩೦ ಪಿ.ಎಂ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).–ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹಲವಾರು ಕಡೆ ಗೋಲಿಬಾರ್ ನಡೆದ ಬಗ್ಗೆ ಕೆಲವು ಕೋಮು ಘರ್ಷಣೆ ನಡೆದ ಬಗ್ಗೆ ಈ ಸದನದ ಹಿರಿಯ ನಾಯಕರು ಈಗಾಗಲೇ ಏನು ಘಟನೆಗಳು ನಡೆಯಿತು, ಅದರ ವಿವರಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ನೀವು ಹತ್ತು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಒಂಭತ್ತೇ ನಿಮಿಷದಲ್ಲಿ ಮುಗಿಸುತ್ತೇನೆ. ನಾನು ಈ ಸಂದರ್ಭದಲ್ಲಿ ಹೇಳಬೇಕಾದ ಒಂದೇ ಒಂದು ಮಾತು ಏನೆಂದರೆ, ಈ ರೀತಿ ಗೋಲಿಬಾರ್‌ಗಳು, ಘರ್ಷಣೆಗಳು, ಗಲಾಟೆಗಳು ಆದಾಗ ಯಾವುದೇ ಒಂದು ರಾಜಕೀಯ ಪಕ್ಷವನ್ನು, ಅದು ಯಾವುದೇ ಪಕ್ಷವಾಗಿರಬಹುದು, ಅದರ ಮೇಲೆ ಜವಾಬ್ದಾರಿಯನ್ನು ಹೊರಿಸುವುದು ಸರಿಯಲ್ಲ. ಆಗಾಗ್ಗೆ ಈ ಸಮಾಜದಲ್ಲಿ ಬಹಳ ವರ್ಷಗಳಿಂದ ಈ ರೀತಿ ಘರ್ಷಣೆ, ಗೊಂದಲಗಳು, ಗೋಲಿಬಾರ್‌ಗಳು ನಡೆಯುತ್ತವೆ. ಈ ಗೋಲಿಬಾರ್‌ಗಳಿಗೆ ಕಾರಣವೇನು ಎಂದು ನಾನು ತಿಳಿದುಕೊಂಡಿರುವ ಪ್ರಕಾರ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಈ ರೀತಿ ಗಲಾಟೆಗಳು ಆದಾಗ ಪ್ರಾಮಾಣಿಕವಾಗಿ ತಡೆಗಟ್ಟುವ ಕೆಲಸ ಮಾಡುವುದಕ್ಕೆ ಕೈಬಿಡದೆ ಕೆಲವು ರಾಜಕಾರಣಿಗಳು ಮಧ್ಯೆ ಮಧ್ಯೆ ಪ್ರವೇಶ ಮಾಡುವುದರಿಂದ ಪೋಲೀಸ್ ಅಧಿಕಾರಿಗಳು ಸ್ವತಂತ್ರವಾಗಿ ಕೆಲಸ ಮಾಡದೇ ಇರುವ ಪರಿಣಾಮವಾಗಿ ಈ ರೀತಿ ಘರ್ಷಣೆಗಳು ಆಗಾಗ್ಗೆ ನಡೆಯುತ್ತವೆ ಎಂದು ನಾನು ಭಾವಿಸಿದ್ದೇನೆ. ಬಹಳ ವರ್ಷಗಳಿಂದ ಕೆಲವು ಜನಾಂಗದವರನ್ನು ತೃಪ್ತಿಪಡಿಸುವುದಕ್ಕೋಸ್ಕರವಾಗಿ ಕೆಲವು ರಾಜಕಾರಣಿಗಳು ಈ ರೀತಿಯ ಗೊಂದಲಮಯ ವಾತಾವರಣಕ್ಕೆ ಕಾರಣಕರ್ತರಾಗಿದ್ದಾರೆ. ಅವರೆಲ್ಲರೂ ಒಟ್ಟಿಗೆ ಕುಳಿತುಕೊಂಡು ಯೋಚನೆ ಮಾಡಿ ಈ ರೀತಿ ಘರ್ಷಣೆ ಆಗಬಾರದು ಎಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದಾಗ ಬಹುಶಃ ಈ ರೀತಿಯ ಗಲಾಟೆಗಳು ಈ ರಾಜ್ಯದಲ್ಲಿ ಆಗಲಿ, ದೇಶದಲ್ಲಿ ಆಗಲಿ ನಡೆಯುವುದಕ್ಕೆ ಸಾಧ್ಯವಿಲ್ಲವೆಂದು ನಾನು ಭಾವಿಸಿದ್ದೇನೆ. ಸ್ವಾಮಿ, ಈಗ ಆಳಂದಾದಲ್ಲಿ, ರಾಮನಗರದಲ್ಲಿ ಗಲಾಟೆ ಆಗಿರುವುದು ನಮ್ಮ ಮುಂದೆ ಇರುವ ವಿಷಯ. ಅಲ್ಲಿ ಗೋಲಿಬಾರ್ ಆಗಿದೆ. ನಾನು ತುಂಬಾ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಏನೆಂದರೆ ಬಹುಸಂಖ್ಯಾತರು ಹಬ್ಬಹರಿದಿನಗಳನ್ನು ಆಚರಿಸಿದಂಥ ಸಂದರ್ಭದಲ್ಲಿ, ಮೆರವಣಿಗೆ ಮಾಡಿದಂಥ ಸಂದರ್ಭದಲ್ಲಿ ಈ ರೀತಿಯ ಗಲಾಟೆಗಳು ಈ ರಾಜ್ಯದಲ್ಲಿ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದೇಶದಲ್ಲಿ ಆಗುತ್ತಿರುವಂಥಾದ್ದು ಅಂಕಿಅಂಶಗಳ ಪ್ರಕಾರ ನಮಗೆ ಗೊತ್ತಿದೆ. ಆದರೆ ಅಲ್ಪಸಂಖ್ಯಾತರು ಯಾರು ಇದ್ದಾರೆ ಅವರ ಒಂದು ಅಭಿವೃದ್ಧಿಗೋಸ್ಕರ ಏನೇನು ಮಾಡುವುದಕ್ಕೆ ಸಾಧ್ಯ ಇದೆ, ಅವರಿಗೆ ಯಾವ ಯಾವ ಸೌಲಭ್ಯಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಪ್ರಾಮಾಣಿಕವಾಗಿ ಸ್ವಾತಂತ್ರ್ಯ ಬಂದಾಗಿನಿಂದ ಮಾಡುತ್ತಿದ್ದೇವೆ. ಆದರೆ ಅವರ ಮನಸ್ಸಿನಲ್ಲಿ ಬಹುಸಂಖ್ಯಾತರು ಮಾಡುವಂಥ ಯಾವುದೇ ಹಬ್ಬಹರಿದಿನವಾಗಲೀ ಅದು ನಮ್ಮದೂ ಕೂಡ ಎನ್ನುವ ಒಂದು ಭಾವನೆ ಬರುವ ರೀತಿಯಲ್ಲಿ ಅಂತಹ ಮನೋವೃತ್ತಿಯನ್ನು ಅವರಲ್ಲಿ ಮೂಡಿಸುವಲ್ಲಿ ಬಹುಶಃ ನಾವು ವಿಫಲ ರಾಗಿರುವುದರಿಂದ, ಅದಕ್ಕಾಗಿ ಇಂತಹ ಗಲಾಟೆಗಳು ನಡೆಯುತ್ತಾ ಇವೆ ಎಂಬ ಭಾವನೆ ಬರುತ್ತದೆ. ಅದೇರೀತಿ ನಮ್ಮ ರಾಜ್ಯದಲ್ಲಿ, ಈ ದೇಶದಲ್ಲಿ ಅಲ್ಪಸಂಖ್ಯಾತರು ಮಾಡುವಂತಹ ಯಾವುದೇ ಉತ್ಸವ, ಸಮಾರಂಭಗಳಲ್ಲಿ ಗಲಾಟೆಗಳು ಆಗಿರುವಂತಹ ಅಂಕಿಅಂಶಗಳನ್ನು ತೆಗೆದುಕೊಂಡಾಗ ಅವುಗಳ ಸಂಖ್ಯೆ ಬಹಳ ಕಡಿಮೆ ಇದೆಯೆಂದು ನಾನು ಭಾವಿಸಿದ್ದೇನೆ. ಆದರೆ ಬಹುಸಂಖ್ಯಾತರು ಇಂತಹ ಉತ್ಸವ ಗಳನ್ನು ಮಾಡಿದಂಥ ಸಂದರ್ಭದಲ್ಲಿ ಮಾತ್ರ ಈ ಗಲಾಟೆಗಳು ಆಗುತ್ತಿವೆಯಲ್ಲ, ಇದಕ್ಕೆ ಕಾರಣ ಏನು? ಇದಕ್ಕೆ ಕಾರಣವನ್ನು ಹುಡುಕುವಂಥ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಿದೆಯೇ? ಯಾರು ಇದಕ್ಕೆ ಕಾರಣಕರ್ತರಾಗಿದ್ದಾರೆ, ಅಂತಹವರನ್ನು ಹಿಡಿದು ಶಿಕ್ಷಿಸುವಂಥ ಪ್ರಾಮಾಣಿಕ ಪ್ರಯತ್ನ ಏನಾದರೂ ನಡೆದಿದೆಯೇ? ಈ ಕಡೆಗೆ ಗಮನ ಕೊಟ್ಟಾಗ ಅಂತಹ ಯಾವುದೇ ಪ್ರಾಮಾಣಿಕಪ್ರಯತ್ನ ಈ ದಿಕ್ಕಿನಲ್ಲಿ ಆಗಿಲ್ಲ ಎನ್ನುವ ಅನುಮಾನ ಸಹ ಬರುತ್ತದೆ. ಆಳಂದಾದಲ್ಲಿ ಗಲಾಟೆ ಏನು ನಡೆಯಿತು? ಕಾರಿಹುಣ್ಣಿಮೆಯ ಹಬ್ಬ ಅವೊತ್ತು ಇತ್ತು. ಪೂರ್ವಭಾವಿಯಾಗಿ ದಿನಾಂಕ ೨೧-೬-೮೬ರಂದು ಇದು ಎಂದೂ ಸಹ ನಿಶ್ಚಿತವಾಗಿತ್ತು. ಎತ್ತುಗಳನ್ನು ತೆಗೆದುಕೊಂಡು ರೈತರು, ಮುಸ್ಲಿಂ ಬಂಧುಗಳು ಮತ್ತು ಎಲ್ಲಾ ಜನಾಂಗದವರು ಮೆರವಣಿಗೆಯಲ್ಲಿ ಹೋಗುತ್ತಿದ್ದರು. ಆಗ ಒಂದೇ ಸಲಕ್ಕೆ ಇದ್ದಕ್ಕಿದ್ದ ಹಾಗೆ ಕಲ್ಲುಗಳು ಬೀಳಲ್ಪಟ್ಟವು. ಸನ್ಮಾನ್ಯ ಮಂತ್ರಿಯವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವು ದೇನೆಂದರೆ, ಈ ಕಲ್ಲುಗಳು ಎಲ್ಲಿಂದ ಬೀಳಲ್ಪಟ್ಟವು? ಯಾರು ಇದನ್ನು ಬೀರಿದ್ದುದು ಎಂಬುದನ್ನು ಅವರು ದಯವಿಟ್ಟು ತಿಳಿಸುವ ಪ್ರಯತ್ನ ಮಾಡಬೇಕು. ಇದೇರೀತಿ ರಾಮನಗರದಲ್ಲಿ ಅದು ಕಾಂಗ್ರೆಸ್ ಅಥವಾ ಜನತಾ ಮತ್ತೊಂದು ಪಕ್ಷವೆಂದು ಹೇಳುವುದಕ್ಕಿಂತ ಅಲ್ಲಿ ಕಲ್ಲುಗಳನ್ನು ಯಾರು ಬೀರಿದ್ದುದು? ಎಲ್ಲಿಂದ ಏತಕ್ಕೋಸ್ಕರ ಬೀರಿದ್ದುದು ಎಂದು ಅವರು ಹೇಳಬೇಕು. ಮೆರವಣಿಗೆ ಹೋಗುತ್ತದೆ ಎಂದು ದಿನಾಂಕ ಸಹ ನಿಶ್ಚಿತವಾದಮೇಲೆ, ಇಂತಹ ಸಾಮಾನ್ಯ ಗಲಾಟೆಗಳು ಇಂತಹ ಊರಿನಲ್ಲಿ ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಹಾಗಿದ್ದರೂ ಗುಪ್ತದಳದವರು ಏನು ವರದಿಯನ್ನು ಕೊಟ್ಟಿದ್ದರು? ಈ ರೀತಿ ಗಲಾಟೆ ಆಗುತ್ತದೆ ಎನ್ನುವ ಮಾಹಿತಿ ಅವರಿಗೆ ಗೊತ್ತಿದ್ದರೆ ಇದನ್ನು ತಡೆಯುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರೇನೋ ಎನ್ನುವ ಪ್ರಶ್ನೆ ಬರುತ್ತದೆ. ಜನತಾ ಸರ್ಕಾರ ಬಂದಮೇಲೆ ಗೋಲಿಬಾರ್‌ಗಳು, ಗುಂಪುಗಲಭೆಗಳು ಆಗುತ್ತಿವೆ ಎಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಇದು ಕ್ರಮೇಣ ಕಡಿಮೆಯಾಗುತ್ತಿದೆ. ಇಂತಹ ಸಣ್ಣಪುಟ್ಟ ಗಲಾಟೆಗಳು ನಡೆಯುವಾಗ ಅದನ್ನು ತಡೆಯುವಂಥ ಪ್ರಯತ್ನವನ್ನು ಈ ಕಡೆಯವರು ಮತ್ತು ಆ ಕಡೆಯವರು ಎಲ್ಲರೂ ಸೇರಿ ಮಾಡಬೇಕಾಗುತ್ತದೆ. ನಾನು ಹೇಳಬೇಕಾದ ಮುಖ್ಯ ಉದ್ದೇಶ ಏನೆಂದರೆ ಇವತ್ತಿನ ದಿವಸ ಎಲ್ಲಿ ಅಲ್ಪಸಂಖ್ಯಾತರು ಹಬ್ಬಹರಿದಿನಗಳನ್ನು ಮಾಡಿದಾಗ ಗಲಾಟೆ ಆಗದೇ ಇದ್ದದ್ದು ಬಹು ಸಂಖ್ಯಾತರು ಮಾಡುವಾಗ ಮಾತ್ರ ಏಕೆ ಗಲಾಟೆ ಆಗುತ್ತದೆ? ಆದ್ದರಿಂದ ನಾನು ನೇರವಾಗಿ ಒಂದು ಪ್ರಾಮಾಣಿಕ ದೃಷ್ಟಿಯಿಂದ ಇದನ್ನೂ ನೋಡುವ ಪ್ರಯತ್ನ ಮಾಡಿದಾಗ ಅಲ್ಪಸಂಖ್ಯಾತರ ಮನಸ್ಸಿ ನಲ್ಲಿ ಇಲ್ಲಿ ನಡೆಯುವಂಥ ಈ ಎಲ್ಲಾ ಉತ್ಸವಗಳು ನಮ್ಮದು ಎನ್ನುವ ಭಾವನೆ ಎಲ್ಲಿಯವರೆಗೆ ಅವರ ಮನಸ್ಸಿನಲ್ಲಿ ಮೂಡಿಸುವ ಪ್ರಯತ್ನಗಳು ನಡೆಯುವುದಿಲ್ಲವೋ ಅಲ್ಲಿಯವರೆಗೆ ಇಂತಹ ಗಲಾಟೆಗಳು ನಡೆಯುತ್ತಲೇ ಇರುತ್ತವೆ. ಇಂತಹ ಮನೋಭಾವನೆಯನ್ನು ಅವರಲ್ಲಿ ಮೂಡಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಬಹುಶಃ ಈ ರೀತಿಯ ಘರ್ಷಣೆಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಸ್ವಾತಂತ್ರ್ಯ ಬಂದು ೩೯ ವರ್ಷಗಳಾದರೂ ಇಂತಹ ವಾತಾವರಣವನ್ನು ಸೃಷ್ಟಿಸುವಂಥ ಪ್ರಯತ್ನ ಆಗಲಿಲ್ಲ. ಇದರ ಪರಿಣಾಮವಾಗಿ ಇಂತಹ ಘಟನೆಗಳು ನಡೆಯುತ್ತಲೇ ಇವೆ. ಆಳಂದಾದಲ್ಲಿ ನಡೆದ ಘಟನೆ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವನ್ನು ನಾವು ಮಾಡಬೇಕು. ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಗೋಲಿಬಾರ್ ನಿಲ್ಲಬೇಕು. ಪರಿಸ್ಥಿತಿ ಕೈಮೀರಿದಾಗ ಮಾತ್ರ ರಬ್ಬರ್ ಗುಂಡುಗಳನ್ನು ಉಪಯೋಗಿ ಸುತ್ತೇವೆ ಎಂಬ ಮಾತನ್ನು ಹೇಳಿದ್ದರು. ಅಲ್ಲಿ ಗಲಾಟೆ ನಡೆದಾಗ ಪರಿಸ್ಥಿತಿ ಕೈಮೀರಿ ಹೋಯಿತು ಆದ್ದರಿಂದ ಗುಂಡುಗಳನ್ನು ಉಪಯೋಗಿಸಿದರು ಎಂದು ಹೇಳುವುದಾದರೆ ಗುಂಪನ್ನು ಚದುರಿಸುವ ದೃಷ್ಟಿಯಿಂದ ಆಕಾಶಕ್ಕೆ ಗುರಿಯಿಟ್ಟು ಹಾರಿಸಿದರೋ? ಅಥವಾ ಹತೋಟಿ ಕೈಮೀರಿ ಹೋಗುತ್ತದೆ ಎನ್ನುವ ಸಂದರ್ಭ ಬಂದಾಗ ಆಕಾಶಕ್ಕೆ ಗುರಿಯಿಡುವ ಬದಲು ತಲೆಯ ಮೇಲಿನ ಭಾಗಕ್ಕೆ ಗುರಿ ಯಿಟ್ಟು ಹೊಡೆದರೋ? ಪ್ರಾಮಾಣಿಕ ಪ್ರಯತ್ನ ಮಾಡುವುದೇ ಇದ್ದರೆ ತೊಡೆಭಾಗದಲ್ಲಿ ಅಥವಾ

ಕಾಲಿನ ಭಾಗದಲ್ಲಿ ಗುಂಡು ಹಾರಿಸಬಹುದಿತ್ತು. ಹಾಗೇನಾದರೂ ಮಾಡಿದ್ದರೆ ಇಂತಹ ದುರ್ಘಟನೆಗಳು ಸಂಭವಿಸುತ್ತಿರಲಿಲ್ಲ, ಪ್ರಾಣಗಳನ್ನು ಉಳಿಸುವ ಪ್ರಯತ್ನವನ್ನಾದರೂ ಮಾಡಬಹುದಿತ್ತುಯೆಂದು ನಾನಾದರೂ ಭಾವಿಸುತ್ತೇನೆ. ಇಂತಹ ಸಂದರ್ಭದಲ್ಲಿ ಸದನದಲ್ಲಿ, ಗೋಲಿಬಾರ್ ಆದಾಗ, ಗಲಾಟೆ ಆದಾಗ ಯಾರಾದರೂ ಮಾತನಾಡಿದರೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ, ಏನು ಮಾಡಬೇಕಾಗಿತ್ತು ಎಂದು ವ್ಯಕ್ತಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ವಾತಾವರಣವನ್ನು ಕೆಡಿಸಿ, ರಾಜ್ಯದಲ್ಲಿ, ದೇಶದಲ್ಲಿ ಗೊಂದಲವನ್ನು ಉಂಟುಮಾಡಬೇಕೆಂದು ಜವಾಬ್ದಾರಿಯುತವಾದ ಯಾವುದೇ ಒಬ್ಬ ಶಾಸಕ ಹೇಳಲು ಸಾಧ್ಯವಿಲ್ಲ. ಇಂತಹ ಭಾವನೆಯನ್ನು ಒಬ್ಬ ಮುಖ್ಯಮಂತ್ರಿಯವರು ಹೊಂದುವುದಾದರೆ ಅದು ಸರಿಯಲ್ಲ. ಈ ಭಾಗದಲ್ಲಿರುವ ಯಾರೂ ಸಹ ಆ ರೀತಿ ಮಾತನಾಡಿಲ್ಲ ಎಂದು ಹೇಳುತ್ತಾ ನಾನು ನೇರವಾಗಿ ಎರಡು–ಮೂರು ಸಲಹೆಗಳನ್ನು ಕೊಡಬಯಸುತ್ತೇನೆ. ಯಾರು ಇದಕ್ಕೆ ಕಾರಣರಾಗಿದ್ದಾರೆ, ಯಾರು ಕಲ್ಲು ತೂರಿದ್ದಾರೆ, ಅವರು ಯಾರು ಎಂದು ತಿಳಿದು ಇದನ್ನು ತಡೆಯುವುದಕ್ಕೆ ನೀವು ಪ್ರಾಮಾಣಿಕ ಪ್ರಯತ್ನ ಮಾಡಿದರೆ ಅದಕ್ಕೆ ನಾವೆಲ್ಲರೂ ಸಹಕಾರ ಕೊಡುತ್ತೇವೆ. ಆದರೆ ಈ ರೀತಿ ಗಲಾಟೆ ಆಗುತ್ತದೆ ಎಂದು ಗೊತ್ತಿದ್ದರೂ ಸಹ, ಯಾರು ಇದನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ ಎಂದು ತಿಳಿದು ಅದನ್ನು ತಡೆಯುವಂಥ ಪ್ರಾಮಾಣಿಕ ಪ್ರಯತ್ನವನ್ನು ಅಧಿಕಾರದಲ್ಲಿರತಕ್ಕಂಥ ಜನರು ಎಲ್ಲಿಯವರೆಗೆ ಮಾಡುವುದಿಲ್ಲ ಅಲ್ಲಿಯವರೆಗೆ ಇದು ನಿಲ್ಲುವುದಿಲ್ಲ. ಯಾರು ತಪ್ಪು ಮಾಡಿದ್ದಾರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಪೋಲೀಸ್ ಅಧಿಕಾರಿಗಳಿಂದ ಆಗಿದ್ದರೆ ಪುನಃ ಪುನಃ ಇಂತಹ ಘಟನೆಗಳು ಗಲಾಟೆಗಳು ಆಗುತ್ತಿರಲಿಲ್ಲ, ಆದ್ದರಿಂದ ದಯಮಾಡಿ ಪೋಲೀಸ್ ಅಧಿಕಾರಿಗಳು ಸ್ವತಂತ್ರವಾಗಿ ಈ ರೀತಿ ಕೆಲಸ ಮಾಡುವುದಕ್ಕೆ ಬಿಡಿ. ಇಂತಹ ಗಲಾಟೆ ಆದಾಗ ಜವಾಬ್ದಾರಿ ಜಾಗದಲ್ಲಿರುವಂತಹ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಗಳನ್ನು ಕೈಕೊಳ್ಳಬೇಕು. ಇವರ ಜೊತೆಗೆ ಇನ್ನು ಮುಂದೆಯಾದರೂ ಇಂತಹ ಗಲಾಟೆಗಳು ಆಗದಂತೆ ಮುನ್ನೆಚ್ಚರಿಕೆಯನ್ನು ವಹಿಸಬೇಕು. ಕಳೆದ ೨೦–೨೫ ವರ್ಷಗಳಲ್ಲಿ ಜಾತ್ರೆ ಮತ್ತು ಉತ್ಸವಗಳು ನಡೆಯುವ ಕಡೆಗಳಲ್ಲಿ ಇಂತಹ ಎಷ್ಟು ಗಲಾಟೆಗಳು ನಡೆದಿವೆ ಎಂಬ ಬಗ್ಗೆ ಸರ್ಕಾರದವರು ಒಂದು ಪಟ್ಟಿ ಮಾಡಬೇಕು. ಈ ರೀತಿಯ ಗಲಾಟೆಗಳು ಆಗುವುದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಪತ್ತೆ ಮಾಡಬೇಕು. ಈಗ ನಾವು ಅಲ್ಪಸಂಖ್ಯಾತರಿಗೆ ಅನೇಕ ರೀತಿಯ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಆದರೂ ಸಹ ಅವರ ಮನಸ್ಸಿನಲ್ಲಿ ಬೇರೆ ರೀತಿಯ ಭಾವನೆಗಳು ಏನಾದರೂ ಇದ್ದರೆ, ಆ ಬಗ್ಗೆ ಅವರನ್ನು ಕರೆದು ಮಾತನಾಡಬೇಕು. ಮುಖ್ಯವಾಗಿ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಅವರಲ್ಲಿ ಮೂಡಿಸಬೇಕು, ಇಂತಹ ಗಲಾಟೆಗಳಲ್ಲಿ ಒಂದುವೇಳೆ ಬಹುಸಂಖ್ಯಾತರದು ತಪ್ಪು ಏನಾದರೂ ಇದ್ದರೆ, ಅವರಿಗೂ ಸಹ ಬುದ್ಧಿ ಹೇಳಬೇಕು. ಮುಖ್ಯವಾಗಿ ನಾವೆಲ್ಲರೂ ಒಂದೇ ಎಂದು ತಿಳಿದುಕೊಂಡು ಎಲ್ಲರೂ ಸಮಾಧಾನದಿಂದ ಬಾಳುವಂತಹ ಒಂದು ವ್ಯವಸ್ಥೆ ಆಗಬೇಕು. ಇಂತಹ ವ್ಯವಸ್ಥೆ ಆಗಬೇಕಾದರೆ, ಇಂತಹ ಸ್ಥಳಗಳಲ್ಲಿ ಯೋಗ್ಯರಾದಂಥ ಪೋಲೀಸ್ ಅಧಿಕಾರಿಗಳನ್ನು ನೇಮಕ ಮಾಡಬೇಕು. ಇಂತಹ ಘಟನೆಗಳು ನಡೆದಾಗ ನಾವು ಪೋಲೀಸ್ ಅಧಿಕಾರಿಗಳನ್ನು ಟೀಕೆ ಮಾಡುತ್ತೇವೆ. ಗಲಾಟೆ ಜಾಸ್ತಿಯಾಗಿ ಪೋಲೀಸ್‌ನವರು ಏನಾದರೂ ಗೋಲಿಬಾರ್ ಮಾಡಿದರೆ, ಅದಕ್ಕೆ ಪೋಲೀಸ್ ಅಧಿಕಾರಿಗಳೇ ಕಾರಣವೆಂದು ನಾವು ಹೇಳುತ್ತೇವೆ, ಯಾವುದೇ ರಾಜಕೀಯ ಪಕ್ಷಗಳ ಮುಖಂಡರಿಗೆ ಹೆದರದೆ ಕೆಲಸ ಮಾಡುವಂತಹ ಪೋಲೀಸ್ ಅಧಿಕಾರಿಗಳನ್ನು ಇಂತಹ ಜಾಗಗಳಿಗೆ ನೇಮಕ ಮಾಡಬೇಕು. ತನ್ನ ಕೆಲಸವನ್ನು ತಾನು ಸರಿಯಾಗಿ ಮಾಡಿದರೆ ಯಾವ ತೊಂದರೆಯೂ ಆಗುವುದಿಲ್ಲ, ತಾನು ಅಧಿಕಾರದಲ್ಲಿ ಮುಂದುವರೆಯುತ್ತೇನೆಂಬ ವಿಶ್ವಾಸ ಅವರಲ್ಲಿ ಬಂದಾಗ, ಅವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ರಾಜಕಾರಣಿಗಳ ಪ್ರಭಾವ ಏನಾದರೂ ಇವರ ಮೇಲೆ ಬಿದ್ದರೆ ಪಿಸ್ತೂಲು ಹಿಡಿದುಕೊಂಡ ಕೈಯಿಂದ ಯಾರ ಮೇಲಾದರೂ ಗೋಲಿಬಾರ್ ಆಗಬಹುದು. ಆಗ ಯಾವ ತಪ್ಪು ಮಾಡದವರು ಸಾವಿಗೀಡಾಗುತ್ತಾರೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಸರ್ಕಾರದವರು ಪೋಲೀಸ್ ಅಧಿಕಾರಿಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಳ್ಳಬೇಕು. ಕಟ್ಟುನಿಟ್ಟಿನ ಕ್ರಮ ಕೈಕೊಳ್ಳಲು ಅವರಿಗೆ ಅವಕಾಶವಿರಬೇಕು. ಹಬ್ಬಹರಿದಿನಗಳಲ್ಲಿ ಸರ್ಕಾರದವರು ಪೂರ್ವಭಾವಿಯಾಗಿ ತಮ್ಮ ತನಿಖಾದಳದವರಿಂದ ವರದಿಯನ್ನು ಪಡೆದುಕೊಂಡು ಅದರ ಆಧಾರದ ಮೇಲೆ ಕ್ರಮ ಕೈಕೊಳ್ಳಬೇಕು. ಕಲ್ಲುಗಳು ಬಿದ್ದ ಮೇಲೆ ಅವು ಎಲ್ಲಿಂದ ಬಿದ್ದವು ಎಂಬುದನ್ನು ತನಿಖೆ ಮಾಡುವುದಕ್ಕೆ ಬದಲು ಗಲಾಟೆ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಹೇಳಿದ ಪ್ರಕಾರ ನನ್ನ ಭಾಷಣವನ್ನು ೯ ನಿಮಿಷಗಳಲ್ಲಿಯೇ ಮುಗಿಸಿದ್ದೇನೆ. ಇಷ್ಟು ಸಮಯ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ನಮ್ಮ ನಾಯಕರು ಹೇಳಿದಂತೆ ಇದರ ಬಗ್ಗೆ ಹೆಚ್ಚಿನ ಚರ್ಚೆ ಮಾಡುವ ಅಗತ್ಯ ನನಗೆ ಅಷ್ಟಾಗಿ ಕಂಡುಬರುತ್ತಿಲ್ಲ. ಆದರೂ ಸಹ ನಿನ್ನೆಯ ದಿವಸ ಮೊನ್ನೆಯ ದಿವಸ ಬೆಳಗಾಂನ ಪ್ರಶ್ನೆ ಬಂದಿದ್ದರಿಂದ ನಾನು ಆ ಜಿಲ್ಲೆಯ ಶಾಸಕಿಯಾಗಿ ಈ ಬಗ್ಗೆ ಎರಡು ವಿಷಯಗಳನ್ನು ಸ್ಪಷ್ಟಪಡಿಸದಿದ್ದರೆ ತಪ್ಪಾಗುತ್ತದೆ. ಈ ಸಭೆಯಲ್ಲಿರುವಂತಹ ನನ್ನ ಎಂ.ಇ.ಎಸ್. ಬಂಧುಗಳು ಬಹಳವಾಗಿ ನಮ್ಮ ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಯ ಬಗ್ಗೆ ಮಾತನಾಡಿದಾಗ ನನ್ನ ಮನಸ್ಸಿಗೆ ಬಹಳ ಖೇದವಾಯಿತು. ಬೆಳಗಾಂನಲ್ಲಿ ಇತ್ತೀಚೆಗೆ ನಡೆದ ಗಲಾಟೆಯ ಸಂದರ್ಭದಲ್ಲಿ ನಾನು ಬೆಳಗಾಂನಲ್ಲಿಯೇ ಇದ್ದೆ. ಅಲ್ಲಿರುವಂತಹ ಮರಾಠಿ ಜನರು ಇಂತಹ ಗಲಾಟೆಗಳು ಆಗಬಾರದು ಎಂದು ನನಗೆ ಹೇಳಿದರು. ಆ ಗಲಾಟೆಯ ಸಂದರ್ಭದಲ್ಲಿ ರಕ್ಕಸಕೊಪ್ಪದಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಪೈಪ್‌ಗಳನ್ನು ಹಾಳುಮಾಡುವಂತಹ ಹೀನಕೃತ್ಯವನ್ನು ಮಾಡಿದರು. ಈ ಕೆಲಸ ಮಾಡಿದ್ದುದು ಯಾರು ಎಂಬುದು ಎಲ್ಲರಿಗೂ ಗೊತ್ತಿದೆ. ಇದೇ ಎಂ.ಇ.ಎಸ್. ಸದಸ್ಯರು ಮೊನ್ನೆ ಅಲ್ಲಿ ಶಾಲೆಯಲ್ಲಿ ಓದುತ್ತಿರುವ ಚಿಕ್ಕಮಕ್ಕಳ ಬಗ್ಗೆಯೂ ಸಹ ಮಾತನಾಡಿದರು. ಇದರ ಬಗ್ಗೆ ನಾನು ಸ್ಪಷ್ಟಪಡಿಸುವುದೇನೆಂದರೆ, ಅಲ್ಲಿನ ಕನ್ನಡ ಶಾಲೆಗಳಲ್ಲಿ ಓದುತ್ತಿರುವ ಮರಾಠಿ ಮಕ್ಕಳಿಗಾಗಲೀ ಮತ್ತು ಮರಾಠಿ ಶಾಲೆಗಳಲ್ಲಿ ಕಲಿಯುತ್ತಿರುವ ಕನ್ನಡ ಮಕ್ಕಳಿಗೆ ತಾವು ಮರಾಠಿಗರು ಇಲ್ಲವೇ ಕನ್ನಡಿಗರು ಎಂಬ ಭಾವನೆ ಬರುತ್ತಿಲ್ಲ. ಆದರೂ ಈ ಬಗ್ಗೆ ಎಂ.ಇ.ಎಸ್. ಸದಸ್ಯರು ಬಹಳ ಕಟುವಾಗಿ ಮಾತನಾಡಿದರು. ಅಲ್ಲಿನ ಮಕ್ಕಳಿಗೆ ಯಾವ ಭಾಷೆ ಕಲಿಯಬೇಕು ಅಥವಾ ಬಿಡಬೇಕು ಎಂಬ ಭಾವನೆ ಬರುವುದೇ ಇಲ್ಲ. ತಮಗೆ ಅನುಕೂಲವಾಗುವಂತಹ ಭಾಷೆಗಳನ್ನು ಗಡಿನಾಡು ಪ್ರದೇಶಗಳಲ್ಲಿರುವವರು ತಮ್ಮ ಮಕ್ಕಳಿಗೆ ಮೊದಲಿನಿಂದಲೂ ಕಲಿಸಿಕೊಂಡು ಬರುತ್ತಿದ್ದಾರೆ. ಈ ಒಂದು ಹಿನ್ನೆಲೆ ಇಟ್ಟುಕೊಂಡು ಬೆಳಗಾಂನಲ್ಲಿರುವ ಮರಾಠಿಗರು ಅನುಸರಿಸುತ್ತಿರುವ ಕೆಲವು ವಿಷಯಗಳನ್ನು ಇಲ್ಲಿ ಹೇಳದಿದ್ದರೆ ತಪ್ಪಾಗುತ್ತದೆ. ಬೆಳಗಾಂನಲ್ಲಿರುವಂತಹ ಮರಾಠಿಗರು ತಮ್ಮ ಹೆಣ್ಣು ಮಕ್ಕಳಿಗೆ ಮರಾಠಿಯನ್ನು ಮತ್ತು ಗಂಡುಮಕ್ಕಳಿಗೆ ಕನ್ನಡವನ್ನು ಕಲಿಸುತ್ತಾರೆ. ತಮ್ಮ ಗಂಡು ಮಕ್ಕಳು ತಮ್ಮ ಆಸ್ತಿಯನ್ನು ನೋಡಿಕೊಳ್ಳಲು ಅನುಕೂಲವಾಗಲಿ ಎಂದು ಕನ್ನಡವನ್ನು ಕಲಿಸುತ್ತಾರೆ. ಅದೇರೀತಿ ತಮ್ಮ ಹೆಣ್ಣುಮಕ್ಕಳನ್ನು ಮುಂಬೈ ಅಥವಾ ಬೇರೆ ಮರಾಠಿ ಭಾಷೆ ಮಾತನಾಡುವ ಜಾಗಗಳಿಗೆ ಕೊಟ್ಟು ಮದುವೆ ಮಾಡಿದರೆ, ಆ ಜನರ ಜೊತೆ ಇರಲು ತೊಂದರೆ ಆಗಬಾರದೆಂದು ಮರಾಠಿಯನ್ನು ಕಲಿಸುತ್ತಾರೆ. ಇಂತಹ ಒಂದು ಪದ್ಧತಿ ಅಲ್ಲಿನ ಅನೇಕ ಮನೆತನಗಳಲ್ಲಿರುವುದನ್ನು ನಾವು ನೋಡಬಹುದಾಗಿದೆ. ಅಲ್ಲಿನ ಕನ್ನಡಿಗರು ಮತ್ತು ಮರಾಠಿಗರು ಹೀಗೆ ಯಾವ ಗಲಾಟೆಯೂ ಇಲ್ಲದೆ ಜೀವನ ಮಾಡುತ್ತಿದ್ದರೂ ಸಹ ಭಾಷೆ ವಿಷಯದಲ್ಲಿ ಕೆಲವು ಮರಾಠಿಗರು ದಾಂಧಲೆ ಎಬ್ಬಿಸುತ್ತಿರುವುದನ್ನು ನೋಡಿ ಅಲ್ಲಿರುವ ಜನರು ಬಹಳ ಬೇಸತ್ತಿದ್ದಾರೆ. ಈಗ ನಾವು ಅಲ್ಲಿ ಸುಖವಾಗಿದ್ದೇವೆಂದು ಅಲ್ಲಿರುವಂತಹ ಮರಾಠಿ ಜನರೇ ಹೇಳಿಕೆ ಕೊಟ್ಟಿದ್ದಾರೆ. ಆದರೂ ಈ ಎಂ.ಇ.ಎಸ್. ಸದಸ್ಯರು ಇಲ್ಲಿ ಬೇರೆ ರೀತಿಯಲ್ಲಿ ಹೇಳಿದ್ದಾರೆ, ಅಲ್ಲಿ ಗಲಾಟೆ ನಡೆದ ಸಂದರ್ಭದಲ್ಲಿ ಅಲ್ಲಿನ ಪೋಲೀಸರು ನಿಜವಾಗಿಯೂ ಸ್ತುತ್ಯ ಕಾರ್ಯ ಮಾಡಿದ್ದಾರೆ. ಅವರು ಸಕಾಲಿಕ ಕ್ರಮ ಕೈಕೊಳ್ಳದಿದ್ದರೆ ಅಲ್ಲಿನ ಜನರಿಗೆ ಇನ್ನೂ ಎಂಟು ದಿನಗಳ ಕಾಲ ಕುಡಿಯುವ ನೀರು ಸಿಗುತ್ತಿರಲಿಲ್ಲ. ಗಡಿ ಬಗ್ಗೆ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆಯೇ ಇರಲಿಲ್ಲ. ಆದರೂ ಮಾಡಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮುಂಬೈಗೆ ಹೋಗಿ ಅಲ್ಲಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿಕೊಂಡು ಬಂದ ಮೇಲೆ ಅಲ್ಲಿನ ಸಮಸ್ಯೆಗಳು ತೀರ್ಮಾನವಾಗಿವೆ. ಆದ್ದರಿಂದ ಇಲ್ಲಿ ಎಂ.ಇ.ಎಸ್. ಸದಸ್ಯರು ಏನೇ ಹೇಳಿದರೂ ಸಹ ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವುದಿಲ್ಲವೆಂಬ ಮಾತನ್ನು ಈ ಸಭೆಯಲ್ಲಿ ಕರ್ನಾಟಕ ರಾಜ್ಯದಲ್ಲಿರುವಂತಹ ನಾಲ್ಕು ಕೋಟಿ ಜನರ ಪರವಾಗಿ ಇಲ್ಲಿ ಹೇಳುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಆದ್ದರಿಂದ ಅವರು ಈ ಬಗ್ಗೆ ಎಷ್ಟು ಮಾತನಾಡಿದರೂ ಅದು ವ್ಯರ್ಥವಾಗುತ್ತದೆ. ಒಂದು ವಿಷಯವನ್ನು ಎಂ.ಇ.ಎಸ್. ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಅವರು ಈಗಾಗಲೇ ಎರಡು ಸ್ಥಾನಗಳನ್ನು ಕಳೆದುಕೊಂಡಿದ್ದಾರೆ. ಅವರು ಇದೇರೀತಿ ಮುಂದುವರೆದರೆ ಉಳಿದ ೩ ಸ್ಥಾನಗಳನ್ನು ಸಹ ಅವರು ಕಳೆದುಕೊಳ್ಳುತ್ತಾರೆಂದು ಸ್ಪಷ್ಟಪಡಿಸುತ್ತಿದ್ದೇನೆ. ಈ ವಿಚಾರದಲ್ಲಿ ಹೆಚ್ಚಿನ ಚರ್ಚೆ ಬೇಡ ಎಂದು ನಮ್ಮ ನಾಯಕರು ನಿರ್ದೇಶನ ಕೊಟ್ಟಿದ್ದಾರೆ. ಈಗ ನಡೆದಿರುವ ಘಟನೆಯಿಂದ ಕೆಲವರಿಗೆ ಪ್ರಾಣ ಹಾನಿಯಾಗಿದ್ದರೆ ಮತ್ತೆ ಕೆಲವರಿಗೆ ಬೇರೆ ರೀತಿಯಿಂದ ತೊಂದರೆ ಆಗಿದೆ. ಇನ್ನು ಮುಂದೆ ಈ ರೀತಿ ಆಗದಂತೆ ಸರ್ಕಾರದವರು ಎಚ್ಚರಿಕೆ ವಹಿಸಬೇಕು

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಲ್ಲಿ ನಡೆದಂಥ ಜನರ ಪ್ರಾಣಹಾನಿಗೆ ಹೊರಗಡೆಯಿಂದ ಬಂದಂಥ ಈ ಮರಾಠಿಗರೇ ಕಾರಣ ಹೊರತು ಅಲ್ಲಿರುವಂಥ ಕನ್ನಡಿಗರು ಕಾರಣರಲ್ಲವೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ).—ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಈ ರಾಜ್ಯದ ಜನರ ಮನಸ್ಸಿನ ಮೇಲೆ ಬೇರೆ ತರಹದ ಭಾವನೆ ಬರದಂತೆ ಮಾತನಾಡಬೇಕೆಂದು ಈಗತಾನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಕಳೆದ ಜೂನ್ ೨೧ರಂದು ಆಳಂದ್‌ನಲ್ಲಿ ಗೋಲಿಬಾರ್ ನಡೆಯಿತು. ಅದೇ ರೀತಿ ರಾಮನಗರದಲ್ಲಿ ಮತ್ತು ಬೆಳಗಾಂನಲ್ಲಿ ಸಹ ನಡೆದಿದೆ. ಈ ಘಟನೆಗಳ ಬಗ್ಗೆ ಮಾನ್ಯ ಬಂಗಾರಪ್ಪನವರು, ಮಾನ್ಯ ವೀರಪ್ಪಮೊಯಿಲಿ ಅವರು ಹಾಗೂ ಇನ್ನಿತರ ಹಿರಿಯ ಸದಸ್ಯರು ಈಗಾಗಲೇ ವಿವರವಾಗಿ ಮಾತನಾಡಿದ್ದಾರೆ. ಪಂಜಾಬ್, ಅಹಮದಾಬಾದ್ ಹಾಗೂ ಬೇರೆ ರಾಜ್ಯಗಳಲ್ಲಿ ನಡೆದಂಥ ಘಟನೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಆಗಿಲ್ಲ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದರು. ನಮ್ಮ ರಾಜ್ಯದಲ್ಲಿ ಆ ತರಹದ ಘಟನೆಗಳು ನಡೆದಿಲ್ಲವೆಂಬುದು ತುಲನಾತ್ಮಕವಾಗಿ ವಿಚಾರ ಮಾಡಿದಾಗ ಕಂಡುಬಂದರೂ ಸಹ ಈಗ ನಡೆದಿರುವ ಘಟನೆಗಳ ಹಿನ್ನೆಲೆಯನ್ನು ನಾವು ವಿಚಾರ ಮಾಡಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬಡವರು ಹಾಗೂ ಅಲ್ಪಸಂಖ್ಯಾತರು ಏನಿದ್ದಾರೆ, ಅವರ ಆಸ್ತಿಯನ್ನು ಮತ್ತು ಪ್ರಾಣವನ್ನು ಸಂರಕ್ಷಣೆ ಮಾಡುವಂತಹ ಒಂದು ಜವಾಬ್ದಾರಿ ಈ ಸರ್ಕಾರದ ಮೇಲಿದೆ. ನಮ್ಮ ರಾಜ್ಯದ ಜನರು ಶಾಂತಿಯುತವಾಗಿ ಜೀವನ ನಡೆಸಿಕೊಂಡು ಹೋಗುತ್ತಿದ್ದಾರೆ. ಆದರೂ ಸಹ ಇಂತಹ ಘಟನೆಗಳು ನಡೆಯಲು ಕಾರಣವೇನು ? ಈ ಘಟನೆಗಳು ನಡೆಯಲು ಇದ್ದಂಥ ಹಿನ್ನೆಲೆಯಾದರೂ ಏನು ? ಈ ಬಗ್ಗೆ ನಾವು ಇಲ್ಲಿ ವಿವರವಾಗಿ ಚರ್ಚೆ ಮಾಡಬೇಕಾಗುತ್ತದೆ. ಬೇರೆ ರಾಜ್ಯಗಳಲ್ಲಿ ನಡೆಯುವಂತಹ ಘಟನೆಗಳು ನಮ್ಮ ರಾಜ್ಯದಲ್ಲಿ ನಡೆಯುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ಆಳಂದ್‌ನಲ್ಲಿ ನಡೆದಂಥ ಘಟನೆಗೆ ಕಾರಣವೇನು ? ನನಗೆ ತಿಳಿದಂತೆ ೧೯೫೦ ರಿಂದ ಇಲ್ಲಿಯವರೆಗೆ ಗುಲ್ಬರ್ಗದಲ್ಲಿ ಹಾಗೂ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಪೋಲೀಸ್ ಗೋಲಿಬಾರ್‌ನಿಂದ ಯಾರೂ ಸತ್ತಿರಲಿಲ್ಲ. ಅಲ್ಲಿ ಎಲ್ಲರೂ ಶಾಂತಿಯುತವಾಗಿ ಜೀವನ ನಡೆಸುತ್ತಿದ್ದಾರೆ. ಇಂತಹ ಕಡೆಯಲ್ಲಿ ಗೋಲಿಬಾರ್ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಗುಲ್ಬರ್ಗಕ್ಕೆ ಭೇಟಿ ಕೊಟ್ಟಿದ್ದ ಸಮಯದಲ್ಲಿ ಈ ಘಟನೆ ನಡೆದ ಆಳಂದಕ್ಕೂ ಸಹ ಭೇಟಿ ಕೊಟ್ಟು ನೊಂದವರ ಬಗ್ಗೆ ವಿಚಾರಿಸಿದ್ದರೆ, ಇವರನ್ನು ಅರಿಸಿ ಕಳುಹಿಸಿಕೊಟ್ಟ ಜನರಿಗೆ ಇವರ ಬಗ್ಗೆ ವಿಶ್ವಾಸ ಹುಟ್ಟುತ್ತಿತ್ತು. ಆದರೆ ಈ ಕೆಲಸ ಮಾಡಲಿಲ್ಲ. ಆಳಂದದಲ್ಲಿ ೩ ಜನ ಸತ್ತರು. ಮಾನ್ಯ ಗೃಹ ಮಂತ್ರಿಗಳಾದ ಶ್ರೀ ರಾಚಯ್ಯನವರು ಸಹ ಅಲ್ಲಿಗೆ ಭೇಟಿ ಕೊಡಲಿಲ್ಲ. ಆದರೆ ಬೆಂಗಳೂರಿಗೆ ಹತ್ತಿರ ಇರುವ ರಾಮನಗರಕ್ಕೆ ಭೇಟಿ ಕೊಟ್ಟರು.

ಎಲ್ಲಾ ಕಡೆಗೂ ರಕ್ಷಣೆ ಕೊಟ್ಟಿದ್ದೇವೆ. ಎಲ್ಲರನ್ನು ಸಂರಕ್ಷಣೆ ಮಾಡಿದ್ದೇವೆಂದು ಮಾತ್ರ ತಾವು ಹೇಳಿಕೊಳ್ಳುತ್ತೀರಿ. ನಮ್ಮ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ನನಗೆ ಬುದ್ಧಿ ಬಂದ ಲಾಗಾಯ್ತು ಯಾವಾಗಲೂ ಸಹ ಗೋಲಿಬಾರ್ ಆಗಿದ್ದುದು ಗೊತ್ತಿಲ್ಲ. ರಾಜ್ಯದ ಅನೇಕ ಭಾಗಗಳಲ್ಲಿ ಘರ್ಷಣೆಗಳು ಆಗಿ ಈ ಸದನದಲ್ಲಿ ನಾವು ಚರ್ಚೆಯನ್ನು ಮಾಡಿದ್ದೇವೆ. ಆದರೆ ನಮ್ಮ ಭಾಗದಲ್ಲಿ ಹಿಂದೆ ಯಾವಾಗಲೂ ಈ ರೀತಿ ಘರ್ಷಣೆಯಾಗಿ ಗೋಲಿಬಾರ್ ಆಗಿರಲಿಲ್ಲ. ಅಂತಹದ್ದರಲ್ಲಿ ಈಗ ಆಳಂದ್‌ನಲ್ಲಿ ಗೋಲಿಬಾರ್ ಏತಕ್ಕೆ ಆಯಿತು ? ಆ ಭಾಗದಲ್ಲಿರತಕ್ಕಂಥ ಜನ ಬಹಳ ಹಿಂದುಳಿದ ಜನ. ಆಳಂದ್ ಬೆಂಗಳೂರು ನಗರಕ್ಕೆ ಸುಮಾರು ೬೦೦ ಕಿ. ಮೀ. ಇದೆ. ಈ ಪ್ರದೇಶದಲ್ಲಿ ಏತಕ್ಕೆ ಘರ್ಷಣೆ ಆಯಿತು ಎನ್ನುವುದನ್ನು ತಾವು ಒಬ್ಬ ರಾಜ್ಯದ ಗೃಹ ಸಚಿವರಾಗಿ ತಿಳಿದುಕೊಳ್ಳಬೇಕಾದುದು ನಿಮ್ಮ ಕರ್ತವ್ಯ ಇದೆ. ನೀವು ಆ ಪ್ರದೇಶಕ್ಕೆ ಭೇಟಿ ಕೊಡಬೇಕಾಗಿತ್ತು. ನೀವು ನಮ್ಮ ಭಾಗಕ್ಕೆ ಭೇಟಿ ಕೊಡಲೇ ಇಲ್ಲ. ನಾನು ಆಳಂದ್‌ಗೆ ಭೇಟಿ ಕೊಡಬೇಕೆಂದು ನಿಮ್ಮ ಮನಸ್ಸಿಗೆ ಬರಲೇ ಇಲ್ಲ. ನಾನು ಆ ಜಿಲ್ಲೆಯಿಂದ ಬಂದವನಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಲೇಬೇಕಾಗುತ್ತದೆ. ಅಲ್ಲಿರತಕ್ಕಂಥ ಜನತೆಯ ಭಾವನೆಗಳನ್ನು ಆ ಜನರ ಅನಿಸಿಕೆಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡಲೇ ಬೇಕಾಗುತ್ತದೆ. ಯಾವುದೋ ಒಂದು ಅನುಭವದ ಹಿನ್ನೆಲೆಯಲ್ಲಿ ನಾವು ಇಲ್ಲಿ ಒಂದು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರಾದಂಥ ಯಡಿಯೂರಪ್ಪನವರು ಮಾತನಾಡುತ್ತಾ ಕೆಲವು ಮಾತುಗಳನ್ನು ಹೇಳಿದರು. ಆ ವಿಷಯಕ್ಕೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವನ್ನು ನಾನು ಮತ್ತೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅಳಂದ್‌ನಲ್ಲಿ ಆದಂತೆ ಗೋಲಿ ಬಾರ್ ರಾಮನಗರದಲ್ಲಿ ಆಯಿತು. ಬೆಳಗಾಂ ನಗರದಲ್ಲಿ ಆಯಿತು. ಆದರೆ ನಾನು ಬೆಳಗಾಂ ಮತ್ತು ರಾಮನಗರಗಳ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ನಮ್ಮ ಹೈದ್ರಾಬಾದ್ ಕರ್ನಾಟಕ ಮತ್ತು ಬಾಂಬೇ ಕರ್ನಾಟಕ ಭಾಗದಲ್ಲಿ ಪ್ರತಿ ವರ್ಷ ಕಾರ್ ಹುಣ್ಣಿಮೆ ಹಬ್ಬವನ್ನು ಆಚರಣೆ ಮಾಡುತ್ತಾರೆ. ಆ ಕಾರ್ ಹುಣ್ಣಿಮೆಯಲ್ಲಿ ಎತ್ತಿನ ಗಾಡಿಗಳನ್ನು ತಾ ಮುಂದು ನಾ ಮುಂದು ಎಂದು ಓಡಿಸಿಕೊಂಡು ಹೋಗುತ್ತಿರುತ್ತಾರೆ. ಈ ಕಾರ್ ಹುಣ್ಣಿಮೆ ಹಬ್ಬವನ್ನು ಆಚರಣೆ ಮಾಡತಕ್ಕಂಥ ಕಾಲದಲ್ಲಿ ದೊಡ್ಡ ದೊಡ್ಡ ಗೌಡರ ಮನೆಗಳವರು ಮತ್ತು ಒಕ್ಕಲಿಗರ ಮನೆತನದವರು ಭಾಗವಹಿಸಿ ಹಬ್ಬವನ್ನು ಆಚರಣೆ ಮಾಡುವುದು ಒಂದು ರೂಢಿ. ಈ ಅಳಂದ್ ನಗರದಲ್ಲಿ ಸುಮಾರು ೪೦ ಸಾವಿರ ಜನಸಂಖ್ಯೆ ಇದೆ. ಇದರಲ್ಲಿ ಸುಮಾರು ೫೦ ಪರ್ಸೆಂಟ್‌ನಷ್ಟು ಅಲ್ಪಸಂಖ್ಯಾತ ಕೋಮಿನವರು ಇರಬಹುದು ಇವರೆಲ್ಲರೂ ಸಹ ಆ ಕಾರ್ ಹುಣ್ಣಿಮೆ ಹಬ್ಬದ ದಿವಸ ಭಾಗವಹಿಸುತ್ತಾರೆ. ಇವರಲ್ಲಿ ಕೆಲವರು ಅಂಗಡಿಗಳನ್ನು ಮತ್ತು ಪಾನ್ ಅಂಗಡಿಗಳನ್ನು ಇಟ್ಟಿರುತ್ತಾರೆ. ಜೂನ್ ೨೧ನೇ ತಾರೀಖಿನ ದಿವಸ ಒಬ್ಬ ಹೆಣ್ಣು ಮಗಳು ಈ ಹಬ್ಬವನ್ನು ನೋಡುವುದಕ್ಕೆ ಬಂದಿದ್ದಳು. ಈ ಹೆಣ್ಣು ಮಗಳು ಗರ್ಭಿಣಿ ಹೆಣ್ಣು ಮಗಳು. ಈಕೆ ದಾರಿಯಲ್ಲಿ ಹೋಗತಕ್ಕಂಥ ಕಾಲದಲ್ಲಿ ಒಬ್ಬ ಹೆಡ್‌ಕಾನ್‌ಸ್ಟೇಬಲ್ ಅಥವಾ ಸಬ್ ಇನ್‌ಸ್ಪೆಕ್ಟರ್ ಇವರು ಆ ಗರ್ಭಿಣಿ ಹೆಣ್ಣು ಮಗಳಮೇಲೆ ಲಾಟಿ ಚಾರ್ಜ್ ಮಾಡಿದರು. ಈ ಒಂದೇ ಒಂದು ಕಾರಣಕ್ಕಾಗಿ ಅಲ್ಲಿ ಗೊಂದಲದ ವಾತವರಣ ಶುರುವಾಯಿತು. ಸದಸ್ಯರಾದಂಥ ಯಡಿಯೂರಪ್ಪ ನವರು ಹೇಳಿದ್ದಕ್ಕೂ ಅಲ್ಲಿ ನಡೆದಿರುವಂತಾದ್ದಕ್ಕೂ ಸ್ವಲ್ಪ ಭಿನ್ನಾಭಿಪ್ರಾಯ ಇದೆ. ಅದೇನೆಂದರೆ ಬಹುಸಂಖ್ಯಾತರು ಆಚರಣೆ ಮಾಡತಕ್ಕಂಥ ಹಬ್ಬಕ್ಕೆ ಈ ಅಲ್ಪಸಂಖ್ಯಾತರು ಅಡಚಣೆಯನ್ನುಂಟು ಮಾಡಿದರು ಎಂದು ಅವರು ಹೇಳಿದರು. ಆದರೆ ಆ ದಿವಸ ಅಳಂದ್‌ನಲ್ಲಿ ಎಲ್ಲಾ ಅಲ್ಪಸಂಖ್ಯಾತರ ಅಂಗಡಿಗಳು ಪಾನ್ ಬೀಡಾ ಶಾಪ್‌ಗಳು ಸಹ ಬಂದ್ ಆಗಿದ್ದವು. ಅವರೆಲ್ಲರೂ ಸಹ ಕಾರ್ ಹುಣ್ಣಿಮೆ ಯಲ್ಲಿ ಭಾಗವಹಿಸಿದ್ದರು..........

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಮಾನ್ಯ ಅಧ್ಯಕ್ಷರೇ ನಾನು ಆ ಮಾತನ್ನೇ ಹೇಳಲಿಲ್ಲ.......

ಅಧ್ಯಕ್ಷರು.—ತಾವೇತಕ್ಕೆ ಮಧ್ಯ ಪ್ರವೇಶ ಮಾಡಿ ಮಾತನಾಡುತ್ತೀರಿ ? ತಾವು ದಯಮಾಡಿ ಕುಳಿತುಕೊಳ್ಳಿ....

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ನಾನು ಆ ಮಾತನ್ನೇ ಹೇಳಲಿಲ್ಲ. ಮಾನ್ಯ ಸದಸ್ಯರು ಹೇಳುತ್ತಿರುವುದು ಕಡತಕ್ಕೆ ಹೋಗುತ್ತಿದೆ.........

ಅಧ್ಯಕ್ಷರು.—ನಾನು ಪರ್ಮಿಷನ್ ಕೊಟ್ಟಾಗ ಮಾತ್ರ ತಾವು ಮಾತನಾಡಬೇಕು. ಈ ರೀತಿ ಮಧ್ಯ ಮಧ್ಯ ಎದ್ದು ನಿಂತು ಮಾತನಾಡುವುದು ಸರಿಯಲ್ಲ......

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಮಾನ್ಯ ಸದಸ್ಯರು ಹೇಳಿದ್ದುದು ರೆಕಾರ್ಡ್‌ಗೆ ಹೋಗುತ್ತಿದೆ. ನಾನು ಆ ರೀತಿ ಮಾತನಾಡಲಿಲ್ಲ. ದಯವಿಟ್ಟು ತಾವು ಪ್ರೊಸಿಡಿಂಗ್ಸ್ ತರಿಸಿನೋಡಿ....

ಅಧ್ಯಕ್ಷರು.—ಈ ರೀತಿ ಆದರೆ ಕಷ್ಟವಾಗುತ್ತದೆ.......

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ನಾನು ಕಂಡಂತೆ ಈ ರೀತಿಯ ಗೋಲಿಬಾರ್ ಯಾವಾಗಲೂ ಆಗಿಲ್ಲ. ೧೯೫೫ನೇ ಇಸವಿಯಲ್ಲಿ ಹೈದ್ರಾಬಾದ್ ಸಂಸ್ಥೆಯ ದುರ್ಲಾ ರಾಮಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು. ಶ್ರೀಮಾನ್ ರಮಾನಂದ ತೀರ್ಥರವರು ಎಂ. ಪಿ. ಯಾಗಿದ್ದರು. ಆಗಲೂ ಸಹ ಆ ಭಾಗದಲ್ಲಿ ಇಂತಹ ಘರ್ಷಣೆಗಳು ನಡೆದಿರಲಿಲ್ಲ. ಅದಾದ ನಂತರ ೧೯೭೨ನೇ ಇಸವಿಯಲ್ಲಿ ಒಂದು ಸಲ ಮಾತ್ರ ಘರ್ಷಣೆಯಾಗಿತ್ತು ಈ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಹಾಗೂ ಮಾನ್ಯ ಗೃಹ ಸಚಿವರ ಗಮನಕ್ಕೆ ತರಬಯಸುತ್ತೇನೆ. ಅಳಂದ್‌ನಲ್ಲಿ ಈ ಗಲಭೆಗಳಾಗುವುದಕ್ಕೆ ಕಾರಣವೇನೆಂದರೆ ಅಲ್ಪಸಂಖ್ಯಾತರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡುತ್ತಿದ್ದಾರೆ ಎನ್ನುವ ಕಾರಣಕ್ಕಾಗಿ ಆಯಿತೆಂದು ಕೆಲವರ ವಾದ ಇದೆ. ಆ ಕಾರ್ ಹುಣ್ಣಿಮೆ ಹಬ್ಬವನ್ನು ಆಚರಣೆ ಮಾಡುವಂತಹ ಕಾಲದಲ್ಲಿ ಅಲ್ಪಸಂಖ್ಯಾತರು ತಮ್ಮ ಅಂಗಡಿಗಳನ್ನೆಲ್ಲಾ ಮುಚ್ಚಿ ನಮ್ಮ ಜೊತೆಯಲ್ಲಿ ಪಾಲ್ಗೊಂಡಿದ್ದರು. ಯಾವುದೋ ಒಂದು ಸಣ್ಣ ಕಾರಣಕ್ಕಾಗಿ ಒಬ್ಬ ಗರ್ಭಿಣಿ ಹೆಣ್ಣು ಮಗಳ ಮೇಲೆ ಪೋಲೀಸಿನವರು ಲಾಠಿ ಚಾರ್ಜ್ ಮಾಡಿದರು. ಇದರಿಂದ ಅಲ್ಲಿನ ಜನ ದಿಕ್ಕಾಪಾಲಾಗಿ ಓಡಿ ಹೋದರು. ಗಲಭೆ ಪ್ರಾರಂಭವಾಯಿತು. ಈ ಸಣ್ಣ ಗಲಭೆಯನ್ನು ಅಲ್ಲಿನ ಪೋಲೀಸ್ ಅಧಿಕಾರಿ ನಿಯಂತ್ರಣ ಮಾಡಬಹುದಿತ್ತು. ಅಳಂದ್‌ನಲ್ಲಿ ಡಿ. ವೈ. ಎಸ್. ಪಿ. ಸಹ ಇರುತ್ತಾರೆ.

ಸರ್ಕಲ್ ಇನ್ಸ್‌ಪೆಕ್ಟರ್ಸ್ ಇರುತ್ತಾರೆ. ಒಬ್ಬ ಎಸ್. ಐ. ಸಹ ಇರುತ್ತಾರೆ. ಇವರೇ ಅಲ್ಲಿ ನಡೆದಂತಹ ಸಣ್ಣ ಗಲಭೆಯನ್ನು ನಿಯಂತ್ರಣ ಮಾಡಬಹುದಿತ್ತು. ಗೋಲಿಬಾರ್ ಮಾಡುವಂತಹ ಅವಶ್ಯಕತೆ ಇರಲಿಲ್ಲ. ಅಲ್ಲಿ ಗೋಲಿಬಾರ್ ಮಾಡುವಂತಹ ಪ್ರಮೇಯ ಏತಕ್ಕೆ ಬಂತು ಎಂದು ನಾನು ನೇರವಾಗಿ ಸರ್ಕಾರವನ್ನು ಕೇಳಬಯಸುತ್ತೇನೆ. ಈ ಗೋಲಿಬಾರ್‌ನಿಂದ ಸುಮಾರು ೩ ಜನ ಸತ್ತರು. ಸುಮಾರು ಜನರಿಗೆ ಜಖಂ ಸಹ ಆಗಿದೆ. ಮತ್ತು ಅಂಗಡಿಗಳು, ಪಾನ್‌ಬೀಡಾ ಶಾಪ್‌ಗಳು ಲೂಟಿ ಆದವು. ಇವರಲ್ಲಿ ಕೆಲವು ಜನರಿಗೆ ಮಾತ್ರ ಪರಿಹಾರ ಕೊಟ್ಟಿದ್ದೀರಿ ಇನ್ನು ಕೆಲವರಿಗೆ ಪರಿಹಾರ ಕೊಟ್ಟಿಲ್ಲ ಇದೇ ರೀತಿಯಲ್ಲಿ ಪರಿಸ್ಥಿತಿ ಮುಂದುವರಿಯುವುದಾದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಅಲ್ಪಸಂಖ್ಯಾತರಿಗೆ ರಕ್ಷಣೆ ಸಿಗುತ್ತದೆಯೋ ಅಥವಾ ಇಲ್ಲವೋ ಎನ್ನುವ ಭಯ ಜನರಲ್ಲಿ ಉಂಟಾಗುತ್ತದೆ. ತಮ್ಮ ಸರ್ಕಾರ ಬಂದ ಮೇಲೆ ಕರ್ನಾಟಕ ರಾಜ್ಯದಲ್ಲಿ ಶಾಂತಿ ಪಾಲನೆ ಒಳ್ಳೆಯ ಸುವ್ಯವಸ್ಥಿ ರೀತಿಯಲ್ಲಿದೆ ಎಂದು ಪದೇ ಪದೇ ಹೇಳಿಕೊಳ್ಳುತ್ತಿದ್ದೀರಿ. ಆದರೆ ಈಗ ನಡೆದಿರತಕ್ಕಂಥ ಗಲಭೆಗಳನ್ನು ನೋಡುತ್ತಿದ್ದರೆ ಸಂಪೂರ್ಣವಾಗಿ ನಿಮ್ಮ ಲಾ ಅಂಡ್ ಆರ್ಡರ್ ಫೇಲ್ ಆಗಿದೆ. ಅಲ್ಪಸಂಖ್ಯಾತರ ರಕ್ಷಣೆಯನ್ನು ಮಾಡುವುದರಲ್ಲಿಯೂ ಸಹ ಸಂಪೂರ್ಣವಾಗಿ ತಾವು ವಿಫಲರಾಗಿದ್ದೀರಿ. ಎಲ್ಲೆಲ್ಲಿ ಗಲಭೆಗಳು ನಡೆದಿವೆಯೋ ಅಲ್ಲಿಗೆ ಸರ್ಕಾರದವರು ಹೋಗಿ ಅವರ ಮನಸ್ಸಿನಲ್ಲಿರತಕ್ಕಂಥ ಭಯ ಭೀತಿಯನ್ನು ಹೋಗಲಾಡಿಸಬೇಕು. ಜನರ ವಿಶ್ವಾಸವನ್ನು ತಾವು ದಿನೇ ದಿನೇ ಕಳೆದುಕೊಳ್ಳುತ್ತಿದ್ದೀರಿ......

ಅಧ್ಯಕ್ಷರು.—೧೦ ನಿಮಿಷ ಆಯಿತು ತಾವು ದಯಮಾಡಿ ಮುಗಿಸಿ.

ಶ್ರೀ ಧರ್ಮಸಿಂಗ್.—ಇವತ್ತು ನಮ್ಮ ಭಾಗದಲ್ಲಿ ಗೋಲಿಬಾರ್ ಆಗಿರುವುದಕ್ಕೆ ಕಾರಣವೇನು ಎಂದು ತಿಳಿದುಕೊಳ್ಳುವುದಕ್ಕೆ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೀರಿ......

ಅಧ್ಯಕ್ಷರು.—ಇಲ್ಲ ತಾವು ಬೇಗ ಮುಗಿಸಿ ೧೦ ನಿಮಿಷ ಆಯಿತು.

ಶ್ರೀ ಧರ್ಮಸಿಂಗ್.—ಆಯಿತು. ಸಮಯದ ಅಭಾವದ ಕಾರಣ ಇನ್ನು ಹಲವಾರು ವಿಷಯಗಳು ಇದ್ದರು ಸಹ ಪ್ರಸ್ತಾಪ ಮಾಡದೆ ಕೊನೆಯದಾಗಿ ಎಲ್ಲಿ ಸಂಕಷ್ಟದಲ್ಲಿ ಜನತೆ ಇದ್ದಾರೋ ಆ ಜನರಿಗೆ ಸರ್ಕಾರ ಸರಿಯಾದ ರೀತಿಯಲ್ಲಿ ಸಕಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಮತ್ತು ನೊಂದ ಕುಟುಂಬಗಳಿಗೆ ಆದಷ್ಟು ಬೇಗ ಪರಿಹಾರ ಕೊಡಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಾಬುರೆಡ್ಡಿ ವಿ. ತುಂಗಳ್(ಬೀಳಗಿ).—ಸನ್ಮಾನ್ಯ ಅಧ್ಯಕ್ಷರೇ ಮೊನ್ನೆಯ ದಿವಸ ಬೆಳಗಾಂ ಬಗ್ಗೆ ಮಾತನಾಡುವಾಗ ನಮ್ಮ ಮಿತ್ರರಾದ ಎಂ. ಇ. ಎಸ್. ನವರು ಹಾಗೂ ಎಂ. ಇ. ಎಸ್. ಶಾಸಕರಾದಂಥ ಶ್ರೀಮಾನ್ ಮಾನೆಯವರು ಮಾತನಾಡುತ್ತಾ ಬೆಳಗಾಂ ನಗರದಲ್ಲಿ ಸತ್ಯಾಗ್ರಹ ಶಾಂತಿಯುತವಾಗಿ ಇತ್ತು ಎಂದು ಹೇಳಿದರು. ಅದನ್ನೇ ಅವರು ಪ್ರತಿಪಾದನೆ ಮಾಡಿದರು. ಈ ಘಟನೆ ನಡೆಯುವಂತಹ ಸಂದರ್ಭದಲ್ಲಿ ಬೆಳಗಾಂ ನಗರದಲ್ಲಿ ಪರಿಸ್ಥಿತಿ ಶಾಂತಿಯುತವಾಗಿರಲಿಲ್ಲ. ಬೆಳಗಾಂ ನಗರದಲ್ಲಿ ಸತ್ಯಾಗ್ರಹ ಒಂದು ದುರುದ್ದೇಶಪೂರ್ಣವಾಗಿ ತುಂಬಿತ್ತು. ಗಡಿ ಪ್ರದೇಶದಲ್ಲಿ ಚಳುವಳಿಯನ್ನು ಮಾಡಲು ಮುಖ್ಯ ಕಾರಣವೇನೆಂದರೆ ಭಾಷಾ ನೀತಿಯೇ ಮುಖ್ಯ ಕಾರಣವೆಂದು ಮಾನ್ಯ ಸದಸ್ಯರಾದಂಥ ಮಾನೆಯವರು ಹೇಳಿದರು. ೧೯೬೦–೬೧ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸನ್ಮಾನ್ಯ ಶ್ರೀ ಬಿ. ಡಿ. ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದರು, ಮಹಾರಾಷ್ಟ್ರದಲ್ಲಿ ಶ್ರೀಮಾನ್ ಚವಾಣ್‌ರವರು ಮುಖ್ಯಮಂತ್ರಿಗಳಾಗಿದ್ದರು. ಇವರಿಬ್ಬರ ನಡುವೆ ಮಾತುಕತೆಗಳಾಗಿ ಒಂದು ಒಪ್ಪಂದವನ್ನು ಮಾಡಿಕೊಂಡರು. ಆ ಒಪ್ಪಂದವಾದರೂ ಏನೆಂದರೆ ಗಡಿ ಭಾಗಗಳಲ್ಲಿ ಎಂದರೆ ಕರ್ನಾಟಕ ರಾಜ್ಯದಲ್ಲಿ ವಾಸ ಮಾಡುವ ಮರಾಠಿಗರಿಗೆ ಕನ್ನಡ ಮತ್ತು ಮರಾಠಿ ಭಾಷೆಗಳು ಜಾರಿಯಲ್ಲಿರಬೇಕು. ಅದೇ ಕರ್ನಾಟಕ ರಾಜ್ಯದ ಜನ ಮಹರಾಷ್ಟ್ರದಲ್ಲಿ ವಾಸಮಾಡುತ್ತಿದ್ದರೆ ಆ ಜನರಿಗೂ ಕೂಡ ಕನ್ನಡ ಮತ್ತು ಮರಾಠಿ ಭಾಷೆಗಳು ಜಾರಿಯಲ್ಲಿರಬೇಕೆಂದು. ಈ ಒಪ್ಪಂದವನ್ನು ಕರ್ನಾಟಕ ರಾಜ್ಯ ಚಾಚೂ ತಪ್ಪದೆ ಅನುಷ್ಠಾನಕ್ಕೆ ತಂದಿತು. ಆದರೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮಾತ್ರ ಈ ಒಪ್ಪಂದವನ್ನು ಪಾಲನೆ ಮಾಡಲಿಲ್ಲ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೬-೦೦ ಪಿ.ಎಂ.

ಮತ್ತೆ ಒಂದು ಘಟನೆ ಆಯಿತು. ಬೆಳಗಾವಿಯಲ್ಲಿ ಸತ್ಯಾಗ್ರಹ ಮಾಡಿದರು. ೧೯೭೮ರಲ್ಲಿ ಮಾನ್ಯ ಶರದ ಪವಾರ್ ಅವರು ಮುಖ್ಯಮಂತ್ರಿಯಾಗಿದ್ದಾಗ ಒಂದು ಸರ್ಕಾರಿ ಆಜ್ಞೆ ಹೊರಡಿಸಿದರು. ಟೈಲರಿಂಗ್ ಪರೀಕ್ಷೆಯಿಂದ ಹಿಡಿದು, ಎಲ್ಲಾ ಪರೀಕ್ಷೆವರೆಗೂ, ಕನ್ನಡ ಭಾಷೆ ಒಂದನ್ನು ಬಿಟ್ಟು, ಬಂಗಾಳಿ ಭಾಷೆಯಲ್ಲಿ, ಬರೆಯಬಹುದು, ಗುಜರಾತಿ ಭಾಷೆಯಲ್ಲಿ ಬರೆಯಬಹುದು ಎಂದು ಆದೇಶ ಹೊರಡಿಸಿದರು. ಈ ರೀತಿ ಆದೇಶವನ್ನು ಹೊರಡಿಸಿ, ಕನ್ನಡವನ್ನು ಕೊಲೆ ಮಾಡಿದಂತಹ ಶರದ್‌ಪವಾರ್ ಅವರು ಬೆಳಗಾವಿಗೆ ಬಂದು ಕನ್ನಡಿಗರ ಮೇಲೆ ಹಲ್ಲೆ ನಡೆಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈಗ್ಗೆ ೮-೧೦ ವರ್ಷಗಳಲ್ಲಿ ಆ ಭಾಗದ ಕನ್ನಡ ಶಾಲೆಗಳನ್ನು ಇವರು ನಿರ್ನಾಮ ಮಾಡಿದ್ದಾರೆ. ಈ ರೀತಿ ಎಂದೂ ಆಗಿರಲಿಲ್ಲ ಶ್ರೀಮಾನ್ ಮಾನೆಯವರು ಎಷ್ಟೋ ಸಾರಿ ಬರುತ್ತಿದ್ದಾರೆ. ಅವರು ಬೆಳಗಾವಿಯ ಖ್ಯಾತ ವಕೀಲರು. ಅವರ ಕಕ್ಷಿದಾರರು ೧೦೦ಕ್ಕೆ ೯೦ ಭಾಗ ಕನ್ನಡದವರು ಬರುತ್ತಾರೆ. ನಾನು ಅವರಿಗೆ ಬೆಲೆ ಕೊಡುತ್ತೇನೆ. ಶ್ರೀಮಾನ್ ಮಾನೆಯವರು ಏನು ಹೇಳಿದರು ಎಂದರೆ ಬೆಳಗಾಂನಲ್ಲಿ ಸತ್ಯಾಗ್ರಹ ಚಳುವಳಿ ಶಾಂತಿಯುತವಾಗಿ ನಡೆಯಿತು ಎಂದು ಹಾಗಿದ್ದರೆ, ಹಿಂಡಲಗ ಗ್ರಾಮದ ಬಳಿ ಇರುವ ನೀರಿನ ಪೈಪನ್ನು ಒಡೆದು ಹಾಕುತ್ತಿರಲಿಲ್ಲ. ಪೋಲೀಸರ ಮೇಲೆ ಚಿಮಣಿ ಎಣ್ಣೆ ಹಾಕಿ ಸುಡುವ ಪ್ರಯತ್ನ ಮಾಡಿದರು. ಕನ್ನಡ ಶಾಲೆಗಳ ಮೇಲೆ ದಾಳಿ ಮಾಡಿದರು. ಕನ್ನಡ ಪತ್ರಿಕೆಯ ಕಛೇರಿಗೆ ಬೆಂಕಿ ಹಚ್ಚಿದರು. ಇದು ಶಾಂತಿಯುತ ಚಳುವಳಿ ಅಲ್ಲ. ಬೆಳಗಾವಿಯಲ್ಲಿ ಸತ್ಯಾಗ್ರಹ ನಡೆಯಿತು. ಆ ಸತ್ಯಾಗ್ರಹದಲ್ಲಿ ಸಂಯುಕ್ತ ಮಹರಾಷ್ಟ್ರ ಸೀಮಾ ಸಮಿತಿಯವರೂ ಸೇರಿದ್ದರು. ಈ ಸಂಯುಕ್ತ ಮಹಾರಾಷ್ಟ್ರ ಸೀಮಾ ಸಮಿತಿ, ಎಂ.ಇ.ಎಸ್.ನ ಡೂಪ್ಲಿಕೇಟ್ ಕಾರ್ಬನ್ ಕಾಪಿ ಇದ್ದ ಹಾಗೆ. ಇದೇನೂ ಬೇರೆ ಅಲ್ಲ ಒಂದು ತಿಂಗಳವರೆಗೆ ನಡೆದ ಸತ್ಯಾಗ್ರಹದಲ್ಲಿ ಮಹಾರಾಷ್ಟ್ರ ಕನ್ನಡಿಗರು ಒಬ್ಬರೂ ಭಾಗವಹಿಸಲಿಲ್ಲ. ಗಡೆಜಿಂಗ್ಲಾ ಕೊಲ್ಲಾಪುರ ಮುಂತಾದ ಕಡೆಗಳಿಂದ ಪುಂಡರನ್ನು ಕರೆದುಕೊಂಡು ಬಂದು, ಬೆಳಗಾಂನಲ್ಲಿ ಸತ್ಯಾಗ್ರಹ ಮಾಡಿ, ಶಾಂತಿಯುತವಾದ ಬೆಳಗಾಂ ವಾತಾವರಣವನ್ನು ಕಲಕುವಂತಹ ವಾತಾವರಣವನ್ನು ನಿರ್ಮಾಣ ಮಾಡಿದರು ಇದಕ್ಕೆ ಗೋಗಟೆಯಂತಹ ಉದ್ದಿಮೆದಾರರು ಬೆಂಬಲ ಕೊಡುತ್ತಿದ್ದಾರೆ. ಈ ಒಂದು ಹಲ್ಲೆ ಬಗ್ಗೆ ಪೋಲೀಸಿನವರು ಉತ್ತಮ ಕಾರ್ಯ ಮಾಡಿದ್ದಾರೆ. ನಾವು ಅವರನ್ನು ನೆನೆಸಬೇಕು. ಅವರು ವಿನಾಕಾರಣ ಪೋಲೀಸಿನವರ ಮೇಲೆ ಅಪಚಾರ ಮಾಡುತ್ತಿದ್ದಾರೆ. ಈ ಉದ್ದಿಮೆದಾರರು, ಸೀಮಾ ಸಮಿತಿಗೆ ದುಡ್ಡು ಕಳುಹಿಸುತ್ತಾರೆ. ಮತ್ತೆ ಮಹಾರಾಷ್ಟ್ರದಲ್ಲಿರುವಂಥ ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿಕೊಂಡು ಬಂದಿದ್ದಾರೆ ಮರಾಠಿ ಪತ್ರಿಕೆಯಲ್ಲಿ ಅವ್ಯಾಹತವಾಗಿ, ಕನ್ನಡದ ವಿರುದ್ಧ ಬರೆಯುತ್ತಿದ್ದಾರೆ. ನಾನು ಮರಾಠಿ ಮಾಧ್ಯಮದಲ್ಲಿ ಓದಿರುವುದರಿಂದ, ಮರಾಠಿ ಪತ್ರಿಕೆಗಳಲ್ಲಿ ಬಂದಿರುವುದು ನನಗೆ ಅರ್ಥವಾಗುತ್ತದೆ. ಕರ್ನಾಟಕ ವಿಧಾನಸಭೆಯಲ್ಲಿ ಎಂ.ಇ.ಎಸ್ ಸದಸ್ಯರು ಕೆಲಸ ಮಾಡುವಂತಹ ವಾತಾವರಣ ಇಲ್ಲವೆಂದು ಬರೆದಿದ್ದಾರೆ. ಎಂ.ಇ.ಎಸ್.ನವರಿಗೆ ಗಡಿ ವಿವಾದ ಬಗೆಹರಿಸುವುದು ಬೇಕಾಗಿಲ್ಲ. ಇಷ್ಟಾದರೂ ನಾವು ಅತ್ಯಂತ ಶಾಂತ ರೀತಿಯಿಂದ ಅವರೊಡನೆ ವರ್ತಿಸಿದ್ದೇವೆ. ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಮಲ್ಲಾರಿಗೌಡ ಪಾಟೀಲರು ಇಲ್ಲಿ ಬಂದಿಲ್ಲ. ಅವರು ಬಹಳ ಸೊಗಸಾಗಿ ಹೇಳಿದರು. ಸಂಕೇಶ್ವರದಲ್ಲಿ ಶಿವಾಜಿ ಪ್ರತಿಮೆಗೆ ಚಪ್ಪಲಿ ಹಾರ ಹಾಕಿದರು ಎಂದು ಮರಾಠಿ ಪತ್ರಿಕೆಗಳಲ್ಲಿ ಬರೆದಿದ್ದಕ್ಕೆ ಮಾನ್ಯ ಎಂ.ಎಸ್ ಪಾಟೀಲರು ಅಲ್ಲಿ ಶಿವಾಜಿ ಪ್ರತಿಮೆಯೇ ಇಲ್ಲವೆಂದು ಹೇಳಿದ್ದಾರೆ. ಹಾಗೂ ಈ ಬಗ್ಗೆ ಒಂದು ಸರಿಯಾದ ಹೇಳಿಕೆಯನ್ನೂ ಕೊಟ್ಟರು. ಡೂಪ್ಲಿಕೇಟ್ ಛತ್ರಪತಿಗಳು ಎಂದು ಹೇಳಿಕೊಂಡು ಚಳುವಳಿ ಮುಂದುವರಿಸುವುದು ಇವರಿಗೆ ಬೇಕಾಗಿದೆ ಇವರಿಗೆ ಗಡಿ ವಿವಾದ ಬೇಕಾಗಿಲ್ಲ. ಸೀಮಾ ಸಮಿತಿಯ ಹೆಸರಿನಲ್ಲಿ ಚಳುವಳಿಯನ್ನು ಮುಂದುವರಿಸಿಕೊಂಡು ಬಂದರು. ೧೯೮೩ರಲ್ಲಿ ಜನತಾ ಪಕ್ಷದ ಅಧ್ಯಕ್ಷರಾದ ಶ್ರೀಯುತ ಚಂದ್ರಶೇಖರ್ ಅವರು ಅವರು ಪಾದಯಾತ್ರೆ ಮಾಡಿದರು. ಬೆಳಗಾಂನಿಂದ ಕೊಲ್ಲಾಪುರದವರೆಗೆ ನಾನು ಅವರ ಜೊತೆಯಲ್ಲಿ ಹೋದೆನು. ಅನಂತರ ನಿಪ್ಪಾಣಿಯಲ್ಲಿ ನಡೆದ ಸಭೆಯಲ್ಲಿ ಅವರ ಭಾಷಣವನ್ನು ಕೇಳಿದೆ. ಅಲ್ಲಿ ಸಂಯುಕ್ತ ಮಹಾರಾಷ್ಟ್ರ ಸೀಮಾ ಸಮಿತಿಯವರು ಗಲಾಟೆ, ಎಬ್ಬಿಸಿದರು. ಎಷ್ಟೇ ಗಲಾಟೆ, ಚಳುವಳಿ, ದೊಂಬಿ ನಡೆದರೂ ಕೂಡ ನಮ್ಮ ಪೋಲೀಸಿನವರು ಅತ್ಯಂತ ಸಂಯಮದಿಂದ ಕೆಲಸ ಮಾಡಿದ್ದಾರೆ. ನನಗೆ ಇನ್ನೊಂದು ಹತ್ತು ಹೆಣ ಬಿದ್ದರೂ ಪರವಾಗಿಲ್ಲ. ನಾವೇನಾದರೂ ಮುಂಬೈನಲ್ಲಿ ಈ ರೀತಿ ಚಳುವಳಿ ಮಾಡಿದ್ದರೆ ೧೦೦ ಹೆಣಗಳು ಬೀಳುತ್ತಿತ್ತು. ಬೆಳಗಾಂನಲ್ಲಿ ಈ ಚಳುವಳಿ ನಡೆದ ಸಂದರ್ಭದಲ್ಲಿ ಅತ್ಯಂತ ಪ್ರಾಮಾಣಿಕತೆಯಿಂದ, ಕೆಲಸ ಮಾಡಿದ ಪೋಲೀಸ್ ಅಧಿಕಾರಿಗಳಾದ, ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಶ್ರೀ ನಾರಾಯಣ್ ಅವರಿಗೆ ರಾಷ್ಟ್ರಪತಿ ಪದಕ ಕೊಡಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಮೇಲೆ ಮಹಾರಾಷ್ಟ್ರದ ಮರಾಠಿಗರು ಅವ್ಯಾಹತವಾಗಿ ಕನ್ನಡಿಗರ

ಮೇಲೆ ದಾಳಿ ಮಾಡುತ್ತಿದ್ದಾರೆ. ಮೊನ್ನೆ ನಡೆದ ಗೋಲಿಬಾರ್‌ನಲ್ಲಿ ೭ ಜನ ಬಲಿಯಾದರು, ನಾನು ೭೦ ಬಲಿ ಆಗಿದ್ದರೂ ಸರ್ಕಾರವನ್ನು ಹೊಗಳುತ್ತಿದ್ದೆ. ಈ ರೀತಿಯ ಘಟನೆಯಿಂದ ಕನ್ನಡಿಗರಾದ ನಮಗೆ ಅವಮಾನ ಆಗುತ್ತಿದೆ, ಈ ಹಲ್ಲೆಯ ಸಂಬಂಧದಲ್ಲಿ ಕೆಲವು ಪುಂಡಾಟಿಕೆ ಮಾಡಿರತಕ್ಕಂಥವರ ಮೇಲೆ ಕಟ್ಟಳೆಗಳನ್ನು ಹಾಕಿದ್ದಾರೆ. ಈ ಕಟ್ಟಳೆಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂಬ ಹೊಂಚು ನಡೆಯುತ್ತಿದೆ. ಯಾವುದೇ ಕಾರಣದಿಂದ ಅವುಗಳನ್ನು ವಾಪಸ್ ತೆಗೆದುಕೊಳ್ಳಬಾರದು ಅವರಿಗೆ ಸರಿಯಾದ ಶಿಕ್ಷೆ ಕೊಡಬೇಕು. ಕನ್ನಡಿಗರು ಸಂಗೊಳ್ಳಿ ರಾಯಣ್ಣನ ವಂಶಸ್ಥರು, ಕಿತ್ತೂರು ರಾಣಿ ಚೆನ್ನಮ್ಮನ ವಂಶಸ್ಥರು, ಸಿಂಧೂರ ಲಕ್ಷ್ಮಣನ ವಂಶಸ್ಥರು, ಈ ಡೂಪ್ಲಿಕೇಟ್ ಚತ್ರಪತಿಗಳನ್ನು ಯಾವ ರೀತಿ ಹಿಡಿತಕ್ಕೆ ತಂದುಕೊಳ್ಳಬೇಕು ಯಾವ ರೀತಿ ಬುದ್ಧಿ ಕಲಿಸಬೇಕೆಂದು ನಮಗೆ ಗೊತ್ತಿದೆ. ನಾವು ಅವರಿಗೆ ಬಗ್ಗುವುದಿಲ್ಲವೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI. MOHAMED LIAQUDDIN BURANDDIN (Bidar).—Mr. Speaker' Sir, communal riots have become the order of the day. At the National Integration Council Hon'ble Prime Minister Sri. Rajiv Gandhi and even the State Chief Minister Sri. Ramakrishna Hegde have assured that protection wil be given to minorities and other weaker sections. There are several circulars and guidelines, but they have not been given into effect by the implementing machinery and the distrubances and communal riots are increasing day by day. In Karnataka alone in the year 1985, the communal disturbances have taken place at 11 times and during this year six communal riots have taken place whether the incident takes place in Hubli, Bellary or as it has taken place in Ramanagaram, Aland, Belgaum it is the primary responsibility of the State Government to prevent such ugly incidents. In my opinion the life and the property of the minorities should be protected at all costs. It is not a democracy in my opinion if the State Government or any Goverment does not provide any potection to the life and property of the minorities and weaker sections of the society.

The communal disturbances not only cause numerous loss to the property and life of the citizens and also lowering the life of the citizens and there will be gulf of misunderstanding in different communities.

In order to bridge the gulf and bay between communities it will take a long time, and therefore, I request the Government to tone up the Police Department. Particularly in Aland, the police had prior information on the basis of previous years incidents at the time of procession of the Statue of Basavanna. The police people had not utilised greater force, but only few policemen were there when the procession entered the trouble spot. When bullockcarts came to that place there were some stray-incidents of stone pelting. Then police resorted to lathi charge and soon after rumours spread. Immediatley the processionists went helter skelter without any reason and without any act of violence from the mob and thereafter the police started tear gas. When the processionists protested asking why you have resorted to teargas and lathi charge, then the police started firing, That

means they were know of the information prior about the outbreak of violence. The police have not informed the higher ups like Divisional Commissioner, DIG or S.P. before resorting to firing. They have not even used rubber bullets initially before going in for firing. Therefore, all these blames should go to police. Even in Ramanagaram also the trouble started at the time of Karaga procession. Ramanagaram town is still burning and the silk and jute is not traded due to tension. Nearly 5-6 persons have died and plenty of huts were damaged and burnt. So, this is the situation of law and order. No doubt, so many leaders and MLAs have visited Ramanagaram, but the police had not taken precautionary measures. Still Ramanagaram is burning. If at all the Chief Minister is really interested to curb these incibents he should form a Standing Committee of legislators so that they take up the work of national integration and bring peace in the State. This Committee should entirely be entrusted with the work of bringing peace in riot affected areas of our State. This Committee should go over to those areas now and then and hold meetings to bring brotherhood and tolerance among different communities. And also they should visit areas where there is likelihood of communal frenzy and violence. Just now I have learnt that some incidents of violence have been reported in Coorg. Many persons from Coorg have come here and they told us that the situation in Coorg is going to become tence. I therefore, request the Hon'ble Home Minister to take immediate needful action in this regard. These incidents have become very common in Karnataka and therefore, precautionary measures should be taken early. At present, these peace committees have become defunct and they are not at all functioning properly. In these peace committees no good person is included and I therefore, request you to kindly nominate good persons on these peace committees. Whenever there are festivals or processions, such peace committees should meet either in Tahsildar's office or DCs office and take immediate action. Before such processions are taken out these peace committees should meet and the leader of the procession should honour the veardict of the peace committee and if any incident takes place during the procession the leader should be held responsible. Now-a-days processions are being used as instruments of violence and communal disturbances. These peace committees should also see that no such uptoward incidents occurred during processions.

Lastly, when there are such communal disturbance after the incident or aftermath of the communal frenzy, there is relief work which will be started. I suggest that relief work should be

expedited and if there is a victim or a person who has lost his life then his family members should be paid atleast one lakh of rupees, There should be a separate legislation for the riot-affected compensation and all that. There should be deterrent punishment for the persons who are responsible for communal violence and disturbances. I request that Special courts should be established and deterrent punishment should be given against those who are responsible for communal disturbances. Now the Government appoints commissions to enquire into these incidents and they give report, but there is no follow up work and no cases are launched on persons convicted. Moreover the Commissions have held so many officials responsible in earlier cases, but no action has been taken against those officials. If this is the case what is the use of appointing such commission ? I request that action should be taken against officials who are held responsible by these commissions, and they should not be spared. I request that precautionary measures should be taken and goonda persons and bad elements should be kept behind the bars till the likelihood of violence is disappeared. I once again request the Government to constitute Special court to deal with these Cases and see that deterrent punishment is awarded to those persons who are involved in those riots. Lastly I humbly submit that the communal ryots which are spreading day by day and raising its ugly hands in Karnataka which is a citadel of peace and harmony should be curbed forthwith. Therefore, greater responsibility rests on the Hon'ble Chief Minister as well as the Hon'ble Home Minister to bring peace and harmony in our own State instead of criticising other States. I am not in agreement with the Hon'ble Chief Minister that greater violence and major communal disturbances have taken place in other parts of the country. It is not a justification that there should be communal disturbances in our part of the country also. I humbly request the Hon'ble Chief Minister and the Hon'ble Home Minister to take all precautionary measures in future. It is the primary duty and responsibility of every citizen and moreover it is the onerous duty of the State Government to see that the life and property of the minorities particularly Muslims and weaker sections are safeguarded, they should be given sufficient protection and they should not have any feeling that their life is not secured.

With these words, I once again thank the Hon'ble Speaker for having given a few minutes to speak and conclude.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಅಧ್ಯಕ್ಷರೇ, ಈ ದಿವಸ ಮತ್ತು ಮೊನ್ನೆ ದಿವಸ ರಾಜ್ಯದಲ್ಲಿ ಇತ್ತೀಚೆಗೆ ನಡೆದಿರತಕ್ಕಂಥ ಕೆಲವು ಘಟನೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡಿ ನಮ್ಮ ರಾಜ್ಯಕ್ಕೆ ಏನು ಒಂದು ಶಾಪದ ರೀತಿಯಲ್ಲಿ ಬಂದಿರತಕ್ಕ ಈ ದುರ್ಘಟನೆಯಲ್ಲಿ ಹಿಂಸಾಚಾರಕ್ಕೆ ಅವಕಾಶವಾಗಿದೆ ಆದರಿಂದ ಈ ರೀತಿಯ

ಹಿಂಸಾಚಾರವನ್ನು ತಡೆಯುವುದಕ್ಕೆ ನಾವು ಯಾವ ರೀತಿ ಮಾತನಾಡಬೇಕೋ ಆ ರೀತಿ ಮಾತನಾಡಬೇಕು ಹಾಗೂ ಇಂಥ ಹಿಂಸಾಚಾರ ಮತ್ತೆ ಆಗದಂತೆ ನೋಡುವ ಹಾಗೆ ನಮ್ಮ ಚರ್ಚೆಯು ಪರಿಮಿತಿಯೊಳಗೆ ಇರಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಆಗಿರ ತಕ್ಕಂಥ ಘಟನೆಗಳಿಗಿಂತ ಹೆಚ್ಚಾಗಿ ಇತರ ರಾಜ್ಯಗಳಲ್ಲೂ ಸಹ ಗಲಭೆಗಳು ಆಗಿವೆ. ಅದರ ಬಗ್ಗೆ ನಾನು ಹೇಳಿಕೆ ಕೊಡಲು ಈಗ ತಯಾರಿಲ್ಲ. ಇತ್ತೀಚೆಗೆ ರಾಮನಗರದಲ್ಲಿ ಮತ್ತು ಆಲಂದ್‌ನಲ್ಲಿ ನಡೆದಿರ ತಕ್ಕಂಥ ಘಟನೆಗಳ ಬಗ್ಗೆ ನಾವೆಲ್ಲರೂ ಸಹಿತ ಇವೊತ್ತು ತಲೆಬಗ್ಗಿಸಬೇಕಾಗಿದೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ನಮ್ಮ ರಾಜ್ಯ ಸರ್ಕಾರ ಅದರಲ್ಲೂ ವಿಶೇಷವಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಮತ್ತು ಮಾನ್ಯ ಗೃಹ ಸಚಿವರು ಈ ಘಟನೆಗಳು ಆ ಪ್ರದೇಶದಿಂದ ಇತರ ಕಡೆಗೆ ಹರಡದ ರೀತಿಯಲ್ಲಿ ಬಹಳ ಚೆನ್ನಾಗಿ ಕೆಲಸ ನಿರ್ವಹಿಸಿದ್ದಾರೆ. ನಮ್ಮ ರಾಷ್ಟ್ರದ ಇತರೆ ರಾಜ್ಯಗಳಲ್ಲಿ, ಅಹಮದಾಬಾದ್ ಇರಬಹುದು, ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ಹಲವಾರು ವರ್ಷಗಳಿಂದ ಗಲಭೆಗಳು ನಡೆಯುತ್ತಲೇ ಇವೆ. ಈ ಗಲಭೆಯನ್ನು ಹತ್ತಿಕ್ಕಲು ಸೇನೆಯನ್ನು ತಂದರೂ ಸಹಿತ ಅಲ್ಲಿ ನಡೆಯುವ ಹಿಂಸಾಚಾರವನ್ನು ತಡೆಯಲು ಆ ರಾಜ್ಯ ಸರ್ಕಾರಗಳು ವಿಫಲವಾಗಿವೆ. ಕೇಂದ್ರ ಸರ್ಕಾರದ ಸಹಕಾರ ಇದ್ದರೂ ಸಹಿತ ಈ ದುರ್ಘಟನೆಗಳನ್ನು ತಹಬಂದಿಗೆ ತರಲಿಕ್ಕೆ ಆ ರಾಜ್ಯ ಸರ್ಕಾರಗಳ ಕೈಯಲ್ಲಿ ಆಗಿಲ್ಲ. ವಿಶೇಷವಾಗಿ ರಾಮನಗರದ ಘಟನೆ ಬಗ್ಗೆ ಹೇಳಬೇಕು ಎಂದರೆ, ನಮ್ಮ ಗೃಹಮಂತ್ರಿಯವರು, ರಾಮನಗರದಲ್ಲಿ ಗಲಭೆ ಪ್ರಾರಂಭವಾದ ಮೊದಲನೆಯ ದಿನಸವೇ ಅಲ್ಲಿಗೆ ಹೋಗಿದ್ದರು. ರಾಮನಗರದಲ್ಲಿ ಎರಡೂ ಗುಂಪಿನ ಜನರನ್ನು ಕರೆಯಿಸಿ ಗಲಭೆಗೆ ಪ್ರಚೋದನೆ ಕೊಡಬಾರದೆಂದು ವಿನಂತಿ ಮಾಡಿಕೊಂಡಿದ್ದರು. ಎಲ್ಲಾ ಗುಂಪಿನವರು ಒಂದಾಗಬೇಕೆಂದು ಅವರು ಕೇಳಿಕೊಂಡು ಶಾಂತಿ ಸ್ಥಾಪನೆಗೆ ಅವರು ಬಹಳ ಪ್ರಯತ್ನ ಮಾಡಿದ್ದಾರೆ. ಈ ರಾಮನಗರದ ಗಲಾಟೆಯ ಬಗ್ಗೆ ಕೆಲವರು ಏನು ಹೇಳಿದ್ದರು ಎಂದರೆ, ರಾಮನಗರದಲ್ಲಿ ಜನತಾ ಪಾರ್ಟಿಗೆ ಬೆಂಬಲ ಕಡಿಮೆ ಇದೆ. ಅಲ್ಪ ಸಂಖ್ಯಾತರೆಲ್ಲಾ ಕಾಂಗ್ರೆಸ್‌ಗೆ ಬೆಂಬಲ ಕೊಡುವುದರಿಂದ ಜನತಾ ಸರ್ಕಾರವು ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುತ್ತಿಲ್ಲ. ಸಕಾಲದಲ್ಲಿ ಅಲ್ಪಸಂಖ್ಯಾತರಿಗೆ ಪೋಲೀಸರಿಂದ ರಕ್ಷಣೆ ಸಿಗಲಿಲ್ಲವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ರಾಮನಗರ ಗಲಭೆ ಪೀಡಿತ ಪ್ರದೇಶದಲ್ಲಿ ಪೋಲೀಸಿನವರು ಬಹಳ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಅಲ್ಲಿ ಉಂಟಾಗಿದ್ದ ಪರಿಸ್ಥಿತಿಯನ್ನು ತಡೆಗಟ್ಟುವ ಸಂದರ್ಭದಲ್ಲಿ ಸಬ್ ಇನ್ಸ್‌ಪೆಕ್ಟರ್ ಒಬ್ಬರು ತನ್ನ ಪ್ರಾಣವನ್ನು ಲೆಕ್ಕಿಸದೇ ಭಯ ಬಿಟ್ಟು ಗಲಭೆಯನ್ನು ಹತ್ತಿಕ್ಕಲು ಪ್ರಯತ್ನಪಟ್ಟಾಗ ದುಷ್ಕರ್ಮಿಗಳು ಅವರ ಕೈಯನ್ನೇ ಕತ್ತರಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಸುದೈವವಶಾತ್ ಅವರ ಕೈ ಪೂರ್ತಿಯಾಗಿ ಹೋಗಲಿಲ್ಲ. ನಾನು ಮೊನ್ನೆಯ ದಿವಸ ಅವರು ಹೇಗಿದ್ದಾರೆಂದು ವಿಚಾರಿಸಿಕೊಂಡಾಗ ಅವರು ಇನ್ನೂ ಗುಣಮುಖರಾಗುತ್ತಿದ್ದಾರೆಂದು ತಿಳಿದು ಬಂದಿದೆ. ರಾಮನಗರದಲ್ಲಿ ಆದಂಥ ಗಲಭೆ ಬಗ್ಗೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ಮುಖ್ಯಸ್ಥರು ಹಾಗೂ ಡಿ.ಐ ಜಿ. ಯವರು ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಇವರೆಲ್ಲರೂ ಸುಮಾರು ೪-೫ ದಿವಸಗಳ ಕಾಲ ರಾಮನಗರದಲ್ಲೇ ವಾಸ್ತವ್ಯ ಹೂಡಿದ್ದರು. ಮಾನ್ಯ ಗೃಹ ಮಂತ್ರಿಯವರು ಒಟ್ಟು ಎರಡು ಸಾರಿ ಅಲ್ಲಿಗೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಮಾನ್ಯ ಸಚಿವರಾದ ಜಾಲಪ್ಪನವರು ಸಹ ರಾಮನಗರಕ್ಕೆ ಭೇಟಿ ಕೊಟ್ಟಿದ್ದರು. ನಾನು ಸಹ ಅಲ್ಲಿಗೆ ಭೇಟಿ ಕೊಟ್ಟಿದ್ದೆ. ಅಲ್ಲಿನ ಸ್ಥಳೀಯ ಮುಖಂಡರೊಡನೆ ಮಾತನಾಡಿ ಗಲಭೆಯನ್ನು ಹತೋಟಿಗೆ ತರುವಂತೆ ಎಲ್ಲರೂ ಮನವಿಯನ್ನು ಮಾಡಿಕೊಂಡಿದ್ದೇವೆ. ಅಲ್ಲಿನ ಶಾಸಕರಾದ ಮಾನ್ಯ ಪುಟ್ಟಸ್ವಾಮಿಗೌಡರು ಈ ಗಲಭೆ ಆಗುವುದಕ್ಕೆ ೪-೫ ದಿವಸಗಳಿಗೆ ಮುಂಚಿತವಾಗಿ ಅವರ ಸಂಬಧೀಕರ ಮದುವೆಗೆಂದು ಮದ್ರಾಸ್‌ಗೆ ಹೋಗಿದ್ದರು. ಗಲಭೆ ನಡೆಯುತ್ತಿದೆ ಎಂದು ತಿಳಿದ ತಕ್ಷಣ ಅವರು ರಾಮನಗರಕ್ಕೆ ವಾಪಸ್ ಬಂದು ಗಲಾಟೆಯನ್ನು ಹತೋಟಿಗೆ ತರುವ ಪ್ರಯತ್ನ ಮಾಡಿದ್ದಾರೆ. ರಾಮನಗರದಲ್ಲಿ ಜನತಾ ಪಾರ್ಟಿಗೆ ಬೆಂಬಲ ಇಲ್ಲವೆಂದು ಕೆಲವರು ಹೇಳಿರುವುದು ಸತ್ಯಕ್ಕೆ ದೂರವಾದ ವಿಚಾರ. ಕಳೆದ ಲೋಕಸಭೆ ಚುನಾವಣೆಯಲ್ಲಿ ನಾನು ಅಭ್ಯರ್ಥಿಯಾಗಿದ್ದ, ರಾಮನಗರ ಟೌನ್‌ನಲ್ಲೇ ನನಗೆ ೪ ಸಾವಿರ ಬಹುಮತ ಸಿಕ್ಕಿದೆ. ಇದರಿಂದಲೇ ಗೊತ್ತಾಗುತ್ತದೆ ಜನತಾ ಪಾರ್ಟಿಗೆ ಬೆಂಬಲ ಇದೆ ಎಂದು. ಗಲಭೆ ನಡೆಯುವ ಪ್ರದೇಶದಲ್ಲಿ ಈ ರೀತಿ ರಾಜಕೀಯವಾದ ಮಾತುಗಳನ್ನು ಆಡಬಾರದೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಒಂದು ಅಭಿಪ್ರಾಯದಂತೆ ಮಾನ್ಯ ಗೃಹ ಸಚಿವರಲ್ಲಿ ಈ ಒಂದು ಸಂಗತಿಯನ್ನು ಅವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇನ್ನು ಮೇಲೆ ಯಾವುದೇ ಪ್ರದೇಶದಲ್ಲಿ ಇಂಥ ಘಟನೆಗಳು ನಡೆಯುವ ಸಂದರ್ಭದಲ್ಲಿ ಹೊರಗಡೆಯ ಮುಖಂಡರು ಯಾರು ಸಹ ಗಲಭೆ ಪ್ರದೇಶಗಳಿಗೆ ಹೋಗುವ ಆಗತ್ಯ ಇಲ್ಲವೆಂದು ಹೇಳಬೇಕು. ಹೊರಗಡೆಯಿಂದ ಹೋಗುವ ಮುಖಂಡರು ಗಲಭೆ ಪ್ರದೇಶಗಳಿಗೆ ಹೋಗಿ ಮೊಸಳೆ ಕಣ್ಣೀರು ಸುರಿಸಿ ನಿಮ್ಮ ಮೇಲೆ ಬಹಳ

ಅನ್ಯಾಯವಾಗಿದೆ, ಈ ವರ್ಗದವರ ಮೇಲೆ ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಇದನ್ನು ಮೊದಲು ತಪ್ಪಿಸಬೇಕು. ಗಲಭೆ ಉಂಟಾಗುವ ಪ್ರದೇಶಗಳಿಗೆ ಸರ್ಕಾರದ ಆಡಳಿತ ಯಂತ್ರದ ಅಧಿಕಾರಿಗಳು ಮಾತ್ರ ಅಲ್ಲಿಗೆ ಹೋಗಿ ಸ್ಥಳೀಯ ಮುಖಂಡರೊಡನೆ ಮಾತ್ರ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಬೇಕು ರಾಮನಗರದಲ್ಲಿ ಉಂಟಾದ ಗಲಭೆಯು ಚನ್ನಪಟ್ಟಣಕ್ಕೂ, ಬೆಂಗಳೂರು ನಗರಕ್ಕೂ, ಕನಕಪುರಕ್ಕೂ ಹಬ್ಬುವ ಸಂಭವ ಇತ್ತು. ಈ ರೀತಿ ಆಗುತ್ತದೆಂದು ತಿಳಿದ ತಕ್ಷಣ ಪೋಲೀಸ್ ಇಲಾಖೆಯವರು ಸೂಕ್ತ ಬಂದೋಬಸ್ತು ಕೆಲಸಗಳನ್ನು ಮಾಡಿದ್ದಾರೆ. ತಮ್ಮ ಜೀವದ ಮೇಲಿನ ಹಂಗನ್ನು ತೊರೆದು ಕೆಲಸವನ್ನು ಮಾಡಿರತಕ್ಕ ಪೋಲೀಸ್ ಇಲಾಖೆ ಮೇಲೆ ದೋಷವನ್ನು ಹೊರಿಸುವುದು ತಪ್ಪಾಗುತ್ತದೆ. ಮತ್ತೆ ಮಹಾರಾಷ್ಟ್ರ ಮತ್ತು ನಮ್ಮ ರಾಜ್ಯದ ನಡುವೆ ಇರುವ ಗಡಿ ಸಮಸ್ಯೆಗೆ ಸಂಬಂಧಪಟ್ಟಂತೆ ನಡೆದಿರತಕ್ಕಂಥ ಹಿಂಸಾಚಾರದ ಬಗ್ಗೆ ಹೇಳಬೇಕೆಂದರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಮರಾಠಿ ಭಾಷೆಯನ್ನು ಮಾತನಾಡತಕ್ಕಂಥ ಬಹುತೇಕ ಮಂದಿಯಲ್ಲಿ ನಾವು ಮಹಾರಾಷ್ಟ್ರದವರು ಎಂಬ ಭಾವನೆಯೇ ಅವರಲ್ಲಿ ಇಲ್ಲ. ಈ ಘಟನೆಯು ಆಗುತ್ತಿರಲಿಲ್ಲ ಎಂದು ನಮ್ಮೆಲ್ಲರಿಗೂ ಗೊತ್ತಿದೆ. ಮಹಾರಾಷ್ಟ್ರದಿಂದ ಕೆಲವು ಮುಖಂಡರು ಬೆಳಗಾಂಗೆ ಬಂದು ಗಲಭೆಗೆ ಪ್ರಚೋದನೆಯನ್ನು ಕೊಟ್ಟಿದ್ದಾರೆ. ಈ ಮುಖಂಡರು ಬಂದಿರುವುದು ಬಹಳ ಕಡಿಮೆ ಸಂಖ್ಯೆಯಲ್ಲಿ, ಇವರು ಬಂದಿರುವುದು ಕಡಿಮೆ ಸಂಖ್ಯೆಯಾದರೂ ಮಾಡಿರುವ ಕೆಲಸ ಬಹಳ ದೊಡ್ಡದು. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರಾದ ಶ್ರೀ ಹೆಗಡೆಯವರ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆಂದು ಈ ಕೆಲಸವನ್ನು ಮಾಡಿಸಿದ್ದಾರೆ. ಮಾನ್ಯ ಹೆಗಡೆಯವರು ತಮ್ಮ ಚಾಣಕ್ಷತನದಿಂದ ಮತ್ತು ಮುತ್ಸದಿತನದಿಂದ ಹೆಚ್ಚು ಗಲಭೆ ಆಗದಂತೆ ನೋಡಿಕೊಂಡರು. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸಲಿಕ್ಕೆ ಇಚ್ಛೆಪಡುತ್ತೇನೆ. ಜನರನ್ನು ಗಲಾಟೆ ಮಾಡುವುದಕ್ಕೆ ಕೆರಳಿಸುವುದು ಬಹಳ ಸುಲಭ. ಆದರೆ ಇದೇ ಗಲಾಟೆಯನ್ನು ಹದ್ದುಬಸ್ತಿನಲ್ಲಿ ತರುವವುದು ಬಹಳ ಕಷ್ಟ. ಮಹಾಜನ್ ವರದಿಯನ್ನು ಜಾರಿಗೆ ತರುವ ಬಗ್ಗೆ ಬಹುತೇಕ ಮರಾಠಿ ಭಾಷೆ ಮಾತನಾಡತಕ್ಕ ಜನರು ವಿರೋಧವನ್ನು ಮಾಡಿಲ್ಲ. ನಮ್ಮ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮಾನ್ಯ ಸದಸ್ಯರು ಈಗ ಸದನದಲ್ಲಿ ಹಾಜರಿಲ್ಲ. ಇದಕ್ಕೂ ಮೊದಲು ಸಹ ಅವರಿಗೆ ಒಂದೆರಡು ವಿಷಯಗಳನ್ನು ಅವರಲ್ಲಿ ಮಾತನಾಡಿದ್ದೇನೆ. ಯಾರೇ ಆಗಲೀ ತಮ್ಮ ಹಿತಕ್ಕೋಸ್ಕರ ರಾಜ್ಯದಲ್ಲಿರುವ ಶಾಂತಿಯನ್ನು ಹದಗೆಡಿಸುವುದು ಸರಿಯಲ್ಲವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಬಯಸುತ್ತೇನೆ.

೬-೩೦ ಪಿ.ಎಂ.

ಇಷ್ಟೊತ್ತು ನಮ್ಮ ಮಿತ್ರರು ಕೆಲವರು ಹೇಳಿದರು, ರಾಜ್ಯದಲ್ಲಿ ಸರಕಾರ ವಿಫಲವಾಗಿದೆ, ರಾಜ್ಯದಲ್ಲಿ ಶಾಂತಿ ಇಲ್ಲ, ಎಲ್ಲಾ ಕಡೆಗಳಲ್ಲಿಯೂ ಗುಂಡುಗಳನ್ನು ಹಾರಿಸಿದ್ದಾರೆ. ಇತ್ಯಾದಿಯಾಗಿ ಹೇಳಿದ್ದಾರೆ. ನಿಜ, ಆಗಿರತಕ್ಕಂತಹ ದುರ್ಘಟನೆಗಳು ನಮ್ಮ ಸಮಾಜದಲ್ಲಿರತಕ್ಕಂಥ ಕೆಲವು ದುಷ್ಟ ಶಕ್ತಿಗಳು, ಪರಿಸ್ಥಿತಿಯನ್ನು ನೋಡಿ ಮಾಡಿರತಕ್ಕದ್ದಾಗಿದೆ. ಆದರೆ ನಮ್ಮ ಸರಕಾರವು ಇದನ್ನು ಅಷ್ಟಕ್ಕೇ ಸೀಮಿತಗೊಳಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇಷ್ಟನ್ನು ಹೇಳುತ್ತಾ, ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯಗಳನ್ನು ಮಂಡಿಸಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ಮಾನ್ಯ ಅಧ್ಯಕ್ಷರವರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ರಾಮನಗರ, ಆಳಂದ್ ಹಾಗೂ ಬೆಳಗಾವಿಯಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನಗೆ ಈಗ ತಾವುಗಳು ಮಾತನಾಡಲು ಸಮಯವನ್ನು ನಿಗದಿ ಮಾಡಲಿಲ್ಲ. ನನಗೆ ಹೆಚ್ಚಿಗೆ ಸಮಯವೂ ಬೇಡ. ನನಗೆ ರಾಮನಗರಕ್ಕೆ ಹೋಗಿ, ಅಲ್ಲಿಂದ ಆಳಂದ್‌ಗೆ ಹೋಗಿ, ಅಲ್ಲಿಂದ ಮಹಾರಾಷ್ಟ್ರದ ಗಡಿಭಾಗದವರೆಗೆ ಹೋಗಿ ಬಿಟ್ಟು ಪುನಃ ಅಲ್ಲಿಂದ ಬೆಂಗಳೂರಿಗೆ ಬರುವವರೆಗೆ ಎಷ್ಟು ಸಮಯ ಬೇಕೋ ಅಷ್ಟು ಸಮಯವನ್ನು ಕೊಟ್ಟರೆ ಸಾಕು.

ಅಧ್ಯಕ್ಷರೇ, ಈ ವಿಷಯವನ್ನು ಒಂದು ದೃಷ್ಟಿಯಿಂದ ಇಲ್ಲಿ ಚರ್ಚೆ ಮಾಡಿ ಏನು ಪ್ರಯೋಜನ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಅಭಿಪ್ರಾಯವನ್ನು ಇಟ್ಟಿದ್ದರು ಎಂದು ನಾನು ಕೇಳಿದ್ದೆ. ಒಂದು ದೃಷ್ಟಿಯಿಂದ ಅದು ಪ್ರಯೋಜನ ಇಲ್ಲ ಎಂದು ಅವರು ಹೇಳಿದ್ದುದು ನಿಜ. ಏಕೆಂದರೆ ಘಟನೆಗಳು ಈಗಾಗಲೇ ಸ್ವಲ್ಪ ಹಳೆಯದಾಗಿವೆ. ನಾವು ಈಗ ಮಾಡತಕ್ಕಂಥಾದ್ದು, ಒಂದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೀತಿಯ ಮರಣೋತ್ತರ ಶವ ಪರೀಕ್ಷೆ. ಅದೂ ಎಂತಹ ಶವದ ಪರೀಕ್ಷೆಯನ್ನು ನಾವುಗಳು ಮಾಡುತ್ತಾ ಇದ್ದೇವೆ ಎಂದರೆ, ಆಗತಾನೆ ಡಿಕಾಂಪೋಸ್ಟ್ ಆಗಿರತಕ್ಕಂಥಾದ್ದು. ಈಗಾಗಲೇ ರೌಡಿಗಳ ಸತ್ತ ಶವವನ್ನು ಪೋಲೀಸರು ಹುಡುಕಾಡುತ್ತಾ ಇದ್ದರಲ್ಲಾ, ಅಂತಹ ಶವದ್ದು. ಆ ತರಹದ ಒಂದು ಶವ ಪರೀಕ್ಷೆಯನ್ನು ನಾವಿಲ್ಲಿ ಮಾಡುತ್ತಾ ಇದ್ದೇವೆ. ನಮ್ಮ ಉದ್ದೇಶ ಕೇವಲ ಈ ಸರಕಾರ ವನ್ನು ದೂಷಣೆ ಮಾಡುವುದಕ್ಕೋಸ್ಕರವಾಗಿ ಎಲ್ಲಾ ವಿಷಯಗಳನ್ನು ಎತ್ತುತ್ತೇವೆ ಎನ್ನತಕ್ಕಂಥ ಭಾವನೆ ಸರಿಯಲ್ಲ. ಇದನ್ನು ನಾವು ಚರ್ಚೆ ಮಾಡುವುದರಲ್ಲಿ, ಇದರಲ್ಲಿ ೨-೩ ಗಂಭೀರವಾದಂತಹ ವಿಷಯಗಳು ಅಡಗಿವೆ. ಒಂದು ಮಾತು ನಿಜ. ಸರಕಾರದ ವೈಫಲ್ಯಗಳನ್ನು ಖಂಡಿಸಲಿಕ್ಕೆ ಇಂತಹ ಸಂದರ್ಭಗಳನ್ನು ನಾವು ಪ್ರಾಮಾಣಿಕವಾಗಿ ಉಪಯೋಗಿಸಿಕೊಳ್ಳಬಹುದು. ನೀವು ತಮ್ಮದು ರಬ್ಬರ್ ಗುಂಡಿನ ಸರಕಾರ ಎಂದು ಹೇಳಿದ್ದೀರಿ. ಆದರೆ ನೀವು ಈಗ ಬೇರೆ ಗುಂಡನ್ನು ಹಾರಿಸುತ್ತಾ ಇದ್ದೀರಿ ಎಂದು ನಾವು ಹೇಳಬೇಕಾಗುತ್ತದೆ. ನಮಗೆ ಗೊತ್ತಿದೆ ನೀವು ಎಷ್ಟೇ ರಬ್ಬರ್ ಗುಂಡು ಎಂದು ಹೇಳಿದರೂ ಕೂಡ, ನೀವು ಹೇಳಿದ್ದನ್ನೇ ಒಂದು ರಬ್ಬರ್ ಗುಂಡು ಎಂದು ತಿಳಿದುಕೊಳ್ಳಬೇಕೇ ಹೊರತು ಯಾರೇ ಸರಕಾರವನ್ನು ರಬ್ಬರ್ ಗುಂಡಿನ ಮೂಲಕ ನಡೆಸುವುದಕ್ಕೆ ಸಾಧ್ಯ ಎಂದು ಒಂದು ತರಹದ ಭ್ರಮೆಯನ್ನು ಪಡುವಮಟ್ಟಕ್ಕೆ ಹೋಗುವಷ್ಟು ನಾವು ದಡ್ಡರಲ್ಲ. ಮತ್ತು ನೀವು ಹೇಳಿದ ಮಾತ್ರಕ್ಕೆ ಅದನ್ನು ನಂಬುವಷ್ಟು ದಡ್ಡತನವೂ ನಮ್ಮಲ್ಲಿ ಇಲ್ಲ. ಇಲ್ಲಿ ಪ್ರಶ್ನೆ ಏನು ಅಂದರೆ, ನೀವು ನಿನ್ನೆ ಇಲ್ಲಿ ಏನು ಹೇಳಿದ್ದೀರಿ, ಅದನ್ನು ನಾವು ಜ್ಞಾಪಕ ಮಾಡದೇ ಹೋಗಿ ಬಿಟ್ಟರೆ, ಸರಕಾರದ ಬಗ್ಗೆ ನಮ್ಮ ಕರ್ತವ್ಯವನ್ನು ನಾವು ಲೋಪ ಮಾಡಿದಂತಾಗುತ್ತದೆ. ಮತ್ತೊಂದು ಸಂದರ್ಭದಲ್ಲಿ ನೀವೆ ನಮಗೆ ಹೇಳಬಹುದು ಏತಕ್ಕಾಗಿ, ನೆನಪು ಮಾಡಿಲ್ಲ ಎಂದು. ಆದ್ದರಿಂದ ಈ ವಿಷಯಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ.

ಎರಡನೆಯದಾಗಿ, ಘಟನೆಗಳು ನಡೆದು ಹೋಗಿವೆ. ಆಗಬೇಕಾದ ಸಾವು ನೋವುಗಳು, ಕಷ್ಟ ನಷ್ಟಗಳು, ಆಸ್ತಿಪಾಸ್ತಿಗಳ ಹಾನಿ, ಲೂಟಿ, ಏನೆಲ್ಲಾ ನಡೆಯಬೇಕಾಗಿತ್ತೋ ಎಲ್ಲಾ ನಡೆದುಹೋಗಿವೆ. ನಾವು ಈಗ ನಡೆದಂತಹ ಘಟನೆಯನ್ನು ತಪ್ಪಿಸಲು ಸಾಧ್ಯವಿತ್ತೇ ಎಂದು ಯೋಚನೆ ಮಾಡಬೇಕಾಗು ತ್ತದೆ. ಮುಂದೆ ಒಂದು ದಿನ ಇಂತಹ ಒಂದು ಸಂದರ್ಭದಲ್ಲಿ ಏನಾದರೂ ಇಂತಹ ಘಟನೆಗಳು ನಡೆದಲ್ಲಿ, ಇವೊತ್ತು ನಾವು ಇದನ್ನು ತಪ್ಪಿಸಲು ಹೇಗೆ ಸಾಧ್ಯ ಎಂದು ಚರ್ಚಿಸಿದಲ್ಲಿ, ಅದಕ್ಕೆ ಉಪಾಯ ಗಳನ್ನು ಕಂಡುಹಿಡಿದಲ್ಲಿ ಮುಂದೆ ಇಂತಹ ಘಟನೆಗಳು ಆಗದಂತೆ ತಡೆಯುವುದಕ್ಕೆ ಈಗ ನಾವು ಮಾಡು ತ್ತಿರುವ ಚರ್ಚೆ ಉಪಯೋಗವಾಗಬಹುದು. ಈ ಒಂದು ಘಟನೆ ಪ್ರಾರಂಭ ಆಗಿ ಹೋಯಿತು, ಯಾರಿಂದಲೋ, ಯಾರ ತಪ್ಪಿನಿಂದಲೋ ಯಾರ ಒಂದು ದೋಷದಿಂದಲೋ ಅದು ಆಯಿತು. ಮಾನ್ಯ ಸಿಂಧ್ಯರವರು ಹೇಳಿದಂತೆ ಎಲ್ಲಾ ಪ್ರಾಮಾಣಿಕ ಪ್ರಯತ್ನಗಳನ್ನೂ ಮಾಡಿಯೂ, ಪಾರಗಟ್ಟಲೆ ಪ್ರಯತ್ನಗಳನ್ನು ಮಾಡಿಯೂ ಸಹ ಘಟನೆ ಪ್ರಾರಂಭವಾದರೆ, ಇಂತಹ ಘಟನೆಗಳನ್ನು ಈಗ ನಿರ್ವಹಿಸಿದ್ದಕ್ಕಿಂತಲೂ ಚೆನ್ನಾಗಿ ನಿರ್ವಹಿಸುವುದಕ್ಕೆ ಸಾಧ್ಯ ಇತ್ತೆ ಎಂದು ನಾವು ಯೋಚನೆ ಮಾಡ ಬೇಕಾಗುತ್ತದೆ. ಘಟನೆಗಳು ಆಗುತ್ತಾ ಇರುವುದು, ನಾವು ಅದನ್ನು ಒಂದು ತರಹದಲ್ಲಿ ಓಬೀರಾಯನ ಕಾಲದ ತರದಲ್ಲಿ ನಿರ್ವಹಿಸುವುದು, ಆ ರೀತಿಯಲ್ಲಿ ಪ್ರಯತ್ನ ಪಡುವುದು, ಈಗಿನ ಕಾಲಕ್ಕೆ ಸರಿಯಲ್ಲ. ಅದನ್ನು ನಾವು ಇನ್ನೂ ಉತ್ತಮವಾಗಿ ನಿರ್ವಹಿಸುವುದಕ್ಕೆ ಸಾಧ್ಯವಿದೆ. ನಮ್ಮ ಆಡಳಿತದಲ್ಲಿ ಏನು ವೈಫಲ್ಯತೆ ಇದೆ ಯಾವ ಯಾವ ರಾಜಕಾರಣದ ಆಯಾಮಗಳನ್ನು ನಾವು ನಿಯಂತ್ರಣ ಮಾಡಿಕೊಳ್ಳ ಬೇಕು ಎಂಬ ಇಂತಹ ಗಂಭೀರವಾದಂತಹ ವಿಷಯಗಳು ಇದರಲ್ಲಿ ಅಡಕವಾಗಿರುವುದರಿಂದ ಈ ಚರ್ಚೆಯು ಅತ್ಯಂತ ಪ್ರಸ್ತುತ ಎಂದು ನಾನು ಅಂದುಕೊಂಡಿದ್ದೇನೆ.

ಇವೊತ್ತು ರಾಮನಗರ, ಆಳಂದ್‌ನಲ್ಲಿ ನಡೆದಿರತಕ್ಕಂಥ ಘಟನೆ ಒಂದು ಸ್ವರೂಪದ್ದು ಇದೆ ಎಂದು ಎಲ್ಲರೂ ಹೇಳಿದರು. ಇದರಲ್ಲಿ ಸರಕಾರದ ವೈಫಲ್ಯತೆ ಎಲ್ಲಿ ಬರುತ್ತದೆ ಎಂದರೆ, ಪೋಲೀಸರು ಘಟನೆ ಎಲ್ಲಾ ಆದಮೇಲೆ ಬರುವುದು. ಅವರು ಮೊದಲೇ ಜಾಗೃತರಾಗಿದ್ದರೆ ಎಷ್ಟೋ ವಿಚಾರ ಗಳನ್ನು ಬಗೆಹರಿಸಬಹುದಾಗಿತ್ತು. ರಾಮನಗರದಲ್ಲಿ ಒಂದು ಕೋಮಿನವರು ಬೇಲಿ ಹಾಕಿದ ತತ್‌ಕ್ಷಣ ಕ್ರಮ ನಡೆಸಿದ್ದರೆ, ಹಾಗೆಯೇ ಮೆರವಣಿಗೆಯು ನಡೆಯುವಂತಹ ಕಾಲದಲ್ಲಿ ಪೋಲೀಸರು ಸರಿಯಾಗಿ ನಿಯಂತ್ರಣವನ್ನು ಹೊಂದಿದ್ದರೆ ಈ ಗಲಭೆಯನ್ನು ನಿಯಂತ್ರಣಕ್ಕೆ ತರುವುದಕ್ಕೆ ಸಾಧ್ಯವಾಗುತ್ತಿತ್ತು. ಒಂದು ಮಾತು ಸತ್ಯ, ಸಿನಿಮಾದಲ್ಲಿ ಪೋಲೀಸರು ಕೊನೆಗೆ ಬರುತ್ತಾರೆ. ಏಕೆಂದರೆ ಡೈರೆಕ್ಟರ್ ಪೋಲೀಸರನ್ನು ಮೊದಲು ಬರುವುದಕ್ಕೆ ಬಿಡುವುದಿಲ್ಲ. ಒಂದು ವೇಳೆ ಪೋಲೀಸರು ಬಂದರೆ ಹೀರೋ ಫೇಲ್ ಆಗುತ್ತಾನೆ. ಅದಕ್ಕೋಸ್ಕರವಾಗಿ ಹೊಡೆದು, ಚಚ್ಚಿ, ಬಡಿದಾಡಿ, ಎಲ್ಲವೂ ಮುಗಿದ ಮೇಲೆ ಪೋಲೀಸರು ಕಥೆಯ ಪ್ರಕಾರ ಬರುತ್ತಾರೆ. ಆದರೆ, ಇಲ್ಲಿ ಯಾವ ಡೈರೆಕ್ಟರ್ ಪೋಲೀಸರನ್ನು ಮೊದಲು ಬಿಡುವುದಿಲ್ಲ ಎಂದು ನಮಗೆ ಬೇಕು. ಇವರು ಸಿನಿಮಾವನ್ನು ನೋಡಿಕೊಂಡು ತಮ್ಮ

ಕಾರ್ಯವೈಖರಿಯನ್ನು ರೂಪಿಸಿಕೊಳ್ಳುತ್ತಾರೆಯೋ ಏನೋ ಎಂಬ ಒಂದು ಅನುಮಾನವು ನಮಗೆ ಬರುತ್ತಿದೆ. ಇದನ್ನು ನಾನು ಈ ಸರಕಾರಕ್ಕೆ ಮಾತ್ರ ಇವೊತ್ತು ಹೇಳುತ್ತಾ ಇಲ್ಲ. ಕೇಂದ್ರ ಸರ್ಕಾರದ ಗೃಹಸಚಿವರಾಗಿರತಕ್ಕಂತಹ ಮಾನ್ಯ ಬೂಟಾಸಿಂಗ್‌ರವರು ಹೇಳಿದ್ದಾರೆ. ಇವೊತ್ತು ನಮ್ಮ ಅಪ್ರೋಚ್ ಹೇಗೆ ಇದೆ ಎಂದರೆ, ಬೆಂಕಿ ಹತ್ತಿದ ಮೇಲೆ ಅಲ್ಲಿಗೆ ಹೋಗಿ ಬಿಟ್ಟು, ನಮ್ಮ ಯಥಾನುಶಕ್ತಿಯಿಂದ ನಂದಿಸುವ ಪ್ರಯತ್ನವನ್ನು ಮಾಡತಕ್ಕಂಥ ಅಪ್ರೋಚ್ ನಮ್ಮದಾಗಿದೆ. ಅದನ್ನು ಬದಲಾವಣೆ ಮಾಡಬೇಕು ಎಂದು. ನಾವು ಯಾವುದೇ ಘಟನೆಗಳು ಆಗುವುದಕ್ಕೆ ಮುಂಚೆ, ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ, ಅದನ್ನು ನಿರ್ವಹಿಸುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇವೊತ್ತು ಏನಾಗಿದೆ ಎಂದರೆ ನಾವು ಕಮ್ಯೂನಲ್ ವೈಲೆನ್ಸ್ ಆದಮೇಲೆ ಶಾಂತಿ ಸಮಿತಿಯನ್ನು ಸ್ಥಾಪನೆ ಮಾಡುತ್ತೇವೆ. ಅಂದರೆ ಘಟನೆ ಆಗಿ ೧೫ ದಿವಸಗಳ ಮೇಲೆ ಈ ಸಮಿತಿಯು ಸ್ಥಾಪನೆಯಾಗುತ್ತಿದೆ. ಮಾನ್ಯ ಯಡಿಯೂರಪ್ಪನವರ ಒಂದು ಮಾತಿಗೆ ನಾನು ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಕೋಮು ಸೌಹಾರ್ದತೆ ಎನ್ನತಕ್ಕಂಥಾದ್ದು ಒಂದು ನಿರರ್ಥಕವಾದ ವಿಚಾರ. ಇದಕ್ಕೆ ಒಂದು ನೆಗೆಟೀವ್ ಪ್ರೊಪೋಸಿಷನ್ ಆಗಿದೆ. ಒಟ್ಟಿನಲ್ಲಿ ಗಲಾಟೆ ಆಗದಿದ್ದರೆ ಸರಿ ಎಂದು ಹೇಳುತ್ತಾರೆ. ಆದರೆ ಅದನ್ನೇ ಒಂದು ಇತ್ಯರ್ಥಕವಾದ, ಗುಣಾತ್ಮಕವಾದ ಪಾಸಿಟಿವ್ ಪ್ರೊಪೋಸಿಷನ್ ಆಗಿ ನಾವು ಮಾಡಬೇಕಾಗಿದೆ. ಇವೊತ್ತು ಈ ನಮ್ಮ ರಾಷ್ಟ್ರದಲ್ಲಿ ಎಲ್ಲಾ ಜಾತಿ, ಧರ್ಮಗಳ ಜನರು ಒಟ್ಟಿಗೆ ಬಾಳಬೇಕಾದುದು ಅನಿವಾರ್ಯವಾಗಿದೆ. ಇಂತಹ ವಾತಾವರಣದಲ್ಲಿ ಅವರ ಮಧ್ಯೆ ಒಳ್ಳೆಯ ರೀತಿಯ ಬಾಂಧವ್ಯವು ೩೬೫ ದಿನಗಳೂ ಕುದುರದಿದ್ದರೆ ಅದು ಸಾಧ್ಯವಾಗುವುದಿಲ್ಲ, ಅದಕ್ಕಾಗಿ ಆ ಒಳ್ಳೆಯ ಬಾಂಧವ್ಯವನ್ನು ಸೃಷ್ಟಿಸಿ ಒಳ್ಳೆಯ ವಾತಾವರಣವನ್ನು ನಾವು ಎಲ್ಲಾ ದಿನಗಳಲ್ಲೂ ಸ್ಥಾಪಿಸಲು ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅಂತಹ ಒಂದು ಪ್ರಯತ್ನವನ್ನು ನಾವು ಎಷ್ಟೋ ಕಡೆಗಳಲ್ಲಿ ಮಾಡಿದ್ದೇವೆ. ಸಾಗರದಲ್ಲಿ ಗಣಪತಿ ಉತ್ಸವದ ಸಂದರ್ಭಗಳಲ್ಲಿ ಮೊದಲು ಯಾವಾಗಲೂ ಗಲಾಟೆ ಆಗುತ್ತಿತ್ತು. ಈಗ ಆ ತರಹದ ಗಲಾಟೆಯು ಆಗುವುದಿಲ್ಲ, ಏಕೆಂದರೆ ಉತ್ಸವದ ಮುಖಂಡರನ್ನಾಗಿ ಒಬ್ಬ ಮುಸ್ಲಿಂ ಬಾಂಧವರನ್ನು ಮಾಡಿದ್ದೇವೆ. ಅದರಿಂದಾಗಿ ಅದು ನಿಂತು ಹೋಯಿತು. ಹಾಗೆಯೇ ಧಾರ್ಮಿಕ ಆಚರಣೆಯಲ್ಲಿ ನಾವು ಭಾಗವಹಿಸುವುದು ಬೇಡ, ಒಬ್ಬರ ಹಬ್ಬದಲ್ಲಿ ಇನ್ನೊಬ್ಬರು ತೊಡಗತಕ್ಕಂತಹ ಒಂದು ಭಾವನಾತ್ಮಕವಾದ, ತಾದಾತ್ಮಿಕವಾಗಿ ಹೊಂದಿಕೊಳ್ಳತಕ್ಕಂತಹ ಒಂದು ಸನ್ನಿವೇಶವನ್ನು ನಿರ್ಮಾಣ ಮಾಡಬೇಕು. ಕೋಮುವಾರು ಸೌಹಾರ್ದತೆ ಗಲಾಟೆ ಆದಮೇಲೆ ಬರತಕ್ಕಂತಹ ವಿಚಾರ ಇಲ್ಲ. ಗಲಾಟೆ ಆಗದ ರೀತಿಯಲ್ಲಿ ತಡೆಗಟ್ಟತಕ್ಕಂಥಾದ್ದರಲ್ಲಿ ಗುಣಾತ್ಮಕವಾದಂತಹ ವಿಚಾರವಾಗಿ ಇದನ್ನು ನಾವು ಪ್ರತಿಪಾದಿಸಬೇಕಾಗಿದೆ. ಇದಕ್ಕೆ ಒಂದು ಸಾಂಸ್ಥಿಕವಾದಂತಹ ರೂಪವನ್ನು ಕೊಡಬೇಕು. ಆಂದೋಲನವನ್ನು ಮಾಡಬೇಕು. ಆ ರೀತಿಯ ಒಂದು ಮೂವ್‌ಮೆಂಟ್‌ಗೆ ನಾವು ಪ್ರಚೋದನೆಯನ್ನು ಕೊಡಬೇಕು. ಅದಕ್ಕೆ ಬೇಕಾದಂತಹ ರಾಜಕೀಯ ಪ್ರಬುದ್ಧತೆಯನ್ನು ತೋರಿಸಬೇಕು. ಯಾವುದೇ ಒಂದು ಊರಿನಲ್ಲಿ ಪ್ರಚೋದಾತ್ಮಕವಾದಂತಹ ವಿಚಾರ ಇದ್ದರೆ, ಅಲ್ಲಿ ಮೊದಲೇ ಕ್ರಮವನ್ನು ಸೂಕ್ತವಾಗಿ ತೆಗೆದುಕೊಂಡರೆ ಅದು ಜರುಗುವುದಿಲ್ಲ. ನಮ್ಮ ಊರಿನಲ್ಲಿ ಮಸೀದಿಯ ಗೋಡೆಗೆ ತಾಗಿ ಗಣಪತಿ ದೇವಸ್ಥಾನ ಇದೆ, ಮಸೀದಿಗೆ ಎದುರಿಗೆ ಇರುವ ಕೆರೆಯ ಹೆಸರೂ ಗಣಪತಿ ದೇವಸ್ಥಾನದ ಕೆರೆ ಎಂದು. ಆ ಕೆರೆಯ ನೀರನ್ನು ಉಪಯೋಗಿಸತಕ್ಕಂತಹವರು ಹೆಚ್ಚಾಗಿ ಮುಸಲ್ಮಾನರೇ, ಅಲ್ಲಿಗೆ ಗಣಪತಿ ಹೋದಾಗಲೆಲ್ಲ ಗಲಾಟೆ ಆಗುತ್ತಿತ್ತು. ಒಂದು ಸಾರಿಯಂತೂ ಗಣಪತಿಯು ಗಲಾಟೆಯಿಂದಾಗಿ ಲಾಕ್‌ಅಪ್‌ನಲ್ಲಿ ಕೆಲವು ದಿನಗಳು ಇದ್ದು, ಅಲ್ಲಿಂದ ಕೋರ್ಟಿಗೆ ಹೋಗಿ ಬಿಡುಗಡೆಯಾಗಿ ಬರುವಂತಹ ಪರಿಸ್ಥಿತಿಯೂ ಬಂತು. ಬಿಡುಗಡೆಯಾಗಿ ಬಂದಮೇಲೆ ಬೇರೆ ಕೆರೆಯಲ್ಲಿ ವಿಸರ್ಜನೆಯಾಯಿತು. ಹಾಗೆಯೇ ಶಿವಮೊಗ್ಗದಲ್ಲಿನ ಅಮೀರ್ ಅಹಮದ್ ಸರ್ಕಲ್ ವಿಚಾರ. ಅಲ್ಲಿ ಒಂದು ಕೊಡೆ ಇದೆ. (ಟ್ರಾಫಿಕ್ ಅಂಬ್ರೆಲ್ಲಾ) ಆ ಕೊಡೆಯಲ್ಲಿ ಯಾರು ಬಾವುಟ ಮೊದಲು ಹಾರಿಸುವುದು ಎಂಬ ಬಗ್ಗೆ ಯಾವಾಗಲೂ ತೊಂದರೆ, ಗಲಾಟೆಗಳು ಉದ್ಭವವಾಗುತ್ತಿತ್ತು. ಈಗ ಏನು ಮಾಡಿದ್ದೇವೆ ಎಂದರೆ ಅಲ್ಲಿನ ಆ ಕೊಡೆಯನ್ನು ತೆಗೆದುಹಾಕಿ ಆ ಜಾಗದಲ್ಲಿ ಟ್ರಾಫಿಕ್ ಲೈಟ್‌ನ್ನು ಜೋಡಿಸಿದ್ದೇವೆ. ಈಗ ಅಲ್ಲಿ ಯಾವ ಗಲಾಟೆಯೂ ಆಗುತ್ತಿಲ್ಲ, ಸಮಾಧಾನ ಇದೆ. ಇನ್ನೊಂದು ಕೊಡೆಯನ್ನು ಹುಡುಕುವವರೆಗೂ ಗಲಾಟೆ ಆಗಲಿಕ್ಕಿಲ್ಲ. ಇಂತಹ ಸಿಂಪ್ಟಮ್ಯಾಟಿಕ್ ಕ್ಯೂರ್ ಇಂಥ ಘಟನೆಗಳಿಗೆ ಕೊನೆ ಎಂದು ನಾನು ಹೇಳುವುದಿಲ್ಲ. ಆದರೂ ಕೂಡ ಇಂತಹ ಕೆಲವು ಇರಿಟೆಂಟ್ಸ್ ಏನು ಇದ್ದಾವೆ, ಇವುಗಳ ಬಗ್ಗೆ ಸ್ವಲ್ಪ ಕಲ್ಪನಾ ಶಕ್ತಿಯನ್ನು ಉಪಯೋಗಿಸಿ ನಮ್ಮ ಅಧಿಕಾರಿಗಳು ಕೆಲಸ ಮಾಡಿದರೆ, ಖಂಡಿತವಾಗಿಯೂ ನಾವುಗಳು ಇಂತಹ ದುರ್ಘಟನೆಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ. ಇವೊತ್ತು ಅಧಿಕಾರಿಗಳು ಎಂದರೆ ಸರ್ಕಾರದಲ್ಲಿ ಏನಾಗಿದೆ ಎಂದರೆ ಯಾವ ಅಧಿಕಾರಿಯನ್ನಾದರೂ ಯಾವ ಕೆಲಸಕ್ಕಾದರೂ ಹಾಕಬಹುದು ಎನ್ನುವ ಭಾವನೆ ಇದೆ. ಐ.ಎ.ಎಸ್. ಅಧಿಕಾರಿಯನ್ನು

ಡೆಪ್ಯೂಟಿ ಕಮಿಷನರನ್ನಾಗಿಯಾದರೂ ಹಾಕಬಹುದು. ಇಲ್ಲವೇ ಯಾವುದಕ್ಕಾದರೂ ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ಹಾಕಬಹುದು ಇಲ್ಲವೇ ಎಲ್ಲಿಗಾದರೂ ಛೇರ್ಮನ್ ಆಗಿಯಾದರೂ ಹಾಕಬಹುದು. ಆದರೆ ಪೋಲೀಸ್ ಎಂದರೆ ಅವರದೇ ಒಂದು ಟೆಂಡೆನ್ಸಿ ಇದೆ. ಇವರಂತೆ ಅಲ್ಲ. ಕಮ್ಯೂನಲ್ ಡಿಸ್ಟರ್ಬೆನ್ಸ್ ಎಲ್ಲಿ ಇದೆ ಆ ಜಾಗಕ್ಕೆ ಪೋಲೀಸ್ ಅಧಿಕಾರಿಗಳನ್ನು ಹಾಕಬೇಕಾದರೆ ಸ್ವಲ್ಪ ವಿಚಾರ ಮಾಡಬೇಕು. ಅಲ್ಲಿಯ ವಿದ್ಯಮಾನಗಳನ್ನು ಅರಿತಿರತಕ್ಕಂಥ, ಅಲ್ಲಿನ ಜನರ ಸಾರ್ಥಕತೆಗಳನ್ನು ಅರಿತು ಸುರಿತು ತಿಳಿದುಕೊಳ್ಳುವಂಥಾವರನ್ನು ಅಲ್ಲಿಗೆ ಹಾಕಬೇಕು. ಪೋಲೀಸ್ ಆಡಳಿತ ಹೇಗೆ ಇದೆ ಎಂದರೆ ಒಬ್ಬ ಸಬ್ ಇನ್‌ಸ್ಪೆಕ್ಟರ್‌ನ್ನು ಯಾವ ಜಾಗಕ್ಕಾದರೂ ಹಾಕಬೇಕಾದರೆ ತಮಗೆ ಎಲ್ಲಿ ಬೇಕೋ ಆ ಜಾಗಕ್ಕೆ ಹಾಕುವುದು, ಎಲ್ಲಿ ಬೇಡವೋ ಆ ಜಾಗಕ್ಕೆ ಅವನನ್ನು ಹಾಕುವುದಿಲ್ಲ. ಹೀಗಾದರೆ ಆ ಜನರಿಗೆ ಏನು ಪ್ರಯೋಜನವಾಗುತ್ತದೆ ? ಈ ರೀತಿಯಾದ ಒಂದು ಚಿಂತನೆ ಸರ್ಕಾರದ ಮಟ್ಟದಲ್ಲಿದೆ. ನಾನು ಶ್ರೀಮಾನ್ ಬಿ. ರಾಚಯ್ಯನವರನ್ನು ಕೇಳುತ್ತೇನೆ. ನಿಮಗೆ ಈ ಬಗ್ಗೆ ಚಿಂತನೆ ಏನಾದರೂ ಇದೆಯೋ ? ಒಂದುವೇಳೆ ಚಿಂತನೆ ಇದ್ದರೂ ಕೂಡ ಅದನ್ನು ನಿಭಾಯಿಸಿಕೊಂಡು ಹೋಗುವ ಸಾಮರ್ಥ್ಯತೆ ಇದೆಯೋ ? ಎಂದು ಕೇಳುತ್ತೇನೆ. ಯಾರನ್ನು ಎಲ್ಲಿ ಹಾಕಬೇಕು, ಎಲ್ಲಿಗೆ ಹಾಕಬಾರದು ಎಂದು ಆಲೋಚನೆ ಮಾಡಿ ಹಾಕಬೇಕು. ಕೋಮು ಘರ್ಷಣೆ ಎಲ್ಲಿ ಇರುತ್ತದೆಯೋ, Communal disturbance prone areas ಎಲ್ಲಿ ಇರುತ್ತದೆಯೋ ಆ ಜಾಗಕ್ಕೆ ಸರಿಯಾದಂಥ ವ್ಯಕ್ತಿಗಳನ್ನು, ಅಲ್ಲಿನ ಹಿನ್ನೆಲೆಯನ್ನು, ಅಲ್ಲಿನ ವಾತಾವರಣವನ್ನು ತಿಳಿದುಕೊಂಡಿರತಕ್ಕಂಥ ಒಳ್ಳೆಯ ಪೋಲೀಸ್ ಅಧಿಕಾರಿಯನ್ನು ಹಾಕಬೇಕು. ಮತ್ತು ಕೋಮು ಸೌಹಾರ್ದಗಳಲ್ಲಿ ನಂಬಿಕೆ ಇರತಕ್ಕಂಥ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು ಇಲ್ಲದೇ ಹೋದರೆ, ಕೋಮು ಸೌಹಾರ್ದತೆಗಳಲ್ಲಿ ನಂಬಿಕೆ ಇಲ್ಲದೇ ಇರತಕ್ಕಂಥ ಅಧಿಕಾರಿಗಳು ಆ ಜಾಗಕ್ಕೆ ಹಾಕಿದರೆ ಬಹಳ ತೊಂದರೆಯಾಗುತ್ತದೆ. ಈ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಅಗ್ರ ಲೇಖನಗಳು ಬಂದಿವೆ. ಡೆಕ್ಕನ್ ಹೆರಾಲ್ಡ್‌ನಲ್ಲಿ ಟೈಂಸ್ ಆಫ್ ಇಂಡಿಯಾದಲ್ಲಿ ಬಂದಿವೆ. ಟೈಂಸ್ ಆಫ್ ಇಂಡಿಯಾದಲ್ಲಿ ಈ ರೀತಿ ಬಂದಿದೆ. failure to intellegence nerves ಎಂದು ಯಾವ ಸಂದರ್ಭದಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿಲ್ಲ. ತಮಗೆ ಹೇಳಬೇಕಾದರೆ ರಾಮನಗರದಲ್ಲಿ ಗಲಭೆ ಆದುದು ಅಲ್ಲಿ ಒಂದು ಕಡೆ ಬೇಲಿ ಹಾಕುವ ಸಂದರ್ಭ ಬಂದಾಗ ಆದುದ್ದು. ಆ ಸಂದರ್ಭದಲ್ಲಿ ಅಫಿಷಿಯಲ್ ಇಂಟರ್‌ವೀನ್ ಯಾವ ರೀತಿ ಆಗಬೇಕಾಗಿತ್ತೋ ಆ ರೀತಿ ಆಗಲಿಲ್ಲ. ಆ ಸಂದರ್ಭದಲ್ಲಿ ಪೋಲೀಸ್ ಸಾಕಷ್ಟು ಸಂಖ್ಯೆಯಲ್ಲಿ ಇರಲಿಲ್ಲ. ಆಗ ಪೋಲೀಸ್ ಇಂಟಲಿಜೆನ್ಸ್ ಸರಿಯಾಗಿ ಕೆಲಸ ಮಾಡಿದ್ದರೆ ಅಲ್ಲಿ ಆಗತಕ್ಕಂಥ ಗಲಭೆಗಳನ್ನು ತಪ್ಪಿಸಬಹುದಾಗಿತ್ತು. ಇದರ ಬಗ್ಗೆ ಮುನ್ನೆಚ್ಚರಿಕೆಯಾಗಿ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಜುಲೈ ೨೭ರ ಟೈಮ್ಸ್ ಆಫ್ ಇಂಡಿಯಾದಲ್ಲಿ Senseless Violence View point ಎಂದು ಶ್ರೀ ರಾಘವನ್ ಅವರು ಒಂದು ಅಗ್ರ ಲೇಖನವನ್ನು ಬರೆದಿದ್ದಾರೆ. I think, it is one of the very beautiful analysis that we can find. ಆತನು ಈ ಬಗ್ಗೆ ಹೇಗೆ ಮಾಡಬೇಕು ? ಅವರ ಚಿಂತನೆ ಏನು ? ತಮ್ಮ ಚಿಂತನೆ ಏನು? ಈ ಬಗ್ಗೆ ಬರೆದಿದ್ದಾರೆ. ಅದು ಇಂಗ್ಲೀಷ್‌ನಲ್ಲಿ ಇದೆ. ಅದನ್ನು ನಾನು ಜೆರಾಕ್ಸ್ ಮಾಡಿಸಿ ಶ್ರೀ ಬಿ. ರಾಚಯ್ಯನವರಿಗೆ ಕಳುಹಿಸಿಕೊಡುತ್ತೇನೆ. ಅದನ್ನು ಅವರು ಸರಿಯಾಗಿ ಓದಿಕೊಳ್ಳಬೇಕು ಅದನ್ನು ಓದಿಕೊಂಡು ಅವರ ಮನಸ್ಸನ್ನು ಆರಾಮವಾಗಿ ವಿಸ್ತರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅದೇರೀತಿಯಲ್ಲಿ ಇನ್ನೂ ಅನೇಕ ಲೇಖನಗಳು ಕೆಲವು ಪತ್ರಿಕೆಗಳಲ್ಲಿ ಬಂದಿವೆ. ಏತಕ್ಕೆಂದರೆ ಇದರ ಬಗ್ಗೆ ಅವರು ಚಿಂತನೆ ಹರಿಸಬೇಕು ಎನ್ನುವುದೇ ಮುಖ್ಯ ಪ್ರಶ್ನೆ. ಕೆಲವರು ದೇವರು, ಧರ್ಮ, ದೇವಸ್ಥಾನ ಎನ್ನುವುದರ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದಾರೆ. ಕಮ್ಯೂನಿಸ್ಟ್‌ವರು ದೇವಸ್ಥಾನಕ್ಕೆ ಹೋಗದೇ ಇರಬಹುದು, ಚರ್ಚಿಗೆ ಹೋಗದೇ ಇರಬಹುದು. ಆದರೆ ರಾಷ್ಟ್ರದಲ್ಲಿ ಬಹುಪಾಲು ಜನ ದೇವರಲ್ಲಿ ನಂಬಿಕೆ ಇಟ್ಟುಕೊಂಡಿರುವವರು ಇದ್ದಾರೆ. ಈ ಕಮ್ಯೂನಿಸ್ಟ್‌ನವರು ಅಲ್ಲ, ಬೇರೆ ಇನ್ನೊಂದು ಕಮ್ಯೂನಿಸ್ಟ್‌ನವರು ಬಂದರೂ ಅವರಲ್ಲಿ ಈ ದೇವರಲ್ಲಿ ನಂಬಿಕೆ ಬರುವುದು ಕಷ್ಟ. ಬಹುಶಃ ಒಂದು ವೇಳೆ ಒಂದು ತಲೆಮಾರು ಹೋಗಿ ಬೇರೆ ಇನ್ನೊಂದು ತಲೆಮಾರು ಬಂದು ಆವಾಗ ಇನ್ನೊಂದು ಕಮ್ಯುನಿಸ್ಟ್‌ನವರು ಬಂದರೆ ಅವರು ಈ ಬಗ್ಗೆ ಏನಾದರೂ ಕ್ರಿಯೇಟ್ ಮಾಡಿದರೆ ಆಗಬಹುದು. ಚೈನಾ ದೇಶದಲ್ಲಿ ರಾಮಕೃಷ್ಣ ಅದಕ್ಕೆ ಹೆಸರು ಕೊಟ್ಟರೆ ಆಗಬಹುದು. ದಿನನಿತ್ಯ ನಾವು ನೋಡುತ್ತಾ ಇದ್ದೇವೆ. ಒಂದು ಮಾತು ಹೇಳುತ್ತೇನೆ ಮನುಷ್ಯನ ಮನಸ್ಸಿನಲ್ಲಿ ಇರತಕ್ಕಂಥ ಒಂದು ನಂಬಿಕೆಯನ್ನು ಯಾವ ಸರ್ಕಾರ ಬಂದರೂ ಕೂಡ ತೆಗೆದು ಹಾಕುವುದಕ್ಕೆ ಸಾಧ್ಯವಿಲ್ಲ. ಹಾಗೆ ತೆಗೆದುಹಾಕಬೇಕು ಎಂದು ಹೊರಟರೆ ಅದು ಮತ್ತಷ್ಟು ಜಾಸ್ತಿಯಾಗುತ್ತದೆಯೋ ವಿನಹ ಕಡಿಮೆಯಾಗುವುದಿಲ್ಲ. ಏತಕ್ಕೆಂದರೆ ಅವನು ಈ ಬಗ್ಗೆ ಸರಿಯಾಗಿ ಹೊಂದಿಕೊಂಡು ಹೋಗುವುದಕ್ಕಾಗುವುದಿಲ್ಲ. ಇದಕ್ಕೆ ಒಂದೇ ದಾರಿ ಏನೆಂದರೆ ಮುಸ್ಲಿಮರು, ಕ್ರಿಶ್ಚಿಯನ್ನರು

ಇವರೆಲ್ಲಾ ಹಿಂದೂಗಳ ಹಬ್ಬವನ್ನು ಹೆಚ್ಚು ಹೆಚ್ಚು ಆಚರಿಸಿದರೆ, ಆಗ ಅವರಿಬ್ಬರಿಗೆ ಬೆರೆತುಕೊಂಡು ಕೆಲಸ ಮಾಡಿದರೆ ಇದು ಪರಿಹಾರವಾಗಬಹುದು. ಇಲ್ಲದೇ ಹೋದರೆ ಈ ಬಗ್ಗೆ ಯಾವ ರೀತಿಯಾಗಿಯೂ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನನ್ನ ಸ್ನೇಹಿತರಿಗೆ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ವಿಷಯ ಏನೆಂದರೆ ಇಂಥ ಘಟನೆಗಳು ನಡೆದಾಗ ಒಂದು ಎನ್‌ಕ್ವೈರಿ ಕಮಿಷನ್ ಮಾಡಿಬಿಡುತ್ತಾರೆ. ಅವರು ಈ ಬಗ್ಗೆ ಎನ್‌ಕ್ವೈರಿ ಮಾಡಿ ಅವರದೇ ಆದ ಒಂದು ತೀರ್ಮಾನ ಮಾಡಿ ಸರ್ಕಾರಕ್ಕೆ ವರದಿ ಕೊಟ್ಟುಬಿಡುತ್ತಾರೆ. ಯಾರಾದರೂ ಒಬ್ಬ ಸಬ್ ಇನ್‌ಸ್ಪೆಕ್ಟರು ದಿಕ್ಕು ದಿವಾಳಿ ಇಲ್ಲದೇ ಇದ್ದವನು ಇದ್ದರೆ ಅಂಥಾವನನ್ನು ಮನೆಗೆ ಕಳುಹಿಸುತ್ತಾರೆ. ಯಾರಾದರೂ ಮೇಲ್ಪಟ್ಟ ಆಫೀಸರು ಇದ್ದರೆ, ಅಂಥಾವರಿಗೆ ಪ್ರಮೋಷನ್ ಕೊಡುತ್ತಾರೆ. ಹೀಗೆ ಮಾಡುವುದರಿಂದ ಎನ್‌ಕ್ವೈರಿಯಿಂದ ಏನು ಅನುಕೂಲವಾಯಿತು ? ಯಾವನು ಇದರ ಮೇಲ್‌ಜವಾಬ್ದಾರಿಯನ್ನು ಹೊತ್ತುಕೊಂಡಿರುತ್ತಾನೋ ಅವನಿಗೆ ರಾಜಕೀಯ ಮೆಟ್ಟಲು ಇರುತ್ತದೆ, ಆದುದರಿಂದ ಅಂಥವನನ್ನು ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಅಂಥವರ ಬಗ್ಗೆ ಇದುವರೆಗೆ ಏನೂ ಆಗಿಲ್ಲ. ಈ ಎನ್‌ಕ್ವೈರಿ ಕಮಿಷನ್ನಿನ ಪಾಠಗಳನ್ನು ಇವರು ಒಪ್ಪಿಕೊಳ್ಳುವುದು ಇದು ಒಂದು ಪರಿಪಾಠವಾಗಿದೆ. ಇದು ಒಂದು ರೊಟೀನ್ ವರ್ಕ್ ಇದ್ದ ಹಾಗೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಂದು ರೀತಿಯಲ್ಲಿ ಸರ್ವೇ ಸಾಧಾರಣ ಎನ್ನುವ ಧೋರಣೆಯನ್ನು ಹೊಂದಿದ್ದಾರೆ. ಸರ್ಕಾರದಲ್ಲಿ ಈರೀತಿ ಒಂದು ಧೋರಣೆಯಾದರೆ ಆ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಈ ರೀತಿಯಾಗಿ ಮತ್ತೆ ಏನಾದರೂ ಎನ್‌ಕ್ವೈರಿ ಆದರೆ ನಿಜವಾಗಿಯೂ ಅದರಲ್ಲಿ ಪ್ರತಿಷ್ಠಿತರು ಯಾರೇ ಇರಲಿ ಅವರು ತಪ್ಪಿತಸ್ಥರಾಗಿದ್ದರೆ ಅವರು ಆ ಬಗ್ಗೆ ಶಿಕ್ಷೆಯನ್ನು ಅನುಭವಿಸಲೇ ಬೇಕು. ಇದರಲ್ಲಿ ತಾವು ವಿಫಲರಾಗಿದ್ದೀರಿ, ಉನ್ನತ ಮಟ್ಟದ ಅಧಿಕಾರಿಗೆ ಯಾವ ಶಿಕ್ಷೆಯೂ ಇಲ್ಲದೆ ಇರುವುದು ಸರಿಯಲ್ಲ. ಈ ಬಗ್ಗೆ ನಿಮ್ಮ ದಿಟ್ಟತನವನ್ನು ತೋರಿಸಿ, ಹಾಗಾದರೆ ನಿಮ್ಮ ಆಡಳಿತದಲ್ಲಿ ದಿಟ್ಟತನ ಬರುತ್ತದೆ. ಆವಾಗ ಇದು ಪುನರಾವರ್ತನೆ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಈ ಕೆಲಸ ಮಾಡಬೇಕು.

ಇನ್ನು ರಾಮನಗರದಲ್ಲಿ ಮತ್ತು ಆಳಂದ್‌ನಲ್ಲಿ ಈ ಎರಡು ಕಡೆಗಳಲ್ಲಿ ಏನು ಏನು ಗಲಭೆಗಳು ನಡೆದವು, ಈ ಬಗ್ಗೆ ಪತ್ರಿಕೆಯಲ್ಲಿ ಏನು ಬಂದಿದೆ ಅದರ ವರದಿ ನೋಡಿದಾಗ ಮೊದಲನೆಯದಾಗಿ ನನಗೆ ಏನು ಅನ್ನಿಸುತ್ತದೆ ಎಂದರೆ ಇವರ ಆಡಳಿತದಲ್ಲಿ ಸ್ವಲ್ಪ ಚುರುಕು ಆಗಿದ್ದರೆ ಇದನ್ನು ತಡೆಯಬಹುದಾಗಿತ್ತು. ಇದನ್ನು ತಡೆಯಲಾರದೆ ಒಂದು ದೊಡ್ಡ ಪ್ರಚೋದನೆ ಮಾಡುವ ಹಾಗೆ ಮಾಡಿದ್ದಾರೆ. ಇದನ್ನು ಪ್ರಚೋದನೆ ಮಾಡಿದ್ದರಿಂದ ಆ ಜನಗಳ ಮನಸ್ಸು ಒಂದು ತರಹ ವಕ್ರ ದೃಷ್ಟಿಕಡೆಗೆ ತಿರುಗಿ ಇದ್ದು, ಅದು ಉಲ್ಬಣವಾಗುವ ಪರಿಸ್ಥಿತಿಗೆ ಬಂತು. ಇಲ್ಲದೇ ಹೋದರೆ ಇದು ಅಷ್ಟು ಉಲ್ಬಣವಾಗುತ್ತಿರಲಿಲ್ಲ. ಮೊದಲೇ ಮುಂಜಾಗ್ರತೆಯನ್ನು ವಹಿಸಿದ್ದರೆ ಇದನ್ನು ತಡೆಯುವುದಕ್ಕೆ ಸಾಧ್ಯ ಇತ್ತು. ಇವರು ಮುಂಜಾಗ್ರತೆಯಾಗಿ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದೇ ಇದ್ದುದರಿಂದ, ಅದನ್ನು ನಿವಾರಣೆ ಮಾಡುವುದಕ್ಕೆ ಆಗದೇ ಹೋದುದರಿಂದ ಆ ಜನರು ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುವುದಕ್ಕೆ, ಹಾನಿಯಾಗುವುದಕ್ಕೆ ಕಾರಣವಾಯಿತು. ಇದರಿಂದ ಆ ಸಂದರ್ಭದಲ್ಲಿ ಅವರ ಆಸ್ತಿಪಾಸ್ತಿಗಳ ಮೇಲೆ ಲೂಟಿಯಾಗಿದೆ. ಇನ್ನು ಹೆಚ್ಚಿಗೆ ಹೇಳಿದರೆ ಶ್ರೀಮಾನ್ ರಾಚಯ್ಯನವರಿಗೆ ನೋವಾಗಬಹುದು. ಅವರಿಗೆ ಸಿಟ್ಟು ಬರುವ ಹಾಗೆ ಇದ್ದರೆ ನಾನು ಹೆಚ್ಚು ಹೇಳುತ್ತಿದ್ದೆ. ಅವರು ಸಿಟ್ಟು ಮಾಡಿ ಕೊಳ್ಳುವುದಿಲ್ಲ. ಅವರ ಪ್ರಾಮಾಣಿಕತೆ ಬಗ್ಗೆ ಈಗಾಗಲೇ ಹೇಳಿದ್ದಾರೆ. ಅವರು ಗೃಹ ಸಚಿವರಾಗಿ ಕುಳಿತುಕೊಂಡಿದ್ದರೂ ಅಸಹಾಯಕರಾಗಿದ್ದಾರೆ. ಅವರಿಗೆ ಇಂಥ ನೋವಾಗಬಾರದು. ನಮ್ಮ ಹತ್ತಿರ ರಬ್ಬರ್ ಗುಂಡು ಇಲ್ಲ. ನಮ್ಮ ಹತ್ತಿರ ಯಾವ ಗುಂಡು ಇದೆಯೋ ಅದನ್ನೇ ಹೇಳಬೇಕು. ಇದ್ದ ವಿಷಯವನ್ನು ಇದ್ದ ಹಾಗೆ ಹೇಳಬೇಕು. ಒಟ್ಟಿನಲ್ಲಿ ಹೇಳಬೇಕಾದರೆ ನಿಮ್ಮ ಆಡಳಿತದಲ್ಲಿ ಇಂತಹ ಗಲಭೆಗಳನ್ನು ತಡೆಗಟ್ಟುವುದಕ್ಕೆ ನೀವು ವಿಫಲರಾಗಿದ್ದೀರಿ, ಅಲ್ಲದೆ ಒಂದು ವೇಳೆ ಗಲಭೆ ಪ್ರಾರಂಭವಾದ ಮೇಲೆ ಅದನ್ನು ಯಾವ ರೀತಿ ನಿರ್ವಹಿಸಬೇಕಾಗಿತ್ತೋ ಅದನ್ನು ನಿರ್ವಹಿಸುವುದರಲ್ಲೂ ಕೂಡ ತಾವು ವಿಫಲರಾಗಿದ್ದೀರಿ, ಇದು ಖಂಡನೀಯ ಎಂದು ನಾನು ಸೂಚಿಸುತ್ತೇನೆ.

ಇನ್ನು ಬಾರ್ಡರ್ ಡಿಸ್ಪ್ಯೂಟ್ ಬಗ್ಗೆ ಹೇಳುವುದಾದರೆ ಬೆಳಗಾಂ ಪ್ರಶ್ನೆ ಏನು ಇದೆ ಅದರ ಪ್ರಶೆ ಬೇರೆ. ಅದು ನಮಗೆಲ್ಲಾ ಗೊತ್ತಿದೆ. ಅದರ ಹಿನ್ನೆಲೆ ಏನು ಇದೆ, ಅದನ್ನು ಹೇಳಬೇಕಾದರೆ ಈ ಗಡಿ ಸಮಸ್ಯೆ ಏನು ಇದೆ ಇದು ಇನ್ನೂ ಜೀವಂತವಾಗಿಯೇ ಇದೆ. ಗೌರ್ನರ್ ಅಡ್ರೆಸ್ ಬಂದಾಗ ಎಂ. ಇ. ಎಸ್.ನವರು ಕೆಂಪು ರುಮಾಲು ಹಾಕಿಕೊಂಡು ಬಂದು ಕುಳಿತುಕೊಳ್ಳುತ್ತಾರೆ. ಅವರು ಈ

ಗಡಿ ಸಮಸ್ಯೆ ಬಗ್ಗೆ ಗೌರ್ನರ್ ಅಡ್ರೆಸ್ ಬರುವವರೆಗೆ ಕಾಯಬೇಕು. ಈ ಗಡಿ ಸಮಸ್ಯೆ ಏನು ಇದೆ ಇದು ಎಲ್ಲರಿಗೂ ತಿಳಿದಿರುವ ಹಾಗೆ ಭಾಷಾವಾರು ಪ್ರಾಂತ ರಚನೆಯಾದಾಗಲೇ ಇದು ಇದೆ, ಇದು ಒಂದು ವೈಜ್ಞಾನಿಕವಾದ ಪ್ರಶ್ನೆಯಾಗಿದೆ. ಗಡಿ ಭಾಗದಲ್ಲಿ ಅಲ್ಪ ಸಂಖ್ಯಾತರು ಇರಲೇಬೇಕು ಎಂದು ಅವರು ಒಪ್ಪಿಕೊಂಡಿದ್ದಾರೆ. ಅಲ್ಲದೆ ಅವರು ತಮ್ಮ ಮಾತೃ ಭಾಷೆ ಏನು ಇದೆ ಅದಕ್ಕೆ ಗೌರವ ಕೊಡಬೇಕು. ಇಲ್ಲಿರುವ ಭಾಷೆಯ ಬಗ್ಗೆಯೂ ಅಭಿಮಾನ ಬೆಳೆದರೆ, ನಾವು ಒಬ್ಬರಿಗೊಬ್ಬರು ಸೇರಿಕೊಂಡು ಕೆಲಸ ಮಾಡೋಣ ಎಂದು ಮಾಡಿದರೆ ಅವಗ ಗಡಿ ಸಮಸ್ಯೆ ಪರಿಹಾರವಾದೀತು. ಈ ಗಡಿ ಸಮಸ್ಯೆಯ ಬಗ್ಗೆ ನಮ್ಮ ಭಾಗದಲ್ಲಿರತಕ್ಕಂಥವರು ಈ ಭಾಷಾ ಚಳುವಳಿ ಮಾಡಿದರೇ ಇಲ್ಲವೇ ಅಲ್ಲಿರುವ ಎಂ. ಇ. ಎಸ್. ನವರು ಏನಾದರೂ ಇದರ ಚಳುವಳಿ ಮಾಡಿದರೇ, ಇದನ್ನು ತಾವು ಅರ್ಥ ಮಾಡಿಕೊಳ್ಳಿ. ಮಹಾರಾಷ್ಟ್ರದಲ್ಲಿರತಕ್ಕಂಥಾವರು ತಮ್ಮದೇ ಆದ ಒಂದು ಪಕ್ಷ ಮಾಡಿಕೊಂಡು ಈ ಗಡಿ ಸಮಸ್ಯೆಯನ್ನು ಎತ್ತಿಕೊಂಡು ಇದಕ್ಕೆ ಮಾನ್ಯತೆ ಕೊಡಬೇಕು ಎಂದು ಮಾಡುವುದಾದರೆ, ಅದಕ್ಕೆ ಕೊಡುವುದಾದರೆ ಅದು ತಪ್ಪು. ಅವರು ಗಡಿ ಪ್ರದೇಶ ಎಂದು ಹೇಳಿ ಭಾಷಾ ಚಳುವಳಿ ಬಗ್ಗೆ ಪ್ರಚೋದನೆಯನ್ನು ಇಲ್ಲಿ ಬಂದು ಮಾಡುವುದು ತಪ್ಪು. ಶ್ರೀಮಾನ್ ಶರದ್‌ಪವಾರ್ ಅವರು ಬೇಕಾದರೆ ಅವರು ಅಲ್ಲಿಯ ಸರ್ಕಾರದ ವಿರುದ್ಧವಾಗಿ ಚಳುವಳಿ ಮಾಡಿದರೆ ಅದನ್ನು ನಮ್ಮ ರಾಜ್ಯಕ್ಕೆ ಸೇರಿಸಬೇಕು ಎಂದು ಚಳುವಳಿ ಮಾಡಿದರೆ ಅದರ ಪ್ರಶ್ನೆ ಬೇರೆ. ಈ ಪ್ರಶ್ನೆಯನ್ನು ಎತ್ತಿಕೊಂಡು ನಮ್ಮ ರಾಜ್ಯದ ಒಳಗೆ ಬಂದು ಚಳುವಳಿ ಮಾಡಿದರೆ ಏನು ಅರ್ಥ ? ಯಾವುದೇ ನಾಯಕರು ಎಷ್ಟೇ ದೊಡ್ಡವರು ಇರಲಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗಿ ಪ್ರಚೋದನೆ ಮಾಡತಕ್ಕಂಥಾದ್ದು ಅವಿವೇಕದ ಅಪ್ರಭುದ್ಧತೆಯ ಪರಮಾವಧಿ. ಶರದ್ ಪವಾರ್ ಇರಲಿ, ಇನ್ನೊಬ್ಬರು ಇರಲಿ, ಯಾರೇ ಇರಲಿ. ಸರ್ಕಾರದವರು ಏನು ಮಾಡಿದರೂ ಅವರಿಗೆ ಅಂದರೆ ರಾಜಾತಿಥ್ಯ ಕೊಟ್ಟರು. ಶರದ್‌ಪವಾರ್‌ಗೆ ಇನ್ನೊಬ್ಬ ಸ್ನೇಹಿತರಿಗೆ ರಾಜಾತಿಥ್ಯ ಏಕೆ ಕೊಟ್ಟಿರಿ ? ಅವರು ಗಡಿ ಪ್ರವೇಶ ಮಾಡಿದ್ದು ಗೊತ್ತಿಲ್ಲವೇ? ಪೋಲೀಸರ ಮೇಲೆ ನನಗೆ ನಂಬಿಕೆ, ವಿಶ್ವಾಸ ಇದೆ. ಈ ಸರ್ಕಾರ ಬಂದು ಹದಗೆಡಿಸಿದರೂ ನನಗೆ ವಿಶ್ವಾಸ ಇದೆ. ಶರದ್‌ಪವಾರ್‌ರವರು ನಮ್ಮ ರಾಜ್ಯದೊಳಕ್ಕೆ ಯಾವ ರೀತಿ ನುಸುಳಿದರು ಎಂದು ಗೊತ್ತಿಲ್ಲವೇ ? ಖಂಡಿತವಾಗಿ ಪೋಲೀಸರಿಗೆ ನೀವು ಈ ಪರಿಸ್ಥಿತಿಯನ್ನು ಬಿಟ್ಟಿದ್ದರೆ ಅವರು ಗಡಿಯಿಂದ ಅವರನ್ನು ಹೊರಗೆ ಹಾಕುತ್ತಿದ್ದರು ಇದನ್ನು ನೀವು ಮಾಡಲಿಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇದನ್ನು ಹುಟ್ಟಿಸಿದವರು ಮಾನ್ಯ ರಾಮಕೃಷ್ಣ ಹೆಗಡೆಯವರು ಇಲ್ಲದೇ ಇರಬಹುದು. ಆದರೆ ಇನ್ನೊಂದು ಅನುಮಾನ. ಇನ್ನೊಂದು ಆರೋಪ ಹೇಳುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಒಂದು ತಪಸ್ಸು ಮಾಡಿ ಅದರಲ್ಲಿ ಅವರು ಸ್ವಲ್ಪ ಸಿದ್ಧಿಯನ್ನು ಪಡೆದಿದ್ದಾರೆ. Converting calamity into opportunity ಯಾವುದೇ ಘಟನೆಯಾದರೆ, ಕಲಾಮಿಟಿಯಾದರೆ ಅದನ್ನು ಆಪರ್ಚುನಿಟಿಯನ್ನಾಗಿ ಮಾಡುವುದು, ಇದು ನಿಮ್ಮ ಪಬ್ಲಿಕೇಷನ್‌ನಲ್ಲಿದೆ. Converting Calamity into opportunity ಎಂದು ನನ್ನದಲ್ಲ ಅದು The slogan is coined by Mr. Hegde only. It is not my slogan. ಇದು ಪ್ರಾರಂಭವಾದ ಮೇಲೆ ಜನರೆಲ್ಲಾ ಬೆಳಗಾಂ ಕಡೆಗೆ ಆಸ್ಪತ್ರೆ ಕಡೆಗೆ ನೋಡುತ್ತಾರೆ ನೋಡಲಿ ಎಂದು ಬಿಟ್ಟರು. ಅದಕ್ಕೋಸ್ಕರ ಸಾಫ್ಟ್ ಟ್ರೀಟ್‌ಮೆಂಟ್ ಕೊಟ್ಟರು. It costed very heavily in terms of human life and property. ಅದನ್ನು ಮಾಡಬಾರದಾಗಿತ್ತು. ಈ ಮೂರರಲ್ಲೂ ಕೂಡ ಸರ್ಕಾರ ತನ್ನ ಶುದ್ಧಿಯಾಗಲಿ ಅಥವಾ ಯಾವುದೇ ರೀತಿಯ ದಕ್ಷತೆಯನ್ನಾಗಲಿ ತೋರಿಸಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ರಾಮನಗರದ ಘಟನೆಯ ಬಗ್ಗೆ ಮಾನ್ಯ ಸಿಂಧ್ಯರವರು ಹೇಳಿದರು. ನಮ್ಮ ಪಕ್ಷದಲ್ಲಿ ನಾವೆಲ್ಲಾ ಸರಿಯಾಗಿದ್ದೇವೆ ಎಂದು ನಾನು ಹೇಳುವುದಿಲ್ಲ. ಆದರೆ ನಮ್ಮ ಮಾತಿನಲ್ಲಿ ನಾವು ಹೇಳುತ್ತಾ ಇಲ್ಲ. ರಾಮನಗರದ ಘಟನೆಗಳ ಬಗ್ಗೆ 'politics behind violence.' ಎಂದು ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನಷ್ಟೇ ಓದಿ ಹೇಳುತ್ತೇನೆ. ಅದರ ಬಗ್ಗೆ ನಾನು ಏನೂ ಕಾಮೆಂಟ್ಸ್ ಮಾಡುವುದಿಲ್ಲ. "Times of India"

"According to official sources, who spoke on condition of anonity, the Hindus and Muslims of Ramanagaram were pitted against each other to improve the sagging image of a local ruling party leader. The subsequent behaviour of some Janatha leader did not help to restore peace in the town, according to official sources. In fact

> the action of ruling party leader angered senior officials to such an extent that they threatened at one stage to have him arrested·''

ನಮ್ಮ ಬಗ್ಗೆಯೂ ಹೇಳಿದ್ದಾರೆ. ಕಾಂಗ್ರೆಸ್‌ನವರು ಇರಬಹುದು, ಇದ್ದರೆ ಅವರನ್ನೂ ಬಗ್ಗು ಬಡಿಯಿರಿ. ಸರ್ಕಾರ ಆ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಧರ್ಮ ಇದೆ. ಅವರನ್ನು ದೂಷಣೆ ಮಾಡುವುದಕ್ಕೆ ನಾನು ಹೇಳುವುದಿಲ್ಲ. ನಾವು ರಾಜಕಾರಣವನ್ನು ಎಲ್ಲಿ ಬೆಳೆಸಬೇಕು ಎಲ್ಲಿ ನಿಲ್ಲಿಸಬೇಕು ಎನ್ನುವುದು ಮುಖ್ಯ. ಮಾನ್ಯ ಅಧ್ಯಕ್ಷರೆ, ಗೃಹಾಡಳಿತ ಕಳೆದ ಒಂದು ವರ್ಷದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಕೊಲೆ ಮಾಡಿದವರನ್ನು, ಸುಲಿಗೆ ಮಾಡಿದವರನ್ನು ಒಂದು ವಾರದಲ್ಲಿ ಪತ್ತೆ ಮಾಡುತ್ತೇವೆ ಎಂದು ಮಾನ್ಯ ರಾಚಯ್ಯನವರು ಹೇಳಿದರು. ನನಗೆ ಗೊತ್ತಿದ್ದ ಹಾಗೆ ಪತ್ತೆ ಮಾಡಿದ ಹಾಗೆ ಕಾಣುವುದಿಲ್ಲ. ರೌಡಿಗಳನ್ನೆಲ್ಲಾ ನಿಯಂತ್ರಣ ಮಾಡುತ್ತೇನೆ, ನನಗೆ ಅಧಿಕಾರ ಕೊಡಿ ಅಂದಿರಿ ನಾವು ಕೊಟ್ಟೆವು. ಡ್ರಕೊನಿಯನ್ ಬೇಕು ಅಂದಿರಿ ತೆಗೆದುಕೊಳ್ಳಿ ಎಂದು ಹೇಳಿದೆವು. ಕೊನೆಗೆ ನೋಡಿದರೆ ೨೬ ಜನ ರೌಡಿಗಳನ್ನು ಒಳಗೆ ಹಾಕಿ, ನಂತರ ಅದರಲ್ಲಿ ೨೪ ಜನರನ್ನು ಬಿಡುಗಡೆಮಾಡಿ, ೨ ಜನ ಉಳಿದರು ಎಂದು ಅಸೆಂಬ್ಲಿಯಲ್ಲಿ ಉತ್ತರ ಕೊಟ್ಟರಿ. ಈಗ ಏನಾಗಿದೆಯೆಂದರೆ ಎಲ್ಲಾ ರೌಡಿಗಳು ಅವರವರ ಕೊಲೆಯನ್ನು ಅವರವರೇ ಮಾಡಿಕೊಳ್ಳುತ್ತಾ ಇದ್ದಾರೆ, ಲಾ ಅಂಡ್ ಆರ್ಡರ್ ಅವರಿಗೇ ಬೇರೆ ಮಾಡಿ ವಹಿಸಿಕೊಟ್ಟ ಹಾಗೆ, ರಸ್ತೆ ಮೇಲೆ ಒಂದೊಂದೇ ಅಂಗವನ್ನು ಕತ್ತರಿಸಿ ಕತ್ತರಿಸಿ ಬಿಸಾಕುತ್ತಾ ಇದ್ದಾರೆ. They are not keeping track of these people. ಇವೆಲ್ಲಾ ಘಟನೆಗಳು ದಿನಬೆಳಗಾದರೆ ನಡೆಯುತ್ತಿವೆ. What sort of a law and order you are maintaining ? ಒಬ್ಬ ರೌಡಿಯನ್ನು. ಹುಡುಕುತ್ತಾ ಇದ್ದಾರೆ ಎಂದರೆ, ಏನು ಹುಡುಕಿದರೂ, ನಾನು ಯಾವುದೇ ರೌಡಿಗೆ, I am not holding any brief. They are at liberty to search any record to find out whether I have got any connection with them, ಒಬ್ಬ ರೌಡಿ ಸತ್ತು ಹೋಗಿದ್ದಾನೆ, ಅವನ ಹೆಂಡತಿ ತಾಯಿ, ಮಕ್ಕಳು ಬಂದು ಪೋಲೀಸರಿಗೆ ಹೇಳಿದರೆ ಅವರನ್ನು ಹಿಡಿದುಕೊಂಡು ಹೊಡೆದರೆ ಏನು ? ಅಥವಾ ತಾಯಿಗೆ ಇನ್‌ಫರ್ಮೇಷನ್ ಇದ್ದರೆ How do you expect a mother to divulge anything about her son? You have to use your Police Intellegence. ಅದರ ಬದಲು ಕೊನೆಗೆ ಒಂದು ದಿವಸ ಯಾರೋ ಕೊಲೆ ಮಾಡಿದರು ಒಪ್ಪಿಕೊಳ್ಳುತ್ತಾರೆ. What sort of a law and order is this? What sort a police intellegence ? ಇದೇನು ವ್ಯವಹಾರ ನಡೆದಿದೆ, ಇದರ ಬಗ್ಗೆ ಮಾನ್ಯ ರಾಚಯ್ಯನವರು ಏಕೆ ಇಷ್ಟು ಗಂಭೀರವಾಗಿ ಸುಮ್ಮನೆ ಇದ್ದುಬಿಟ್ಟು ಇದನ್ನು ಲಘು ಎನ್ನತಕ್ಕ ವಿಷಯಕ್ಕೆ ತೆಗೆದುಕೊಂಡು ಹೋಗುತ್ತಾ ಇದ್ದಾರೆಂದು ಅರ್ಥವಾಗುವುದಿಲ್ಲ. ಖಂಡಿತವಾಗಿ ಈ ರೀತಿ ಬಹಳ ದಿವಸ ನಡೆಯುವುದಕ್ಕೆ ಸಾಧ್ಯವಿಲ್ಲ. ನೀವು ಇದನ್ನು ಬಗ್ಗು ಬಡಿಯಲೇಬೇಕು. ಇಲ್ಲದೇಹೋದರೆ It will cost your thrown also. ಇದು ಹೇಗಾಯಿತು ಎಂದರೆ, ತಕ್ಷಕ ಎಂಬ ಹಾವು ಇಂದ್ರನ ಸಿಂಹಾಸನದಲ್ಲಿ ಸೇರಿಕೊಂಡು ಬಿಟ್ಟಿತು, ಜನಮೇಜಯ ಯಜ್ಞ ಮಾಡುವ ಹೊತ್ತಿನಲ್ಲಿ ಕೊನೆಗೆ ಏನು ಮಾಡಿದ ಅವನು ಎಂದರೆ ತಕ್ಷಕ ಏನು ಮಾಡಿದರೂ ಬರುವುದಿಲ್ಲ ಎಂದು ತಿಳಿದುಕೊಂಡು ''ಇಂದ್ರಾಯ ತಕ್ಷಕಾಯ ಸ್ವಾಹಾ'' ಎಂದು ಹೇಳಿದ ಕೂಡಲೇ ಇಂದ್ರ ಅವನನ್ನು ತೆಗೆದು ಬಿಸಾಕಿದ. ಹೀಗೆ ನಿಮ್ಮದು ಏನಾಗಿದೆಯೆಂದರೆ ಬರೀ ಪೋಲೀಸರನ್ನು ಬಿಟ್ಟು ಕುಳಿತುಕೊಂಡರೆ ಆಗುವುದಿಲ್ಲ. ಪೋಲೀಸರ ಜೊತೆ ಸರ್ಕಾರವನ್ನೂ ಕೂಡ ಹೊಣೆಗಾರಿಕೆ ಮಾಡಿ ಸರ್ಕಾರವನ್ನು ಅದರ ಜವಾಬ್ದಾರಿ ಮಾಡತಕ್ಕಂಥಾದ್ದನ್ನು ನಾವು ಮಾಡುವುದಿಲ್ಲ. ನೀವು ೬೬ ಜನ ಏನು ಕಡಿತೀರಿ ಎಂದು ಹೇಳಬಹುದು. ಅದನ್ನು ನಾವಲ್ಲ, ಜನ ಮಾಡತಕ್ಕಂಥ ಸಮಯ ಬರಬಹುದು ಎಂಬ ಎಚ್ಚರಿಕೆ ಕೊಡೋಣ. ಮಾನ್ಯ ರಾಚಯ್ಯನವರು ಏನಾದರೂ ಗಂಭೀರವಾದ ಪ್ರಯತ್ನಗಳನ್ನು ಮಾಡಬಹುದು. ಆದರೂ ಅವರಿಗೆ ಅನೇಕ ಇತಿಮಿತಿಗಳು ಇವೆ

೭-೦೦ ಪಿ.ಎಂ.

ಈಗ ಏನಾಗಿದೆಯೆಂದರೆ ಹಾಲಾಹಲ ಕುಡಿಯುವುದಕ್ಕಷ್ಟೇ ಅವರು. ಅಮೃತಪಾನ ಮಾಡುವುದಕ್ಕೆ ಬೇರೆಯವರು ಇರಬಹುದು. ಇನ್ನು ನಾನಾ ತರಹದ ಗುಂಡು ಇದೆ, ರಬ್ಬರ್ ಗುಂಡು, ಒಂದು ಕಡೆಗೆ ಮೌಲ್ಯಾಧಾರಿತ ರಾಜಕಾರಣದ ಗುಂಡು, ಇನ್ನೊಂದು ಮೀಡಿಯಾ ಅಂಡ್ ಮ್ಯಾನ್ ಪೇಟ್ ಅದೊಂದು ರಬ್ಬರ್ ಗುಂಡಾಗಿದೆ, ತಿಂಕ್ ಟ್ಯಾಂಕ್ ಅದೊಂದು ಕಡೆಗೆ ಇದೆ, ಇನ್ನೊಂದು

ಗುಂಡು ಇದೆ, ಅದಕ್ಕೆ ನೀವೂ ವಿರೋಧವಾಗಿದ್ದೀರಿ, ನಾನೂ ವಿರೋಧವಾಗಿದ್ದೇನೆ. ಅದನ್ನು ಸವಿಯುವವರು ಬೇರೆಯವರು. ಅಮೃತ-ಪಾನ ಮಾಡುವವರು ಬೇರೆ, ಹಾಲಾಹಲವನ್ನು ಕುಡಿಯುವವರು ಬೇರೆ. ನಿಜವಾದ ಗುಂಡಿನ ಜವಾಬ್ದಾರಿಯನ್ನು ನೀವು ತೆಗೆದುಕೊಂಡು ಗಂಭೀರವಾಗಿ ಕುಳಿತುಕೊಂಡಿರತಕ್ಕಂಥಹವರ ಬಗ್ಗೆ ನನಗೆ ನಿಜವಾಗಲೂ ಸಹಾನುಭೂತಿ ಇದೆ. ನೀವು ಒಬ್ಬ ಮಂತ್ರಿಯಾಗಿ ದಕ್ಷತೆಯನ್ನು ಪ್ರಾಮಾಣಿಕತೆಯನ್ನು ನಿಮ್ಮ ಆಡಳಿತದ ಮೂಲಕವಾಗಿ ತೋರಿಸಿಕೊಡಬೇಕಾಗುತ್ತದೆ. ನಾವು ನಿಮ್ಮ ಮೇಲೆ ವಿಶ್ವಾಸವಿಟ್ಟಿದ್ದೇವೆಂದು ತಿಳಿಸುತ್ತಾ ನನಗೆ ನಾಲ್ಕು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆಯ ದಿವಸ ಈ ವಿಷಯದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡುತ್ತಾ ಕಾನೂನು ಪಾಲನೆ ವಿಷಯದಲ್ಲಿ, ಶಾಂತಿಯನ್ನು ನೆಮ್ಮದಿಯನ್ನು ತರುವುದರಲ್ಲಿ ಸರಕಾರ ವಿಫಲತೆಯನ್ನು ಪಡೆದಿದೆಯೆಂದು ಮಾತನಾಡುತ್ತಾ ಮಾನ್ಯ ಸದಸ್ಯರು ಅದಕ್ಕೆ ಮಾನ್ಯ ಶ್ರೀನಿವಾಸ್‌ರವರು ಅಂತಿಮ ಹಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕಾನೂನು ಪಾಲನೆ ಮುಖಾಂತರವಾಗಿ ಶಾಂತಿಯನ್ನು ತರುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡಿದರೂ ಕೂಡ ಕೆಲವಾರು ಅನಿವಾರ್ಯ ಘಟನೆಗಳು ನಡೆದಿದ್ದು ನನ್ನ ಮನಸ್ಸಿಗೂ ಕೂಡ ದುಃಖವನ್ನು ಉಂಟು ಮಾಡಿದೆ, ಮತ್ತು ನಾನು ಒಂದು ಕಡೆ ಮಾತ್ರ ಹೋಗುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೋಸ್ಕರವಾಗಿ ನಾನು ಪರಿತಪಿಸುತ್ತಿದ್ದೇನೆ. ಯಾವ ಮನುಷ್ಯ ಪ್ರಾಣವನ್ನು ನಾವು ಕೊಡುವುದಕ್ಕಾಗುವುದಿಲ್ಲವೋ ಆಗ ನಾವು ಅವರ ಪ್ರಾಣವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದಾಗ್ಯೂ ಕಾನೂನು ಪಾಲನೆ ಮಾಡುವ ಮುಖಾಂತರವಾಗಿ ಈ ದೇಶದಲ್ಲಿ ಶಾಂತಿಯನ್ನು ನೆಮ್ಮದಿಯನ್ನು ತಂದುಕೊಡತಕ್ಕಂತಹ ಕರ್ತವ್ಯದಲ್ಲಿರುವಾಗ ಅನಿವಾರ್ಯವಾಗಿ ಇಂತಹ ಘಟನೆಗಳು ಹುಟ್ಟಿ ಬಂದಿರತಕ್ಕಂಥಾದ್ದು ಇದೆ. ಬಹುಶಃ ಈ ದೇಶದಲ್ಲಿ ಅನೇಕ ಧರ್ಮ, ಜಾತಿ, ಭಾಷಾ ಗೊಂದಲವಿದ್ದಾಗ್ಯೂ ಕೂಡ ಹಿಂದಿನಿಂದ ಒಂದು ಒಗ್ಗಟ್ಟನ್ನು ಸಾಧಿಸಿಕೊಂಡು ಸತ್ಸಂಪ್ರದಾಯವನ್ನು ನಾವು ಬೆಳೆಸಿಕೊಂಡು ಬಂದಿದ್ದೇವೆ. ಆದಾಗ್ಯೂ ಕೂಡ ಇಂತಹ ಘಟನೆಗಳು ನಡೆಯುತ್ತಿವೆ. ಇದನ್ನು ಇತಿಹಾಸಗಳಲ್ಲೂ ಕೂಡ ಹೇಳುತ್ತಾರೆ, ಈಗಲೂ ನಾವು ಅನುಭವಿಸುತ್ತಿದ್ದೇವೆ. ಈ ರೀತಿಯಾದಂತಹ ತಾರತಮ್ಯಗಳು ವೈಷಮ್ಯಗಳು ನಮಗೆ ಹೊಸದೇನೂ ಅಲ್ಲ. ರಾಮಾಯಣ ಮಹಾಭಾರತದಿಂದ ಇದು ಪ್ರಾರಂಭವಾಗಿರುವುದು ಒಂದೇ ಸಾರಿ ಹೋಗುತ್ತದೆಂದು ಹೇಳಿದರೆ ಬಹಳ ಮಟ್ಟಿಗೆ ಅದು ಕಷ್ಟವೆಂದು ನನಗನ್ನಿಸುತ್ತದೆ. ಆದುದರಿಂದ ಎಲ್ಲರೂ ಕೂಡ ಒಂದೇ ಮನಸ್ಸಿನಿಂದ ನಾವು ಒಂದಾಗಿ ಬಾಳಿ ಬದುಕಬೇಕೆಂದು ಮನಸ್ಸು ಮಾಡದ ಹೊರತು ಇದನ್ನು ಕಾನೂನು ಮುಖಾಂತರವಾಗಿ ಮಾಡುವುದು ಕಷ್ಟವಾಗುತ್ತದೆಂದು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆಳಂದ, ರಾಮನಗರ ಮತ್ತು ಬೆಳಗಾಂನಲ್ಲಿ ನಡೆದಂತಹ ಘಟನೆಗಳು ಏನು ಇವೆ, ಅವುಗಳಲ್ಲಿ ಕೆಲವು ಮತೀಯ ಗಲಭೆಗಳು ಭಾಷಾ ಗಲಭೆ ಇರಬಹುದು. ಪೋಲೀಸರು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದ್ದರೆ ಮತೀಯ ಗಲಭೆಗಳನ್ನು ತಪ್ಪಿಸುವುದಕ್ಕೆ ನಮ್ಮ ಪೋಲೀಸರು ಅದಕ್ಕೆ ಸಾಕಷ್ಟು ರೀತಿಯಲ್ಲಿ ವರದಿಯನ್ನು ಕೊಟ್ಟಿದ್ದು, ಕ್ರಮ ತೆಗೆದುಕೊಂಡಿದ್ದರೆ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿತ್ತು ಮತ್ತು ಅನೇಕ ಪ್ರಾಣಗಳನ್ನು ಉಳಿಸಬಹುದಾಗಿತ್ತು, ಕಷ್ಟನಷ್ಟಗಳನ್ನು ತಪ್ಪಿಸಬಹುದಿತ್ತು ಹಾಗೂ ಆ ಸಂದರ್ಭದಲ್ಲಿ ಎಷ್ಟು ಜನ ಅವಶ್ಯಕವಾದ ಪೋಲೀಸರು ಇರಬೇಕಾಗಿತ್ತೋ ಅಷ್ಟು ಜನವಿದ್ದು ಕಾಲಕ್ಕೆ ತಕ್ಕಂತೆ ಕ್ರಮ ತೆಗೆದುಕೊಂಡಿದ್ದರೆ ಇದನ್ನು ತಪ್ಪಿಸಬಹುದಿತ್ತು ಎಂಬುದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆಳಂದದಲ್ಲಿ ನಡೆದಂತಹ ಘಟನೆಯ ಬಗ್ಗೆ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಆಳಂದದಲ್ಲಿ ಈ ವರ್ಷವೂ ದಿನಾಂಕ ೨೧-೬-೧೯೮೬ರಂದು ಕಾರು ಹುಣ್ಣಿಮೆ ಹಬ್ಬವನ್ನು ಆಚರಿಸಲು ನೂರಾರು ಜೋಡಿ ಎತ್ತುಗಳು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುವ ಕಾಲಕ್ಕೆ ಹಿಂದೂಗಳ ಎರಡು ಗುಂಪುಗಳ ಮಧ್ಯೆ ನಮ್ಮ ಎತ್ತುಗಳು ಮುಂದೆ ತಮ್ಮದು ಮುಂದೆ ಹೋಗಬೇಕೆಂದು ವಾದ ವಿವಾದ ಉಂಟಾಗಿ ಒಬ್ಬರಿಗೊಬ್ಬರು ಗುದ್ದಾಡುತ್ತಿದ್ದು, ತಕ್ಷಣ ಸ್ಥಳೀಯ ಆರಕ್ಷಕರು ಮಧ್ಯೆ ಪ್ರವೇಶ ಮಾಡಿ ಎರಡೂ ಕಡೆಯವರಿಗೂ ತಿಳುವಳಿಕೆ ಹೇಳಿದರು. ಈ ಮಧ್ಯೆ ಕೆಲವು ಕಿಡಿಗೇಡಿಗಳು ಶಾಂತಿ ಭಂಗ ಉಂಟುಮಾಡುವ ಸಲುವಾಗಿ ಸ್ಥಳದಲ್ಲಿದ್ದ ಆರಕ್ಷಕರ ಮೇಲೆ ಕಲ್ಲುಗಳನ್ನು ತೂರಿದರು. ಆರಕ್ಷಕರು ನೆರೆದಿದ್ದ ಗುಂಪನ್ನು ಚದುರಿಸಲು ಲಘು ಲಾಠಿ ಪ್ರಹಾರ ಮಾಡಿದರು. ಇದರಿಂದ ಯಾವ ತರಹದ ಪರಿಣಾಮ ಕಾಣಬರಲಿಲ್ಲ ಹಾಗೂ ಸತತವಾಗಿ ಆರಕ್ಷಕರ ಮೇಲೆ ಕಲ್ಲು ತೂರಾಟ ಮಾಡತೊಡಗಿದರು. ಅಲ್ಲದೆ ಕಾರ್ಯದ ಮೇಲೆ ನಿರತರಾಗಿದ್ದ ವೃತ್ತ ಆರಕ್ಷಕ ನಿರೀಕ್ಷಕರು,

ಇಬ್ಬರು ಆರಕ್ಷಕ ಉಪ ನಿರೀಕ್ಷಕರು ಹಾಗೂ ಎಂಟು ಜನ ಪೇದೆಗಳನ್ನು ನೆರೆದಿದ್ದ ಗುಂಪು ಸುತ್ತು ಗಟ್ಟಲು ಸದರಿಯವರು ಚಾಕಚಕ್ಯತೆಯಿಂದ ಆ ಸ್ಥಳದಿಂದ ತಪ್ಪಿಸಿಕೊಂಡು ಹಳೆಯ ಠಾಣೆಯ ಕಟ್ಟಡದ ಬಳಿ ಬಂದು ಅಲ್ಲಿಯೇ ಸ್ವಲ್ಪ ದೂರದಲ್ಲಿ ಮೀಸಲು ಪಡೆಯ ಸಿಬ್ಬಂದಿಯೊಂದಿಗೆ ಇದ್ದ ವಾಹನದ ಬಳಿ ಕೆಲವು ಮುಸಲ್ಮಾನರು ಓಡಿ ಬಂದು ಮಸೀದಿಯ ಮೇಲೆ ಕೆಲವು ತಿಳಿಗೇಡಿಗಳು ಕಲ್ಲು ತೂರುತ್ತಿದ್ದಾರೆಂದು ತಿಳಿಸಲು ಕೂಡಲೇ ವೃತ್ತ ನಿರೀಕ್ಷಕರು ಮೀಸಲು ಪಡೆಯ ವಾಹನದೊಂದಿಗೆ ಮಸೀದಿಯ ಹತ್ತಿರ ಬರಲು ಅಲ್ಲಿ ನೆರೆದಿದ್ದ ಗುಂಪು ಆರಕ್ಷಕರನ್ನು ಸುತ್ತುವರಿದು ಕಲ್ಲುಗಳನ್ನು ತೂರಾಡಲು ಶುರು ಮಾಡಿದರು. ಆರಕ್ಷಕರು ಗುಂಪನ್ನು ಚದುರಿಸಲು ೩ ಹಿಡಿಬಾಂಬು ಮತ್ತು ೩ ಅಶ್ರುವಾಯು ಶೆಲ್ಲುಗಳನ್ನು ಸಿಡಿಸಿದರು. ಅಷ್ಟರಲ್ಲಿ ಕೆಲವು ತಿಳಿಗೇಡಿಗಳು ಒಬ್ಬ ಮುಸಲ್ಮಾನರ ಬಟ್ಟೆ ಅಂಗಡಿಯನ್ನು ಲೂಟಿ ಮಾಡಿದರು. ಈ ಎಲ್ಲಾ ದುಷ್ಪರಿಣಾಮಗಳಿಂದಾಗಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ವೃತ್ತ ಆರಕ್ಷಕ ನಿರೀಕ್ಷಕರು ೫ ಸುತ್ತು ಗಾಳಿಯಲ್ಲಿ ಗುಂಡನ್ನು ಹಾರಿಸಲು ಆದೇಶ ನೀಡಿದರು. ಇದರಿಂದ ಏನೂ ಪ್ರಯೋಜನವಾಗದಿದ್ದರಿಂದ ನೆರೆದಿದ್ದ ಗುಂಪಿನ ಮೇಲೆ ೬ ಸುತ್ತು ಗುಂಡಗಳನ್ನು ಹಾರಿಸಿದರು. ಇದರಿಂದ ಮೂರು ಜನ ಅಂದರೆ ಕರೀಮ್ ಬಿನ್ ನಬಿಸಾಬ್, ಅಬ್ದುಲ್ ರೆಹಮಾನ್ ಬಿನ್ ಇಬ್ರಾಹಿಂ ಸಾಬ್ ಮತ್ತು ಅಶೋಕ್ ಬಿನ್ ಚಂದ್ರಪ್ಪ ಗೊಂಗಲಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಅಲ್ಲದೆ ಮೂರು ಜನ ಅಂದರೆ ನಬಿಸಾಬ್ ಬಿನ್ ಗೂಡುಸಾಬ್, ಮೊಯಿನುದ್ದೀನ್ ಬಿನ್ ಫಕ್ರುದ್ದೀನ್, ಭಗವಾನ್ ಮತ್ತು ವಿಜಯಕುಮಾರ್ ಬಿನ್ ಸಂಗಯ್ಯ ಹಿರೇಮಠ ಗುಂಡೇಟಿನಿಂದ ಗಾಯಗೊಂಡಿರುತ್ತಾರೆ. ವಿಷಯ ತಿಳಿದ ಕೂಡಲೇ ಜಿಲ್ಲಾ ಆರಕ್ಷಕ ಅಧೀಕ್ಷಕರು ಹೆಚ್ಚಿನ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಧಾವಿಸಿ ಸ್ಥಳದಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ಆರಕ್ಷಕ ಕಾವಲು ಏರ್ಪಡಿಸಿರುತ್ತಾರೆ. ಮುನ್ನೆಚ್ಚರಿಕೆಯ ಕ್ರಮವಾಗಿ ಕಲಂ ೧೪೪ ಭಾರತ ದಂಡ ಸಂಹಿತೆ ರೀತ್ಯ ನಿಷೇದಾಜ್ಞೆಯನ್ನು ದಿನಾಂಕ ೨೨-೬-೧೯೫೬ ರಿಂದ ೨೯-೬-೧೯೮೬ರವರೆಗೆ ಜಾರಿಗೊಳಿಸಲಾಗಿತ್ತು. ಇದರಲ್ಲಿ ೧೩ ಜನ ಆರಕ್ಷಕರು ಗಾಯಗೊಂಡಿರುತ್ತಾರೆ.

ಈ ಮೇಲಿನ ಘಟನೆಗೆ ಸಂಬಂಧಪಟ್ಟ ಹಾಗೆ ಗಲಭೆ, ದರೋಡೆ, ಲೂಟಿ ಇತ್ಯಾದಿ ಪ್ರಕರಣಗಳಿಗೆ ಸಂಬಂಧಪಟ್ಟ ಹಾಗೆ ೬ ಮೊಕದ್ದಮೆಗಳನ್ನು ಆಳಂದ ಆರಕ್ಷಕ ಠಾಣೆಯಲ್ಲಿ ದಾಖಲು ಮಾಡಿಕೊಂಡಿರುತ್ತಾರೆ, ಮುನ್ನೆಚ್ಚರಿಕೆಯ ಕ್ರಮವಾಗಿ ಎರಡೂ ಗುಂಪಿನ ೩೪ ಜನರ ಮೇಲೆ ಅಪರಾಧ ದಂಡ ಸಂಹಿತೆ ಕಲಂ ೧೦೭ರ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಳ್ಳಲಾಗಿದೆ. ಈ ಗಲಭೆಯಲ್ಲಿ ರೂ. ೬೦,೫೦೦-೦೦ ನಷ್ಟ ಉಂಟಾಗಿದೆ.

ಗಲಭೆ ಪೀಡಿತ ಸ್ಥಳಗಳಿಗೆ ಡಿ.ಐ.ಜಿ.ಯವರು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟ್‌ರು ಭೇಟಿ ಕೊಟ್ಟು ಹೆಚ್ಚಿನ ಪೋಲೀಸು ಗಸ್ತನ್ನು ಏರ್ಪಾಡು ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತಂದರು.

ಈ ಪೋಲೀಸು ಗೋಲಿಬಾರಿಗೆ ಸಂಬಂಧಿಸಿದಂತೆ ಸರ್ಕಾರವು ಈಗಾಗಲೇ ನ್ಯಾಯಾಂಗ ತನಿಖೆ ನಡೆಸಲು ಶ್ರೀ ಎಸ್.ಬಿ. ಹುಗಾರ್, ಹೆಚ್ಚಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ಆಲಂದ ಪೋಲೀಸು ಗೋಲಿಬಾರಿನ ಬಗ್ಗೆ ತನಿಖೆ ನಡೆಸಲು ನೇಮಕ ಮಾಡಲಾಗಿದೆ.

ಈ ಪೋಲೀಸು ಗೋಲಿಬಾರಿನಲ್ಲಿ ಸತ್ತವರಿಗೂ ಹಾಗೂ ಗಾಯಗೊಂಡವರಿಗೂ ಪರಿಹಾರ ಧನವಾಗಿ ಸರ್ಕಾರದವರು ರೂ. ೩೧,೫೨೦ ಗಳನ್ನು ಮಂಜೂರು ಮಾಡಿದ್ದಾರೆ.

ರಾಮನಗರದಲ್ಲಿ ೨೨ನೇ ಜುಲೈ ರಾತ್ರಿ ೧೧-೩೦ ಗಂಟೆಯ ಸಮಯದಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಕರಗದ ಉತ್ಸವವು ನಲಬಂದಿವಾಡಿ ಮಸೀದಿ ಹಿಂದೆ ಹೋಗುತ್ತಿರುವಾಗ ಕೆಲವು ತಿಳಿಗೇಡಿಗಳು ಮೆರವಣಿಗೆಯ ಮೇಲೆ ಕಲ್ಲುಗಳನ್ನು ಎಸೆದರು. ಇದರಿಂದ ಮೆರವಣಿಗೆಯಲ್ಲಿ ಇದ್ದ ಜನಗಳು ಉದ್ರೇಕಗೊಂಡರು. ಅವರಿಗೂ ಮತ್ತು ಮುಸ್ಲಿಂ ಬಾಂಧವರಿಗೂ ವಾಗ್ವಾದ ನಡೆಯಿತು. ಪೋಲೀಸರು ಮಧ್ಯೆ ಪ್ರವೇಶಿಸಿ ತಿಳಿಗೇಡಿಗಳನ್ನು ಚದುರಿಸಿದರು. ಮೆರವಣಿಗೆಯಲ್ಲಿದ್ದ ಕೆಲವು ತಿಳಿಗೇಡಿಗಳು ಉದ್ರೇಕಗೊಂಡು ಕೆಲವು ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಮತ್ತು ಬಜಾರ್ ರೋಡ್, ಕಲಾಸಿಪಾಳ್ಯ, ಬಳಗೇರಿ ಚೌಕಗಳಲ್ಲಿ ಅಂಗಡಿಗಳಿಗೆ ಅಂದರೆ ಬಟ್ಟೆ ಅಂಗಡಿ, ಪಾದರಕ್ಷೆಗಳ ಅಂಗಡಿಗಳು, ದವಸ ಧಾನ್ಯದ ಅಂಗಡಿಗಳು ಮತ್ತು ಚಿಲ್ಲರೆ ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಇದು ಅಲ್ಲದೆ ತಟ್ಟಿ ಮೇಲ್ಛಾವಣಿ ಇರುವ ತರಕಾರಿ ಮಾರುವ ೧೬ ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಇದಲ್ಲದೆ ೨೦ ತಟ್ಟಿ ಮೇಲ್ಛಾವಣಿ ಇರುವ ಗುಡಿಸಲುಗಳಿಗೂ ಸಹ ಬೆಂಕಿ ಹಚ್ಚಿದರು. ಈ ಮಧ್ಯೆ ಸುಮಾರು ೨೦೦೦ ಹಿಂದೂಗಳು, ೨೦೦೦ ಮುಸ್ಲಿಂ ತಿಳಿಗೇಡಿಗಳು

ಆರಳಿಮರದ ಚೌಕದ ಹತ್ತಿರ ಒಬ್ಬರಿಗೊಬ್ಬರು ಎದುರಿಗೆ ಘರ್ಷಣೆ ನಡೆಸಲು ಸೇರಿದ್ದರಿಂದ ಪೋಲೀಸರು ಲಾಠಿ ಪ್ರಹಾರಮಾಡಿ ಮತ್ತೆ ೨೦ ಅಶ್ರುವಾಯುಗಳನ್ನು ಪ್ರಯೋಗಿಸಿದರು. ಇದರಿಂದ ಆ ಗುಂಪಿನಲ್ಲಿದ್ದ ಜನಗಳು ಪೋಲೀಸರ ಮೇಲೆ ಕಲ್ಲು ತೂರಿದ ಪರಿಣಾಮವಾಗಿ ೯ ಜನ ಪೋಲೀಸರಿಗೆ ಗಾಯಗಳುಂಟಾಗಿ ಮತ್ತು ಒಬ್ಬ ಪೋಲೀಸ್ ಇನ್ಸ್‌ಪೆಕ್ಟರಿಗೆ ಗಾಯ ತೀವ್ರವಾದ್ದರಿಂದ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತು. ಗಲಭೆ ಹೀಗೆಯೇ ನಡೆಯುತ್ತಿದ್ದರಿಂದ ಪೋಲೀಸರು ೧೬ ಸುತ್ತು ಗುಂಡು ಹಾರಿಸಿದರು. ಅದರ ಪರಿಣಾಮವಾಗಿ ರಾಮನಗರ ಮುನಿಸಿಪಾಲಿಟಿಯಲ್ಲಿ ಕಾವಲುಗಾರನಾಗಿ ಕೆಲಸ ಮಾಡುತ್ತಿದ್ದ ಅಬ್ದುಲ್‌ನಬೀ ಎಂಬುವನಿಗೆ ಗುಂಡೇಟಿನಿಂದ ಗಾಯವುಂಟಾಗಿ ಅವನು ಆಸ್ಪತ್ರೆಯಲ್ಲಿ ಮೃತಪಟ್ಟನು. ಗುಂಡೇಟಿನಿಂದ ೩ ಜನರಿಗೆ ಗಾಯವುಂಟಾಗಿ ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಗೆ ವರ್ಗಾಯಿಸಲಾಯಿತು. ಮುಂಜಾಗ್ರತಾ ಕ್ರಮವಾಗಿ ೧೪೪ನೇ ಅಪರಾಧ ದಂಡ ಪ್ರಕ್ರಿಯೆ ಸಂಹಿತೆ ಪ್ರಕಾರ ನಿಷೇದಾಜ್ಞೆಯನ್ನು ದಿನಾಂಕ ೨೩ನೇ ಜುಲೈ ಬೆಳಿಗ್ಗೆ ೬ ಗಂಟೆಯಿಂದ ಒಂದು ವಾರ ಕಾಲ ಹಾಕಲಾಯಿತು. ಮತ್ತೆ ಅದನ್ನು ಒಂದು ವಾರ ಕಾಲ ಮುಂದುವರೆಸಲಾಯಿತು. ೨೫ನೇ ಜುಲೈ ೦೦-೩೫ ಘಂಟೆಯಿಂದ ೨೬ನೇ ಬೆಳಿಗ್ಗೆ ೬ ಗಂಟೆಯವರೆಗೂ ಕರ್ಫ್ಯೂವನ್ನು ಸಹಾ ವಿಧಿಸಲಾಯಿತು.

ಪಟ್ಟಣದ ಹೊರಭಾಗದಲ್ಲಿ ಕೆಲವು ಘಟನೆಗಳು ನಡೆದು ಅದರ ಪರಿಣಾಮವಾಗಿ ೯ ಜನ ಮುಸ್ಲಿಮರು, ೮ ಜನ ಹಿಂದೂಗಳಿಗೆ ಗಾಯಗಳಾದವು. ಪೋಲೀಸರು ಸುಮಾರು ೧೫೦ ತಿಳಿಗೇಡಿಗಳನ್ನು ಬಂಧಿಸಿದರು.

೨೪ನೇ ಜುಲೈರಂದು ಸುಮಾರು ೩೦೦-೪೦೦ ಜನ ಮುಸ್ಲಿಮರು ನೆಲಬಂದವಾಡಿ ಮತ್ತು ಬಜಾರ್ ಚೌಕದಲ್ಲಿ ಸೇರಿ ಕಲ್ಲು ತೂರಾಟದಲ್ಲಿ ತೊಡಗಿದ್ದಾಗ ಪೋಲೀಸರು ೬ ಸುತ್ತು ಅಶ್ರುವಾಯುಗಳನ್ನು ಮತ್ತು ೩ ಸುತ್ತು ಗಾಳಿಯಲ್ಲಿ ಗುಂಡನ್ನು ಹಾರಿಸಿದರು. ಮತ್ತು ಗುಂಪನ್ನು ಚದುರಿಸಿದರು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್. ಚರ್ಚೆಯಾದ ಹಿನ್ನೆಲೆಯಲ್ಲಿ ಉತ್ತರ ಕೊಡುತ್ತಾ ಗಮನ ಸೆಳೆಯುವ ಸೂಚನೆಗೆ ಕೊಟ್ಟಹಾಗೆ ಅಧಿಕಾರಿಗಳು ಬರೆದುಕೊಟ್ಟಿದ್ದು ಓದಿದರೆ ಹೇಗೆ?

ಶ್ರೀ ಹೆಚ್.ಡಿ. ಚೌಡಯ್ಯ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೋ, ಅಥವಾ ಉತ್ತರ ಹೇಳುತ್ತಾರೋ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ, ಮೊದಲು ಅಂಕಿಅಂಶಗಳನ್ನು ಹೇಳಿ ಆನಂತರ ಉತ್ತರ ಕೊಡುತ್ತೇನೆ.

ಈ ಗಲಭೆಯಲ್ಲಿ ಒಬ್ಬ ಸಶಸ್ತ್ರ ಪೋಲೀಸು ಪೇದೆ ಮತ್ತು ಇನ್ನಿಬ್ಬರು ಗಾಯಗೊಂಡರು.

ಜುಲೈ ೨೪ರಂದು ೫ ಗಂಟೆಯ ಸಮಯದಲ್ಲಿ ರಾಮಕೃಷ್ಣ, ಕುಮಾರ ಮತ್ತು ೪೫ ಜನರು ಹುಣಸೇಹಳ್ಳಿ ಗ್ರಾಮದ ಹತ್ತಿರ ಸಯದ್ ಯೂನಸ್ ಮತ್ತು ಆಸಾಬ ಅವರಿಗೆ ಚಾಕು ಮತ್ತು ದೊಣ್ಣೆಗಳಿಂದ ಹೊಡೆದ ಪರಿಣಾಮವಾಗಿ ಅವರಿಬ್ಬರು ಸ್ಥಳದಲ್ಲಿಯೇ ಮೃತಪಟ್ಟರು ಮತ್ತು ನಜೀರ್‌ಸಾಬ್ ಗಾಯಗೊಂಡು ಅವನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು.

ಘರ್ಷಣೆಯಲ್ಲಿ ಗಾಯಗೊಂಡು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪೈಕಿ ಇಬ್ಬರು ಮೃತಪಟ್ಟರು.

ಜುಲೈ ೨೩-೨೫ರ ವರೆಗೆ ನಡೆದ ಗಲಭೆಯಲ್ಲಿ ಪೋಲೀಸರು ಒಟ್ಟು ೧೨೮ ಕೇಸುಗಳನ್ನು ದಾಖಲು ಮಾಡಿಕೊಂಡು ೪೪ ಜನ ಮುಸ್ಲಿಮರನ್ನು ಮತ್ತು ೧೩೧ ಜನ ಹಿಂದೂಗಳನ್ನು ದಸ್ತಗಿರಿ ಮಾಡಿರುತ್ತಾರೆ. ಈ ಗಲಭೆಯಲ್ಲಿ ಒಟ್ಟು ೧೯ ಜನ ಪೋಲೀಸರು ೮೦ ಜನ ಹಿಂದೂಗಳು ಮತ್ತು ೩೫ ಜನ ಮುಸ್ಲಿಮರು ಗಾಯಗೊಂಡಿರುತ್ತಾರೆ.

ಗೃಹ ಮಂತ್ರಿಗಳು, ಸಹಕಾರ ಮಂತ್ರಿಗಳು, ಗೃಹ ಕಾರ್ಯದರ್ಶಿಯವರು ಹಾಗೂ ಡಿ.ಜಿ. ಮತ್ತು ಐ.ಜಿ.ಪಿ.ಯವರು ರಾಮನಗರದ ಗಲಭೆ ಪೀಡಿತ ಸ್ಥಳಗಳಿಗೆ ಭೇಟಿ ಕೊಟ್ಟು ಶಾಂತಿ ಸಭೆಯನ್ನು ಏರ್ಪಡಿಸಿ, ಎರಡೂ ಕೋಮಿನವರು ಸೌಹಾರ್ದತೆಯಿಂದ ಇರಲು ಮನವಿಮಾಡಿಕೊಂಡರು.

ರಾಮನಗರದಲ್ಲಿ ನಡೆದ ಪೋಲೀಸು ಗೋಲೀಬಾರಿನ ಬಗ್ಗೆ ಸರಕಾರವು ನ್ಯಾಯಾಂಗ ತನಿಖೆಯನ್ನು ನಡೆಸಲು ನಿರ್ಧರಿಸಿದ್ದು ಈ ವಿಷಯವಾಗಿ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಲು ಹೈಕೋರ್ಟ್ ರಿಜಿಸ್ಟ್ರಾರ್‌ರವರಿಗೆ ಪತ್ರ ಬರೆಯಲಾಗಿದೆ.

ಈ ಕೋಮು ಗಲಭೆಯಲ್ಲಿ ನೊಂದವರಿಗೆ ಸರಕಾರದವರು ಒಟ್ಟು ರೂ. ೩,೨೫,೦೫೦-೦೦ ಗಳನ್ನು ಪರಿಹಾರ ಧನವಾಗಿ ಮಂಜೂರು ಮಾಡಿದ್ದಾರೆ. ರಾಮನಗರದಲ್ಲಿ ಸರ್ವೆ ನಂ. ೫೨ ರೆವಿನ್ಯೂ ಲೆಕ್ಕದಲ್ಲಿ ಖಬರ್‌ಸ್ತಾನ್ ಎಂದು ತೋರಿಸಲಾಗಿದೆ. ಆದರೆ ಇಲ್ಲಿ ಯಾವಾಗಲೂ ಶವಗಳನ್ನು ಹೂತಿಲ್ಲ. ಈ ಸ್ಥಳದಲ್ಲಿ ಉಪ ಖಜಾನೆ ಕಟ್ಟಡವನ್ನು ಕಟ್ಟುವ ಪ್ರಸ್ತಾವನೆ ಇತ್ತು. ರೆವಿನ್ಯೂ ಕಮೀಷನರಿಂದ ತಡೆ ಆಜ್ಞೆ ಸಹ ಇತ್ತು. ಮುಸಲ್ಮಾನ ಸದಸ್ಯರು ಈ ೧ ಎಕರೆ ೪ ಗುಂಟೆ ಪ್ರದೇಶಕ್ಕೆ ಕಲ್ಲು ಚಪ್ಪಡಿಗಳಿಂದ ಬೇಲಿ ಹಾಕಲು ಪ್ರಾರಂಭಿಸಿದರು. ಈ ಮೇಲಿನ ಮುಸಲ್ಮಾನರ ಕ್ರಮವು ದಿನಾಂಕ ೨೨-೨೩ ಜುಲೈ ೧೯೮೬ರಂದು ನಡೆದ ಕೋಮು ಗಲಭೆಗೆ ಮುಖ್ಯ ಕಾರಣವಾಗಿರುತ್ತದೆ. ಖಬರ್‌ಸ್ತಾನ್ ಎಂದು ಏನು ಹೇಳಿಕೊಂಡಿದ್ದರು ಅಲ್ಲಿ ಶವಗಳನ್ನು ಹೂತಿರಲಿಲ್ಲ. ಈ ಖಬರ್‌ಸ್ತಾನ್ ಪ್ರದೇಶದಲ್ಲಿ ಕಲ್ಲು ಚಪ್ಪಡಿಗಳಿಂದ ಒಂದೇ ದಿವಸದಲ್ಲಿ ಬೇಲಿ ಹಾಕಲಿಕ್ಕೆ ಪ್ರಾರಂಭ ಮಾಡಿದ್ದು ಒಂದು ತರಹ ಇರಿಟೇಟ್ ಎಂದು ಅನಿಸಿದೆ. ಇನ್ನು ಎರಡನೆಯ ವಿಚಾರ ಏನೆಂದರೆ ಮುಸ್ಲಿಂ ಮಸೀದಿ ಇದ್ದ ಕಡೆ ಯಾವಾಗಲೂ ಮೆರವಣಿಗೆ ಹೋಗಿರಲಿಲ್ಲ. ಪೂರ್ವ ಪರವಾನಿಗಿ ಇಲ್ಲದೆ ಚಾಮುಂಡೇಶ್ವರಿ ಮೆರವಣಿಗೆ ಮುಸ್ಲಿಂ ಮಸೀದಿ ಕಡೆ ಹೋಗಿದ್ದರಿಂದ ಅಲ್ಲಿ ಕಲ್ಲು ಬೀರಿದ್ದುದು ಉಂಟು. ಈ ಎರಡು ಕಾರಣಗಳಿಂದ ಆಗಿದೆ. ಅವರು ಕಲ್ಲು ಚಪ್ಪಡಿಗಳನ್ನು ಒಂದೇ ದಿವಸದಲ್ಲಿ ಹಾಕದೇ, ಅದು ತೀರ್ಮಾನ ಆದಮೇಲೆ ಮಾಡಿದ್ದರೆ ಚೆನ್ನಾಗಿ ಕಾಣುತ್ತಿತ್ತು. ಇನ್ನು ಮೂರನೆಯದು ಎಂದರೆ ಅವರು ಮೆರವಣಿಗೆ ತೆಗೆದುಕೊಂಡು ಹೋದ ಮಾರ್ಗಕ್ಕೂ ಕೂಡ ಅಲ್ಲಿ ಪರವಾನಿಗಿ ಇರಲಿಲ್ಲ, ಅದು ಸ್ವಲ್ಪ ಮಟ್ಟಿಗೆ ಕಾರಣವಾಗಿದೆ ಎಂದು ನನಗನಿಸಿದೆ. ವಕ್ಫ್ ಪ್ರಾಪರ್ಟಿ ಜವಾಬ್ದಾರಿ ಇರತಕ್ಕ ರೆವಿನ್ಯೂ ಇಲಾಖೆ ಸರ್ಕಾರದ ಒಂದು ಭಾಗವಾಗಿರುವುದರಿಂದ ಅದು ತೀರ್ಮಾನ ತೆಗೆದುಕೊಂಡಿದ್ದರೆ ರಾಮನಗರದಲ್ಲಿ ಇಂತಹ ಘಟನೆ ನಡೆಯುವುದಕ್ಕೆ ಅವಕಾಶ ಆಗುತ್ತಿರಲಿಲ್ಲ. ಆ ಮಟ್ಟಿಕ್ಕೆ ನಾನು ತಪ್ಪನ್ನು ಒಪ್ಪಿ ಕೊಳ್ಳುತ್ತೇನೆ. ಇನ್ನು ಅಳಂದ ಘಟನೆ ಬಗ್ಗೆ ಬಹುಶಃ ಮುಂಜಾಗ್ರತಾ ಕ್ರಮದಿಂದ ತಪ್ಪಿಸಲಿಕ್ಕೆ ಸಾಧ್ಯವಾಗುತ್ತಿತ್ತೇನು ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲಿ ಮೆರವಣಿಗೆಯಲ್ಲಿ ಎತ್ತುಗಳನ್ನು ತೆಗೆದುಕೊಂಡು ಹೋಗುವ ಕಾಲದಲ್ಲಿ ನಮ್ಮ ಎತ್ತುಗಳು ಮುಂದೆ ಹೋಗಬೇಕೆಂದು ಗುದ್ದಾಟ ಪ್ರಾರಂಭವಾಗಿದೆ. ಪೋಲೀಸರು ಸಾಧ್ಯವಾದಮಟ್ಟಿಗೂ ಆ ಗಲಭೆಯನ್ನು ತಡೆಗಟ್ಟಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಗೋಲಿಬಾರ್ ತಪ್ಪಿಸುವ ಮಟ್ಟಕ್ಕೆ ಇನ್ನೂ ಹೆಚ್ಚಿನ ಮುಂಜಾಗರೂಕತೆ ತೆಗೆದು ಕೊಳ್ಳಬಹುದಾಗಿತ್ತು. ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆ ಮಾಡೋಣ ಎನ್ನುವ ದೃಷ್ಟಿ ಯಿಂದ ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡಿದ್ದೇವೆ, ಇಲ್ಲಿಯೂ ಕೂಡ ಅದೇ ಭಾವನೆ ಇದ್ದುದರಿಂದ ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದೇವೆ. ಆ ಪಕ್ಷ, ಈ ಪಕ್ಷ ಎಂದು ತಾರತಮ್ಯ ಇಲ್ಲದೇ ಯಾರು ತಪ್ಪು ಮಾಡಿದ್ದಾರೆ ಅವರು ಮುಂದೆ ಈ ತರಹ ಮುಂದುವರೆಸಬಾರದೆಂದು, ತಪ್ಪಿತಸ್ಥರಿಗೆ ಶಿಕ್ಷೆ ಆಗ ಬೇಕೆಂದು ಮಾಡಿದ್ದೇವೆ. ಇನ್ನು ಬೆಳಗಾಂನಲ್ಲಿ ನಡೆದಂಥ ಪ್ರಕರಣದ ಬಗ್ಗೆ ಅಲ್ಲಿ ಶಾಂತಿಯುತ ರೀತಿಯಲ್ಲಿ ಸತ್ಯಾಗ್ರಹ ಮಾಡುತ್ತಿದ್ದೆವು ಎಂದು ನಮ್ಮ ಎಂ.ಇ.ಎಸ್. ಸದಸ್ಯರು ಹೇಳಿದರು. ಕುಡಿಯುವ ನೀರಿಗೆ ಅಡ್ಡಿಯಾಗುವಂತೆ ಹಿಂಡಲಗ ಪಂಪ್ ಹೌಸ್‌ಗೆ ಬೆಂಕಿ ಹಚ್ಚಿದ್ದು ಶಾಂತರೀತಿ ಯಿಂದ ನಡೆದ ಘಟನೆಯೇ? ಅಲ್ಲಿಂದ ಬರತಕ್ಕ ನೀರಿನ ಪೈಪ್ ಒಡೆದುಹಾಕಿ ಕುಡಿಯುವ ನೀರು ಊರಿಗೆ ತಲುಪದಂತೆ ಮಾಡಿರುವುದು ಶಾಂತರೀತಿಯಿಂದ ನಡೆದ ಘಟನೆಯೇ? ಖಾನಾಪುರದಿಂದ ಬರತಕ್ಕ ರೈಲಿಗೆ ಅಡ್ಡಗಟ್ಟಿ ರೈಲು ಬೀಳುವಂತೆ ಮಾಡತಕ್ಕದ್ದು ಶಾಂತ ರೀತಿಯಿಂದ ನಡೆದ ಘಟನೆಯೇ? ಹಿಂಡಲಗ ಸಿರಿಕಲ್ಚರ್ ಬಿಲ್ಡಿಂಗ್‌ಗೆ ಬೆಂಕಿ ಹಚ್ಚಿ ಲಕ್ಷಾಂತರ ರೂಪಾಯಿಗಳ ಕಷ್ಟನಷ್ಟ ವನ್ನು ಉಂಟುಮಾಡುವುದಕ್ಕೆ ಕಾರಣಕರ್ತರಾಗಿದ್ದಾರೆ. ಇನ್ನು ಪೋಲೀಸರಿಗೆ ಫೈರ್‌ಬಾಲ್ ಎಂದು ಹೇಳಿ ಅದಕ್ಕೆ ಬೆಂಕಿ ಹಚ್ಚಿ ಅವರು ಬೆಂದು ಹೋಗುವಂತೆ ಮಾಡಿರುವುದು ಹಿಂಸಾಚಾರ ಅಲ್ಲವೇ? ನಮ್ಮ ಪೋಲೀಸರು ಒಂದು ಕಡೆಯಿಂದ ಇನ್ನೊಂದು ಕಡೆ ಹೋಗಲಿಕ್ಕೆ ಸಾಧ್ಯವಾಗದಂತೆ ರಸ್ತೆಯಲ್ಲಿ ದೊಡ್ಡ ದೊಡ್ಡ ಮರಗಳನ್ನು ಕಡಿದು ಅಡ್ಡಹಾಕಿರತಕ್ಕದ್ದು, ಅಲ್ಲಿದ್ದ ಕಲ್ಲುಗಳನ್ನು ತೆಗೆದುಕೊಂಡು ಬಂದು ಪೋಲೀಸರಿಗೆ ಅಡ್ಡಲಾಗಿ ಸುತ್ತುವರಿದು ಹಿಂಸೆ ಮಾಡುವಂಥ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದಾಗ ಪೋಲೀಸರಿಗೆ ಗೋಲೀಬಾರ್ ಮಾಡದೇ ವಿಧಿ ಇರಲಿಲ್ಲ. ಮಹಾರಾಷ್ಟ್ರ ಸ್ನೇಹಿತರು ಹಿಂಸಾಚಾರ ಮಾಡುವಂತೆ ಹೇಳಲಿಲ್ಲ ಎಂದು ಹೇಳುತ್ತಾರೆ. ಇದು ಆದಮೇಲೆ ಆದ ಘಟನೆ ನೋಡಿ ದರೆ ಪೂರ್ವ ಸಿದ್ಧತೆ ಇತ್ತು ಎಂದು ನನಗನ್ನಿಸುತ್ತದೆ. ಅಲ್ಲಿಂದ ಬಂದಂಥ ಸ್ನೇಹಿತರು ಯಾರು ಇದ್ದರು ಅವರನ್ನು ನಾವು ಗೌರವದಿಂದ ನೋಡಿಕೊಂಡಿದ್ದೇವೆ. ಇಷ್ಟಾದರೂ ಕೂಡ ಅವರು ತಿಳಿದುಕೊಳ್ಳದೆ, ಇದು ನಮ್ಮ ದೌರ್ಬಲ್ಯ ಎಂದು ತಿಳಿದುಕೊಂಡು ಇಲ್ಲಿ ಆ ರೀತಿಯ ಘಟನೆಗಳಾಗುವುದಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರಚೋದನೆ ಮಾಡಿದರು ಎಂದು ಹೇಳಿದರೆ ತಪ್ಪಾಗಿರುವುದಿಲ್ಲ. ಈ ದೃಷ್ಟಿಯಲ್ಲಿ ಮಹಾಜನ್ ವರದಿಯ ಆಧಾರದ ಮೇಲೆ ಗಡಿ ಪ್ರಶ್ನೆಯನ್ನು ಇತ್ಯರ್ಥಮಾಡಿಕೊಳ್ಳಬೇಕು. ಮತ್ತು ಎರಡೂ ಭಾಗಗಳಲ್ಲಿ ಯಾವುಯಾವುದು ಮಹಾಜನ್ ವರದಿಯ

ಪ್ರಕಾರ ಆಯಾ ಭಾಗಗಳಲ್ಲಿರತಕ್ಕ ಕನ್ನಡ ಮಾತನಾಡತಕ್ಕಂತಹ ಊರುಗಳಿವೆ, ಅವುಗಳು ಇಲ್ಲಿಗೆ ವಿಗರ್ಾವಣೆಯಾಗಬೇಕು ಎಂದು ಇದೆ, ಅಲ್ಲಿ ಅವರಿಗೆ ಯಾವ ರೀತಿಯ ಸೌಕರ್ಯಗಳನ್ನು ಒದಗಿಸಿ ಕೊಡಬೇಕು ? ವಿದ್ಯಾ ಸೌಕರ್ಯವಾಗಲಿ, ನೀರಿನ ಸೌಕರ್ಯವಾಗಲಿ, ರಸ್ತೆ ಸೌಕರ್ಯವಾಗಲಿ ಬೇರೆ ಬೇರೆ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಅದೇ ವರದಿಯ ಪ್ರಕಾರ ಈ ಕಡೆಯಿಂದ ಆ ಕಡೆಗೆ ಹೋಗತಕ್ಕಂತಹ ಗ್ರಾಮಗಳಿಗೆ ನಾವು ಯಾವಯಾವ ರೀತಿಯ ಸೌಕರ್ಯಗಳನ್ನು ಒದಗಿಸಿಕೊಡು ವಂತದ್ದಕ್ಕೆ ಅವಕಾಶ ಇದೆ. ಈ ಬಗ್ಗೆ ಎರಡೂ ರಾಜ್ಯಗಳ ಇಬ್ಬರೂ ಮುಖ್ಯಮಂತ್ರಿಗಳು ಚರ್ಚೆ ಮಾಡಿ, ಚರ್ಚೆಯ ಮುಖಾಂತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳತಕ್ಕಂತಹದ್ದು ಎಂದು ಹೇಳಿ ಹಿಂದೆ ಮುಖ್ಯಮಂತಿಗಳಾಗಿದ್ದಂಥ ಶ್ರೀಮಾನ್ ವಸಂತದಾದಾ ಪಾಟೀಲ್ ರವರ ಜೊತೆ ಚರ್ಚೆ ನಡೆಯಿತು. ನಾನೂ ಕೂಡ ಒಂದೆರಡು ಸಭೆಯಲ್ಲಿ ಭಾಗವಹಿಸಿದ್ದೇನೆ. ಮತ್ತೆ ಈಗ ಶ್ರೀಮಾನ್ ಚವ್ಹಾಣ್‌ರವರು ಬಂದ ಮೇಲೆ ಒಂದು ಸಾರಿ ಚರ್ಚೆ ನಡೆಯಿತು. ಹೀಗೆ ಯಾವುದೇ ವಿಷಯಗಳನ್ನು ಗಡಿ ಸಮಸ್ಯೆಯಾಗಲಿ, ಭಾಷಾ ಸಮಸ್ಯೆಯಾಗಲಿ, ಇಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾದರೆ ಚರ್ಚೆಯ ಮುಖಾಂತರ ನಾವು ಒಬ್ಬೊರಿಗೊಬ್ಬರು ಪ್ರೀತಿ ವಿಶ್ವಾಸದಿಂದ ಮಾಡಿಕೊಳ್ಳಬೇಕು ಎನ್ನತಕ್ಕಂತಹ ವಿಶ್ವಾಸದಿಂದ ನಮ್ಮ ಮುಖ್ಯಮಂತ್ರಿಗಳು ಅವರಿಗೆ ಕಾಗದವನ್ನು ಬರೆದರು. ಬಹುಶಃ ಅವರು ಆ ಒಂದು ಕಾಗದಕ್ಕೆ ಬೆಲೆ ಕೊಟ್ಟಿದ್ದರೆ, ಈ ರೀತಿಯಾದ ಘಟನೆಯಾಗುತ್ತಿರಲಿಲ್ಲ. ಆದ್ದರಿಂದ ಮಾನ್ಯ ಶ್ರೀನಿವಾಸ್ ರವರು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸೃಷ್ಟಿ ಎಂದು ಹೇಳಿ ಅವರದೇ ಆದ ವ್ಯಾಖ್ಯಾಯನದಿಂದ ಅದನ್ನು ಹೇಳಿದ್ದಾರೆ. ಇದು ದುರಾದೃಷ್ಟಕರ. ಇದು ಬಹುಶಃ ಅವರು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿದ್ದಂತಹ ಸಂದರ್ಭದಲ್ಲಿ ಇಂತಹ ಘಟನೆಗಳು ನಡೆದಿರತಕ್ಕಂಥದ್ದು. ಅಂಥದ್ದರಲ್ಲೂ ಶ್ರೀಮಾನ್ ಶ್ರೀನಿವಾಸ್‌ರವರು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಅತ್ಯಂತ ನಿಕಟವರ್ತಿಗಳಾಗಿದ್ದವರು. ಅವರನ್ನು ಎಷ್ಟರಮಟ್ಟಿಗೆ ಇವರು ಅರ್ಥಮಾಡಿ ಕೊಂಡಿದ್ದಾರೆಂಬುದು ಇದರಿಂದ ಗೊತ್ತಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಜನ ಹೀಗೆ ಹೇಳುತ್ತಿದ್ದಾರೆ ಎಂದುಹೇಳಿದೆ. ಮತ್ಯಾವ ಉದ್ದೇಶದಿಂದಲ್ಲ.

ಶ್ರೀ ಬಿ. ರಾಚಯ್ಯ.—ಜನ ಹೇಳತಕ್ಕಂಥದ್ದೆಲ್ಲವನ್ನೂ ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಅದು ನಿಮಗೆ ಮನವರಿಕೆಯಾಗಬೇಕು. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಅದನ್ನು ಅವರು ಸೃಷ್ಟಿ ಮಾಡಿದ್ದಲ್ಲ. ಬಹುಶಃ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಇದೇ ಒಂದು ಸಂದರ್ಭ ಎಂದು ತಿಳಿದುಕೊಂಡು ಏನಾದರೂ ಈ ರೀತಿ ಮಾಡಿರಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆಸ್ಪತ್ರೆಯಲ್ಲಿದ್ದರೂ ಕೂಡ ಅವರೇ ಹೇಳಿದ್ದಾರೆ. ಆಡಳಿತ ಎಲ್ಲವನ್ನೂ ಸಮರ್ಪಕವಾಗಿ ನಡೆಸುತ್ತಿದ್ದೇನೆ. ಎಲ್ಲೆಲ್ಲಿ ಏನೇನು ಮಾಡಬೇಕೋ ಅದನ್ನೆಲ್ಲಾ ಆಸ್ಪತ್ರೆಯಲ್ಲಿ ಮಲಗಿಕೊಂಡೇ ಮಾಡುತ್ತೇನೆ ಎಂದು ಅವರೇ ಹೇಳಿದ್ದಾರೆ,

ಶ್ರೀ ಬಿ. ರಾಚಯ್ಯ.—ಆಸ್ಪತ್ರೆಯಲ್ಲಿದ್ದಂತಹ ಸಮಯದಲ್ಲಿ ಫೈಲುಗಳನ್ನು ನೋಡು ವಂತಹದ್ದು, ಅಥವಾ ನಿರ್ದೇಶನ–ಆದೇಶ ಕೊಡತಕ್ಕಂಥದ್ದು ಕೆಲಸಗಳನ್ನು ಮಾಡಿರಬಹುದು.

ಶ್ರೀ ಧರ್ಮಸಿಂಗ್.—ಸಚಿವ ಸಂಪುಟದ ಸಭೆ ಆಸ್ಪತ್ರೆಯಲ್ಲಿ ನಡೆದಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಆಸ್ಪತ್ರೆಯಲ್ಲಿ ಆಗಬಾರದು ಎಂದು ಏನೂ ಇಲ್ಲ. ಆಸ್ಪತ್ರೆ ಯಲ್ಲಿದ್ದಾರೆ ಎಂದು ಅವರ ಕೆಲವು ಸ್ನೇಹಿತರು ಇವರೇ ಪ್ರಾರಂಭ ಮಾಡಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ಮಹಾರಾಷ್ಟ್ರದ ನಾಯಕರು ನಮ್ಮ ಗಡಿ ನಾಡಿನಲ್ಲಿ ಬಂದಂಥ ಸಂದರ್ಭ ದಲ್ಲಿ ಅವರಿಗೆ ರಾಜಾತಿಥ್ಯವನ್ನು ಕೊಟ್ಟಿದ್ದಾರೆ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಬಂದಂಥದ್ದು ಕೇಂದ್ರ ಸರ್ಕಾರದ ಸಚಿವರ ಜೊತೆಯಲ್ಲಿ, ಅವರ ಮನೆಯಲ್ಲಿಯೇ ಇದ್ದರು. ಕರ್ನಾಟಕದ ಗಡಿಯೊಳಗೆ ಪ್ರವೇಶ ಮಾಡಿ, ಕೇಂದ್ರದ ಮಂತ್ರಿಗಳ ಮನೆಯಲ್ಲಿ ಇದ್ದರು ಎಂಬುದಾಗಿ ಪತ್ರಿಕೆಗಳಲ್ಲಿ ಬಂದಿದ್ದನ್ನು ನಾವು ಓದಿದ್ದೇವೆ. ಆದ್ದರಿಂದ ಆ ಬಗ್ಗೆ ಸಹ ಸ್ಪಷ್ಟೀಕರಣಗೊಳಿಸಬೇಕೆಂದು ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ,

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ನಿಮ್ಮ ಕಲ್ಪನೆ ಅದು ಯಾವ ಪತ್ರಿಕೆಯಲ್ಲಿ ಬಂದಿದೆ ?

ಶ್ರೀ ಆರ್. ಎಲ್. ಜಾಲಪ್ಪ.—ಆಸ್ಪತ್ರೆಯಲ್ಲಿದ್ದುಕೊಂಡೇ ಇದನ್ನೆಲ್ಲಾ ಮಾಡಿದ್ದಾರೆ ಎಂದು ಹೇಳುತ್ತೀರಲ್ಲ. ಅದು ನಿಮ್ಮ ಭ್ರಮೆಯಲ್ಲವೇ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಬಗ್ಗೆ ಯಾವ ಆರೋಪವನ್ನೂ ನಾನು ಮಾಡಿಲ್ಲ. ನಿಮಗೆ ಅದು ಅರ್ಥವಾಗದಿದ್ದರೆ ನಾನು ಏನೂ ಮಾಡು ವುದಕ್ಕಾಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅದು ನಮಗೆ ಅರ್ಥವಾಗುತ್ತದೆ.

(ಗೊಂದಲ)

ಯಾರೋ ಹೇಳಿದರು ಎಂದು ಎಲ್ಲವನ್ನೂ ಇವರೇ ಮಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಮಹಾಜನ್ ಕಮೀಷನ್ ವರದಿಯನ್ನು ಒಪ್ಪಬೇಕೆಂದು ಪ್ರಧಾನ ಮಂತ್ರಿಯವರೇ ಹೇಳಿದ್ದಾರೆ. ಇದನ್ನೂ ಕೂಡ ತಾವು ಗಮನಿಸಬೇಕು.

ಶ್ರೀ ಬಿ. ರಾಚಯ್ಯ.—ಮಾನ್ಯ ಶರದ್ ಪವಾರ್ ರವರು ಯಾವಾಗ ಬಂದರು ? ಎಲ್ಲಿದ್ದರು ? ಎನ್ನುವ ವಿಷಯ ಪೋಲೀಸ್‌ನವರಿಗೆ ಗೊತ್ತಿದೆ. ಗೊತ್ತಿಲ್ಲ ಎಂದು ಅಲ್ಲ. ಅದನ್ನು ನಾನು ಹೇಳಬಲ್ಲೆ ಆದರೆ ಸತ್ಯಾಗ್ರಹ ನಡೆಯುವಂತಹ ಸ್ಥಳಕ್ಕೆ ಇಷ್ಟೇ ಗಂಟೆಗೆ ಬರುತ್ತೇನೆ, ಇಂತಹ ಸ್ಥಳದಲ್ಲಿ ಸತ್ಯಾಗ್ರಹ ವನ್ನು ಹೂಡುತ್ತೇನೆಂದು ಹೇಳಿದ್ದರು. ಆಪೊತ್ತಿನವರೆಗೂ ಅವರನ್ನು ಅರೆಸ್ಟ್ ಮಾಡುವುದ ಕ್ಕಾಗಲಿಲ್ಲ.

ಶ್ರೀ ಹೆಚ್. ಡಿ. ಚೌಡಯ್ಯ.—ಏಕೆ ? ಏಕೆ ಆಗುವುದಿಲ್ಲ ?

ಶ್ರೀ ಬಿ. ರಾಚಯ್ಯ.—ಏಕೆ ಆಗುವುದಿಲ್ಲ ಎಂದರೆ, ಇಂತಿಷ್ಟು ಗಂಟೆಗೆ ಇಲ್ಲೇ ಬರುತ್ತೇನೆ ಇಲ್ಲೇ ಸತ್ಯಾಗ್ರಹ ಮಾಡುತ್ತೇನೆಂದು ಹೇಳಿರುವಾಗ, ಅದಕ್ಕಿಂತ ಮುಂಚಿತವಾಗಿ ಅವರು ಸುಮ್ಮನೆ ಬಂದಿರ ಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಡಿಕ್ಲೇರ್ ಮಾಡಿಯೇ ಬಂದಿದ್ದಾರೆ. ಬಂದಿದ್ದುದು ಗೊತ್ತಾದ ಮೇಲೆ...

ಶ್ರೀ ಬಿ. ರಾಚಯ್ಯ.—ಆದರೆ ಇಂತಹ ಗಂಟೆಯಲ್ಲಿ, ಇಂತಹ ಸ್ಥಳಕ್ಕೆ ಬರುತ್ತೇನೆಂದು ಹೇಳಿದ್ದಾಗ, ಅಲ್ಲಿಯವರೆವಿಗೂ ಕಾಯ್ದಿದ್ದು, ಅವರು ಬಂದ ತಕ್ಷಣವೇ ಅರೆಸ್ಟ್ ಮಾಡಿಕೊಂಡು ಕರೆದುಕೊಂಡು ಹೋದರು. ಅದಕ್ಕೋಸ್ಕರ ನಮ್ಮ ಪೋಲೀಸ್‌ನವರಿಗೆ, ಅವರು ಎಲ್ಲಿದ್ದರು ? ಯಾವಾಗ ಬಂದರು ? ಎಂಬುದು ಗೊತ್ತಿಲ್ಲ ಎಂದು ಅಲ್ಲ. ಎಲ್ಲಾ ಗೊತ್ತಿದೆ. ಆದರೆ ಅವರು ಮಾತ್ರ ಶ್ರೀಮಾನ್ ಬಿ. ಶಂಕರಾನಂದ್ ರವರ ಮನೆಯಲ್ಲಿ ಇರಲಿಲ್ಲ. ಅವರ ಜೊತೆಯಲ್ಲೂ ಬಂದಿರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಗೊತ್ತಿದ್ದು ಅವರನ್ನು ಅರೆಸ್ಟ್ ಏಕೆ ಮಾಡಲಿಲ್ಲ ? ಇಷ್ಟೆಲ್ಲಾ ಗಲಾಟೆ-ಫೈರಿಂಗ್ ಆಗುವವರೆಗೂ ತಾವು ಏಕೆ ಸುಮ್ಮನಿದ್ದಿರಿ ?

ಶ್ರೀ ಬಿ. ರಾಚಯ್ಯ.—ಇವರಲ್ಲಿ ಇಬ್ಬರ ಹೆಸರು ಬಂದಿದೆ. ಶ್ರೀ ಬಿಡೇಸ್ ಕುಲಕರ್ಣಿ ಎಂಬುವರ ಮನೆಯಲ್ಲಿದ್ದರು. ಅವರು ಶ್ರೀಮಾನ್ ಬಿ. ಶಂಕರಾನಂದ್ ರವರ ಮನೆಯಲ್ಲಿ ಇರಲಿಲ್ಲ. ಅದನ್ನು ಹೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಯಾರ ಮನೆಯಲ್ಲಿದ್ದರು ಎಂಬುದನ್ನು ಮಾನ್ಯ ಗೃಹ ಸಚಿವರು ಈಗ ಹೇಳಿದರು. ಆ ವ್ಯಕ್ತಿ ಯಾವ ಪಕ್ಷಕ್ಕೆ ಸೇರಿದವರು ?

ಶ್ರೀ ಬಿ. ರಾಚಯ್ಯ.—ಅವರು ಈಗ ಯಾವ ಪಕ್ಷದಲ್ಲಿದ್ದಾರೋ ಗೊತ್ತಿಲ್ಲ. ಅವರು ಮೊದಲು ಕಾಂಗ್ರೆಸ್ ಪಕ್ಷದಲ್ಲಿದ್ದರು ಎಂದು ಮಾತ್ರ ಗೊತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—For your information he is Sri Hegde's friend.

SRI R. L. JALAPPA.—You are also Sri Hegde's friend? Are you an enemy ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಜೋಷಿಯವರು ಬಂದಿದ್ದರಲ್ಲ ಅವರು ಯಾವ ಪಕ್ಷದರು ? ಅವರು ನಿಮ್ಮ ಜನತಾ ಪಕ್ಷದವರಲ್ಲವೇ ?

ಶ್ರೀ ಆರ್. ಎಲ್. ಜಾಲಪ್ಪ.—ಅವರು ಮರಾಠ ಪಕ್ಷದಿಂದ ಬಂದಿದ್ದಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾಂಗ್ರೆಸ್ ಪಕ್ಷದಿಂದ ಯಾರೂ ಬರಲಿಲ್ಲ. ಬಂದವರೆಲ್ಲ ಜನತಾ ಪಕ್ಷದವರೇ.

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮ ಪಕ್ಷ ಅಲ್ಲಿದೆಯಲ್ಲವೇ, ನಿಮ್ಮ ಸರ್ಕಾರ ಅಲ್ಲಿದೆಯಲ್ಲವೇ? ಅವರನ್ನು ಹೊರಗಡೆ ಬಿಡದ ಹಾಗೆ ಇಟ್ಟುಕೊಳ್ಳುವುದಕ್ಕೆ ಬದಲು ಬಾರ್ಡರಿನಿಂದ ಹೊರಗೆ ಏಕೆ ಬಿಟ್ಟರು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬಾರ್ಡರ್‌ನಿಂದ ಈಚೆಗೆ ಬರುವುದಕ್ಕೆ ಬಿಡಬಾರದಾಗಿತ್ತು ಎಂದು ಶ್ರೀಮಾನ್ ಜಾಲಪ್ಪನವರು ಹೇಳಿದ್ದಾರೆ. ಬಂದವರೆಲ್ಲಾ ನಿಮ್ಮ ಪಕ್ಷದ ನಾಯಕರೆ. ಅವರಿಗೆ ನೀವು ಹೇಳುವುದಕ್ಕಾಗುತ್ತಿರಲಿಲ್ಲವೆ ? ಇಲ್ಲಿ ನೀವು ಬರಬೇಡಿ ಎಂದು ನಮ್ಮ ಪಕ್ಷ ಅಧಿಕಾರದಲ್ಲಿರುವಂತಹದ್ದು ಇದೊಂದೇ ರಾಜ್ಯದಲ್ಲಿ. ನಮ್ಮ ಹತ್ತಿರವೇ ಸಾಕಷ್ಟು ವ್ಯಾಜ್ಯ ಇದೆ. ಮತ್ತೆ ನೀವು ಬೇರೆ ಏಕೆ ಬರುತ್ತೀರ ಎಂದು ಹೇಳುವುದಕ್ಕಾಗುತ್ತಿರಲಿಲ್ಲವೆ ?

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಕುಲಕರ್ಣಿಯವರು ಶ್ರೀಮಾನ್ ಜಾಲಪ್ಪನವರ ಪಕ್ಷಕ್ಕೆ ಸೇರಿದವರು ಆಗಿರಬಹುದು.

ಶ್ರೀ ಬಿ. ರಾಚಯ್ಯ.—ಅವರು ಹಿಂದೆ ಯಾವ ಪಕ್ಷದಲ್ಲಿದ್ದರು ಎಂದು ಹೇಳಿದ್ದೇನೆ. ಅದರಲ್ಲಿ ಅದರಲ್ಲಿ ಆಗ ಸರ್ಕಾರ ತೆಗೆದುಕೊಂಡಿರತಕ್ಕಂತಹ ಕ್ರಮದಿಂದ ಬಹುಶಃ ಮುಂದೆ ಇದು ಹಬ್ಬದೇ ಇರುವ ರೀತಿಯಲ್ಲಿ ಸಾಕಷ್ಟು ಕ್ರಮವನ್ನು ತೆಗೆದುಕೊಂಡಿದ್ದೇವೆ ಆದರೂ ಮುಂಜಾಗ್ರತ ಕ್ರಮ ತೆಗೆದುಕೊಂಡಿದ್ದರೆ, ಇದನ್ನು ತಪ್ಪಿಸಬಹುದಾಗಿತ್ತು ಎಂದು ಹೇಳಿದ್ದಾರೆ. ಬಹುಶಃ ಅದು ಅವರವರ ಅಭಿಪ್ರಾಯದ ಮಾತಾಗಿದೆ. ಮುಂಜಾಗ್ರತೆ ಕ್ರಮವನ್ನು ಸಾಧ್ಯವಾದ ಮಟ್ಟಿಗೂ ತೆಗೆದುಕೊಂಡಿದ್ದೇವೆ. ಕೂರ್ಗ್‌ನಲ್ಲಿ, ವಿರಾಜಪೇಟೆವರೆಗೂ ಹರಡಿದೆ ಎಂದು ಹೇಳಿದ್ದಾರೆ. ಕೆ. ಆರ್. ನಗರದಲ್ಲಿ ಮತ್ತೆ ಇದೇ ರೀತಿ ವಾತಾವರಣ ಉಂಟಾಗುತ್ತಿದೆ. ಅದರಲ್ಲೂ ರಾಮನಗರದಿಂದ, ಚನ್ನಪಟ್ಟಣಕ್ಕೆ, ಚನ್ನಪಟ್ಟಣದಿಂದ, ಕನಕಪುರಕ್ಕೆ, ಕನಕಪುರದಿಂದ ಬೆಂಗಳೂರಿಗೆ, ಹೀಗೆ ಬೇರೆ ಬೇರೆ ಕಡೆಗೂ ಇದು ಹಬ್ಬುವುದಕ್ಕೆ ಅವಕಾಶ ಇತ್ತು. ಅಂತಹ ಕಡೆಗಳಲ್ಲೆಲ್ಲಾ ಮುಂಜಾಗ್ರತ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದು ಹೆಚ್ಚು ಹಬ್ಬದೇ ಇರುವ ರೀತಿಯಲ್ಲಿ ಅದನ್ನು ಅಷ್ಟರಲ್ಲೇ ತಡಗಟ್ಟುವುದಕ್ಕೆ ಸಾಧ್ಯವಾಯಿತು. ಆದ್ದರಿಂದ ಬಹುಶಃ ಹಿಂದೆ ಅಂತಹ ತಪ್ಪುಗಳಿಂದ ಅನೇಕ ಪಾಠಗಳನ್ನು ಕಲಿಯಬಹುದು ಎಂದು ಶ್ರೀಮಾನ್ ಶ್ರೀನಿವಾಸ್ ರವರು ಹೇಳಿದರು. ಅದು ಒಪ್ಪತಕ್ಕಂಥ ಮಾತೇ. ಆದ್ದರಿಂದ ಹೊಸ ಪಾಠಗಳನ್ನು ಕಲಿಯಬೇಕಾದ ಪಕ್ಷದಲ್ಲಿ ಹಳೆಯದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿ ಬರುತ್ತದೆ ಆ ದೃಷ್ಟಿಯಿಂದ ಇಂತಹ ಚರ್ಚೆಗಳು ನಡೆಯುತಕ್ಕಂತಹ ಕಾಲದಲ್ಲಿ ಉದ್ದೇಶಪೂರ್ವಕವಾಗಿ ಪ್ರಚೋದನೆ ಮಾಡಿದ ಹಾಗೆ, ಅದಕ್ಕೆ ಅವಕಾಶ ಆಗದ ಹಾಗೆ ಮಾಡಿದರೆ ಬಹಳ ಒಳ್ಳೆಯದು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಆದ್ದರಿಂದ ಅದನ್ನೂ ಗಮನದಲ್ಲಿಟ್ಟುಕೊಂಡು, ಹಿಂದೆ ಆದಂತಹ ತಪ್ಪನ್ನು ಜ್ಞಾಪಕದಲ್ಲಿಟ್ಟುಕೊಂಡು ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳುವುದಕ್ಕೆ ಏನೇನು ಕ್ರಮ ಅಗತ್ಯವೋ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಆಗಿರುವ ಚರ್ಚೆಯನ್ನು ನೋಡಿದರೆ ಹೇಗೆ ಚರ್ಚೆಯಾಗಿದೆ ಎಂದು ನಿಮಗೆ ಅನ್ನಿಸುತ್ತದೆ ? ಚರ್ಚೆಯೇ ಆಗಬಾರದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾವು ಏನೇ ಚರ್ಚೆ ಮಾಡಿದರೂ ಪ್ರಚೋದನೆಗೆ ಅವಕಾಶ ಆಗಬಾರದು ಎಂತಲೂ ಹೇಳಿದ್ದಾರೆ. ಚರ್ಚೆಯನ್ನೆಲ್ಲಾ ತಾವು ನೋಡಿದ್ದಿರಿ, ಯಾವ ರೀತಿ ಚರ್ಚೆಯಾಗಿದೆ ಎಂದು ನಿಮಗೆ ಅನ್ನಿಸುತ್ತದೆ ?

ಶ್ರೀ ಬಿ. ರಾಚಯ್ಯ.—ಒಬ್ಬೊಬ್ಬರು ಪ್ರಚೋದನೆ ಮಾಡುವ ಹಾಗೆ ಮಾತನಾಡಿದರು. ಒಬ್ಬೊಬ್ಬರು ಪರಿಸ್ಥಿತಿಯನ್ನು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸುಮಾರಾಗಿ ಯಾರುಯಾರು ಪ್ರಚೋದನೆ ಮಾಡುವ ಹಾಗೆ ವಿಚಾರಗಳನ್ನು ಹೇಳಿದ್ದಾರೆ ಎಂದು ಹೇಳುತ್ತೀರಾ ?

ಅಧ್ಯಕ್ಷರು.—ಶ್ರೀ ಬಂಗಾರಪ್ಪನವರೇ ಮಂತ್ರಿಗಳು ಉತ್ತರ ಕೊಡಬೇಕು, ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ದಯಮಾಡಿ ತಾವು ಸುಮ್ಮನೆ ಇರಿ.

(ಗೊಂದಲ)

ಮತ್ತೆ ನೀವು ಆ ಒಂದು ಅಭಿಪ್ರಾಯವನ್ನು ಇಟ್ಟು ಮಾತನಾಡುವುದು ಒಳ್ಳೆಯದಲ್ಲ. ಎಲ್ಲರೂ ತೂಕವಾಗಿ, ಒಳ್ಳೆಯ ರೀತಿಯಲ್ಲಿ ಮಾತನಾಡಿದ್ದಾರೆಂದು ಅಧ್ಯಕ್ಷರು, ಎಲ್ಲರೂ ಹೇಳಿದ್ದಾರೆ. ಆದರೆ ನೀವು ಮಾತ್ರ ಒಬ್ಬೊಬ್ಬರು ಪ್ರಚೋದನೆ ಮಾಡುವ ಹಾಗೆ ಮಾತನಾಡಿದ್ದಾರೆ ಎಂದು ಹೇಳಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಚೋದನೆ ಎಲ್ಲಿಂದ ಬಂತು ಎಂದು ತಮ್ಮ ಹೇಳಿಕೆಯಿಂದಲೇ ಗೊತ್ತಾಗುತ್ತದೆ. ತಾವು ಹಿರಿಯರಿದ್ದೀರಿ. ಈ ರೀತಿಯ ಹೇಳಿಕೆಗಳಿಂದ ಅದನ್ನು ಪ್ರಚೋದನೆ ಮಾಡಿದ ಹಾಗೆ ಈಗಾಗಲೇ ಆಗಿ ಹೋಯಿತು. ಬಹುಶಃ ಅದನ್ನು ತಿದ್ದುಪಡಿ ಮಾಡುವುದು ಒಳ್ಳೆಯದು. ತಾವು ಏನು ಹೇಳಿದಿರಿ. ಕರಗ ಬಂದಾಗ ಮುಸ್ಲಿಮರು ಕಲ್ಲು ಹೊಡೆದರು ಮತ್ತೆ ಸ್ಮಶಾನ ಇರಲಿಲ್ಲ ಆ ಜಾಗದಲ್ಲಿ. ಅಲ್ಲಿ ಕಲ್ಲು ಚಪ್ಪಡಿಯನ್ನು ಹಾಕಿದ್ದಾರೆ ಎಂದು ಹೇಳಿದ್ದೀರಿ. ಇದೇ ಸಾಕು ಪ್ರಚೋದನೆಗೆ.

SRI R. L. JALAPPA.—It is a fact.

SRI M. VEERAPPA MOILY.—ಅದು ಬೇಕೇ ಇಲ್ಲಿ ? ಅದನ್ನು ನ್ಯಾಯಾಂಗ ತನಿಖೆಗೆ ಇಟ್ಟುಬಿಡಬೇಕಾಗಿತ್ತು. ನ್ಯಾಯಾಂಗ ತನಿಖೆಯಲ್ಲಿ ಏನು ಆಗಬೇಕೆಂಬುದನ್ನು ಗೃಹ ಸಚಿವರಾಗಿ ತಾವೇ ಸೂಚನೆ ಕೊಟ್ಟ ಹಾಗೆ ಆಗುತ್ತದೆ. ಇದು ಪ್ರಚೋದನೆ ಮಾಡಿದ ಹಾಗೆ ಆಗುವುದಿಲ್ಲವೇ ? You should have restrained. ಅದರಲ್ಲಿ ಫ್ಯಾಕ್ಟ್ಸನ್ನು ಹೇಳುವಾಗ ಇದರಿಂದ ಪರಿಣಾಮ ಏನಾಯಿತು ? You should have restrained. ರಾಮನಗರದ ವಿಷಯದಲ್ಲಿ ತಾವು ಹೇಳಿದ್ದೀರಿ. You have put the blame on them here. ಇದನ್ನು ತಾವು ಮಾಡಬಾರದು. ಗೃಹ ಸಚಿವರಾದ ತಾವು ಅದನ್ನು ದಯಮಾಡಿ ರಿಪೇರಿ ಮಾಡಿ. ತಾವೇ ಅದಕ್ಕೆ ಸ್ಪಷ್ಟೀಕರಣ ಕೊಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಗೋಲಿಬಾರ್ ಮಾಡಿಸಿದ್ದುದು ನೀವು, ಹಾಗಾದರೆ,

ಶ್ರೀ ಆರ್. ಎಲ್. ಜಾಲಪ್ಪ.—ಈ ರೀತಿ ಗಲಾಟೆ ಮಾಡಿಸಿದವರು ನೀವು

ಶ್ರೀ ಎಂ. ವೀರಪ್ಪಮೊಯ್ಲಿ.—ಸಚಿವರಾಗಿ ನೀವು ಸಂಯಮ ತೋರಬೇಕಾಗಿತ್ತು. ಈ ತರಹ ಅಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅವರ ಕರ್ತವ್ಯ ಅದು. ಸತ್ಯಾಂಶ ಈ ಸದನಕ್ಕೆ ತಿಳಿಸುವುದು ಅದನ್ನು ಅವರು ಮಾಡಿದ್ದಾರೆ. ಅದನ್ನು ಸುಳ್ಳು ಎನ್ನುವುದಾದರೆ ಅದು ನಿಮ್ಮ ವೀಕ್‌ನೆಸ್.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಹಾಗಾದರೆ ಜುಡಿಶಿಯಲ್ ಎನ್‌ಕ್ವೈರಿ ಏಕೆ ಮಾಡಿದಿರಿ ? ಧೈರ್ಯ ಇದ್ದರೆ ಚಾರ್ಜ್‌ಶೀಟ್ ಹಾಕಿ. ಆ ಕಡೆ ಜುಡಿಶಿಯಲ್ ಎನ್‌ಕ್ವಯರಿ ನೇಮಕ ಮಾಡಿ ಈ ಕಡೆ ಯಾರ ಯಾರ ಮೇಲೋ ನೀವು ಆಪಾದನೆ ಹೊರಿಸುವುದಾದರೆ ಎನ್‌ಕ್ವಯರಿಯನ್ನು ಏಕೆ ನೇಮಿಸಿದಿರಿ ? ಆ ನ್ಯಾಯಾಂಗ ತನಿಖೆ ಮುಂದೆ ನೀವು ಹೋಗಿ ಸಾಬೀತು ಮಾಡಿರಿ. What you have said is a most irritent statement.

ಶ್ರೀ ಬಿ. ರಾಚಯ್ಯ.—ವಿರೋಧ ಪಕ್ಷದವರೆಲ್ಲ ನಿಜಾಂಶ ಏನಿದೆಯೋ ಅದನ್ನು ತಿಳಿಸುವಂತೆ ಒಂದೇ ಸಮನೆ ಒತ್ತಾಯಿಸಿದ್ದರಿಂದ ನಾನು ಇದೆಲ್ಲಾ ಹೇಳಬೇಕಾಯಿತಷ್ಟೇ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಇದರ ಬಗ್ಗೆ ತಾವೂ ಕೂಡ ಸ್ವಲ್ಪ ಯೋಚಿಸಬೇಕು ಏಕೆಂದರೆ ಇದರ ಪರಿಣಾಮ ಏನಾಗಬಹುದು ಎಂಬುದನ್ನು ಪೂರ್ವಭಾವಿಯಾಗಿ ಯೋಚಿಸಬೇಕಾದ ವಿಚಾರ. ಮಾನ್ಯ ಮುಖ್ಯ ಮಂತ್ರಿಗಳು ಆಗಲೇ ಹೇಳಿದರು, ಇದರ ಬಗ್ಗೆ ಇಲ್ಲಿ ಚರ್ಚೆ ಮಾಡು ವುದು ಬೇಡ, ಇಲ್ಲಿ ಮಾತಾಡುತ್ತಾ ಹೋದರೆ ಹೊರಗಡೆ ಪರಿಸ್ಥಿತಿ ವಿಷಮಿಸುತ್ತಾ ಹೋಗಲು ಅವ ಕಶವಾಗುತ್ತದೆಂದು. ಅಧ್ಯಕ್ಷರೇ, ತಾವೂ ಆಗಿನಿಂದ ನೋಡುತ್ತಿದ್ದೀರಿ ಇಲ್ಲಿ ಯಾರಾದರೂ ಕೆರಳಿ ಸುವಂಥ ರೀತಿಯಲ್ಲಿ ಮಾಡಿದರೇ? ಅವರ ಪಕ್ಷದವರೇ ಆದ ಬಾಬುರೆಡ್ಡಿ ತುಂಗಳರೂ ಕೂಡ ಜೋರಾಗಿ ಆದರೆ ವಸ್ತುನಿಷ್ಠವಾಗಿಯೇ ಮಾತನಾಡಿದಾರೆ ಯಾರೂ ಸೌಜನ್ಯವನ್ನು ಮೀರಲಿಲ್ಲ. ಇಲ್ಲಿ ನೋಡಿ ದರೆ ಗೃಹಸಚಿವರು ನಿಜಾಂಶ ಎಂದುಕೊಂಡು ಯಾರು ಯಾರನ್ನು ಅಪವಾದಕ್ಕೀಡು ಮಾಡಿದ್ದಾರೆ. ಇದರಿಂದ ನ್ಯಾಯಾಂಗ ತನಿಖೆಯ ಮೇಲೆ ಇನ್‌ಫ್ಲುಯೆನ್ಸ್ ಮಾಡಿದಂತಾಗುವುದಿಲ್ಲವೇ ?

SRI R. L. JALAPPA.—When judicial enquiry has been ordered there was no necessity for discussion. ಈ ವಿಷಯ ಎತ್ತುವ ಮುಂಚೆ ಇದು ಜುಡಿಶಿಯಲ್ ಎನ್‌ಕ್ವಯರಿ ಮುಂದಿದೆ ಎಂಬುದು ನಿಮಗೆ ಗೊತ್ತಿರಲಿಲ್ಲವೇ ? ನೀವೇಕೆ ಎತ್ತಿದಿರಿ ? You are all senior leaders. When it was referred to judici l enquiry there was no necessity for discussion at all. That will have a effect on the judicial enquiry.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಉತ್ತರ ನೀಡುತ್ತಿರುವುದು ಗೃಹಸಚಿವರೋ ಅಥವಾ ಜಾಲಪ್ಪನವರೋ ? The Hon'Minister did not yield.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಮಾತನಾಡುವ ನಮಗೆಲ್ಲ ಜವಾಬ್ದಾರಿ ಇದೆ. ಯಾವ ರೀತಿ ಇಲ್ಲಿ ಮಾತನಾಡಬೇಕು ಯಾವ ಮಾತನಾಡಬಾರದು ಎಂಬುದು ನಮಗೆಲ್ಲ ತಿಳಿದಿಲ್ಲ ಎಂದೇ ಮುಖ್ಯ ಮಂತ್ರಿ ಗಳ ಅರ್ಥ ?

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ಶ್ರೀಮಾನ್ ಕೆ.ಹೆಚ್. ಶ್ರೀನಿವಾಸ್ ಅವರು ಹೇಳಿದಂತೆ ನಾವೆಲ್ಲರೂ ಇದರಿಂದ ಅನೇಕ ಪಾಠಗಳನ್ನು ಕಲಿಯಬೇಕಾಗಿದೆ. ನಾವು ಚರ್ಚೆ ಮಾಡುವ ವಿಧಾನ ಎಲ್ಲಾ ಜನರಿಗೂ ಒಪ್ಪಿಗೆಯಾಗುವಂತೆ ಇರಬೇಕು. ಇದರಿಂದ ಜನಮನದಲ್ಲಿ ಶಾಂತಿ ಕದಡುವ ಪರಿಸ್ಥಿತಿ ಉದ್ಭವವಾಗುವುದಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ರಬ್ಬರ್ ಗುಂಡಿನಿಂದ ಹೊಡೆಯುತ್ತೇವೆಂದಿದ್ದರಲ್ಲ ಏಕೆ ಹಾಗೆ ಮಾಡಲಿಲ್ಲ?

ಶ್ರೀ ಬಿ. ರಾಚಯ್ಯ.—ಅದನ್ನು ಬಳಸಲು ಏಕೆ ಆಗಲಿಲ್ಲ ಎಂದರೆ ಅವು ಇನ್ನೂ ತಯಾರಾಗಿಲ್ಲ. ಅದನ್ನು ಗವರ್ನಮೆಂಟ್ ಆಫ್ ಇಂಡಿಯಾದವರು ತಯಾರು ಮಾಡಿ ನಮಗೆ ಕೊಟ್ಟಿಲ್ಲ. ನಾವು ಇಂಡೆಂಟ್ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಜನ ಸಾಯುವ ಹಾಗೆ ಹೊಡೆದು ರಬ್ಬರ್ ಗುಂಡು ಇರಲಿಲ್ಲ ಎಂದರೆ ಹೇಗೆ ? ಮೊದಲೇ ಸ್ಟಾಕ್ ಇಟ್ಟುಕೊಳ್ಳಬೇಕಾಗಿತ್ತು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ತಯಾರಾಗದಲೇ ಇದ್ದ ಗುಂಡನ್ನು ಹೊಡೆಯುತ್ತೇವೆ ಎಂದು ಹೇಳುತ್ತಾ ಬರುತ್ತಿದ್ದೀರಲ್ಲ, ಇದು ಯಾವ ನ್ಯಾಯ ?

(ನಗು)

ಶ್ರೀ ಬಿ. ರಾಚಯ್ಯ.—ಗುಂಡು ತಯಾರು ಮಾಡುವುದಕ್ಕೆ ಕೇಂದ್ರದವರ ಪರವಾನಿಗೆ ಬೇಕು. ಅದನ್ನು ಪಡೆಯಲು ನಾವು ಇಂಡೆಂಟ್ ಮಾಡಿದ್ದೇವೆ. ಅವನ್ನು ಆದಷ್ಟು ಬೇಗ ಪಡೆಯಲು ಪ್ರಯ ತ್ನಿಸುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳುವುದನ್ನು ನೋಡಿದರೆ ರಬ್ಬರ್ ಗುಂಡು ಉಪಯೋಗಿ ಸುತ್ತೀರೋ ಇಲ್ಲವೋ ಎನ್ನುವುದರ ಬಗ್ಗೆಯೇ ಅನುಮಾನ ಬರುತ್ತದೆ. ಹೀಗಿದ್ದು ಮೊದಲು ಏಕೆ ಅವನ್ನು ಬಳಸುತ್ತೇವೆ ಎಂದಿರಿ ?

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ ಬಂಗಾರಪ್ಪನವರು ೮೦-೮೧, ೮೧-೮೨, ೮೨-೮೩ಸಾಲುಗಳಿಗೆ ಹೋಲಿಸಿ ನಿಮ್ಮ ಸರ್ಕಾರ ಹಾರಿಸಿದ ಗುಂಡುಗಳ ಸಂಖ್ಯೆ ಏನು ಎಂದು ಇತರ ಅಂಕಿಅಂಶಗಳನ್ನು ಕೇಳಿದ್ದಾರೆ. ಅವನ್ನು ಕೊಡುತ್ತೇನೆ.

(ಗೊಂದಲ)

SRI B. RACHAIAH.—In 1983 firing in Air was 13, on mob 7, dead 16 and injured 54. In 1984 30 firings–in the air 11, on mob 19, dead 18 and injured 36. In 1985 there were 17 firings in the air 11, on mob 6. dead-4 and injured-3 Again 1986 there were 22 firings. In the air 13, on mob-9, dead 14 and injured 15. Firing on sandalwood smuglers resulted in 5 deaths. In Excise case there was one death. Criminal-5 deaths. In case of forest-10 deaths.

೨-೩೦ ಪಿ.ಎಂ.

ಇನ್ನು ಮಿಕ್ಕಿದ್ದು ಇದೇ ಕಾರಣಕ್ಕೋಸ್ಕರ ಆಗಿರುವಂಥದ್ದು. ಅದು ಕೂಡ ಆಗಬಾರದಿತ್ತು ಎಂದು ನನ್ನ ಆಸೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ......

ಅಧ್ಯಕ್ಷರು.—ತಾವು ಅರ್ಧ ಗಂಟೆ ಮಾತನಾಡುವಾಗ ಎಷ್ಟು ಸಮಾಧಾನದಿಂದ ಕೇಳಿದ್ದೇವೆ. ಅವರು ಮಾತನಾಡುವಾಗ ತಾವು ಅಷ್ಟೇ ಸಮಾಧಾನದಿಂದ ಕೇಳಬೇಕು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.—೧೯೮೦-೮೧, ೧೯೮೧-೮೨, ೧೯೮೨-೮೩ ರಲ್ಲಿ ೯೮೮ ಜನರಿಗೆ ಗಾಯಗೊಂಡವರಾಗಿದ್ದರೆ ಅದರಿಂದೀಚೆಗೆ ೨೩೨ ಜನರು ಮಾತ್ರ ಗಾಯಗೊಂಡವರು ಆಗಿದ್ದಾರೆ. ಆದ್ದರಿಂದ ಇದು ಕಡಿಮೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಕಡಿಮೆಯಾಗಿದೆಯೆಂತೆ ಬೆನ್ನು ತಟ್ಟಿಕೊಳ್ಳುತ್ತಿದ್ದೀರಿ ಅದನ್ನು ಯಾವಾಗ ಭರ್ತಿ ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಅದಕ್ಕೆ ನಾನು ನೆಮ್ಮದಿ ಪಟ್ಟುಕೊಳ್ಳುತ್ತೇವೆ ಎಂದು ನಾನು ಹೇಳಿಲ್ಲ. ಅದು ಕೂಡ ಆಗಬಾರದಿತ್ತು ಎಂದು ಹೇಳಿದ್ದೇನೆ. ಮತ್ತೆ ಬೆಂಗಳೂರು ನಗರದಲ್ಲಿ ಪ್ರತಿ ನಿತ್ಯ ಕೊಲೆ, ಸುಲಿಗೆ ಹೆಚ್ಚಾಗುತ್ತಿದೆ ಎಂದು ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ತಿಳಿಸಿದರು.

ಶ್ರೀ ಎಸ್. ಬಂಗಾರಪ್ಪ.—ಇದು ಮುಗಿಯಿತೇ ?

ಶ್ರೀ ಬಿ. ರಾಚಯ್ಯ.—ಇನ್ನೇನು ಹೇಳಬೇಕು ಸಾಕಲ್ಲವೆ ? (ನಗು) ಎಲ್ಲರಿಗೂ ಗೊತ್ತಿರುವ ವಿಷಯ. ೩೭ ಗೋಲಿಬಾರುಗಳಾದ ಬಗ್ಗೆ ಅಂಕಿ ಅಂಶಗಳ ಮುಖಾಂತರ ವಿವರಗಳನ್ನು ಕೊಟ್ಟಿದ್ದೇನೆ. ಆದ್ದರಿಂದ ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರು ಹೇಳಿದ ಹಾಗೆ, ಇದನ್ನು ಬರೀ ಅಂಕಿ ಅಂಶಗಳ ಮುಖಾಂತರ ಪ್ರಸ್ತಾಪವನ್ನು ಪೂರೈಸಿದ್ದೇವೆ ಎಂದು ಅಲ್ಲ. ಅಂತಹ ವಿಷಯವನ್ನು, ಅಂತಹ ಸನ್ನಿವೇಶವನ್ನು ಹುಟ್ಟಿಸಿ ಇಲ್ಲಿ ಕೋಮು ಗಲಭೆಗಳಾಗಲೀ, ಭಾಷಾ ಗಲಭೆಗಳಾಗಲಿ, ಆಗದೇ ಇರುವ ರೀತಿಯಲ್ಲಿ ನೋಡಿಕೊಳ್ಳತಕ್ಕಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೆ ಬಿದ್ದಿದೆ. ಅದರಲ್ಲೂ ಹೆಚ್ಚಾಗಿ ಸರ್ಕಾರದ ಮೇಲೆ ಬಿದ್ದಿದೆ. ಇಂತಹ ಸಂದರ್ಭದಲ್ಲಿ ನಿಮ್ಮ ಸಹಕಾರವನ್ನು ನಾವು ಕೇಳುತ್ತಿದ್ದೇವೆ. ಎಲ್ಲೆಲ್ಲಿ ಇಂತಹ ಗಲಭೆಗಳಾಗುತ್ತವೆ, ಕ್ರಿಮಿನಲ್ ಪ್ರೋನ್ ಏರಿಯಾ ಎಂದು ಯಾವುದು ಇದೆ, ಅದನ್ನು ಗುರುತಿಸಿದ್ದೇವೆ. ಏನೇನು ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ಅಂತಹ ಒಂದು ಸಂದರ್ಭದಲ್ಲಿ ಎಲ್ಲೆಲ್ಲಿ ಕೋಮು ಗಲಭೆಗಳಾಗುತ್ತವೆ, ಉದಾಹರಣೆಗೆ ಇವತ್ತು ಕೊಡಗಿನಲ್ಲಿ ನಾಗರೀಕರು ಎಂದು ಹೇಳಿ, ಕೊಡಗಿನವರು ಬೇರೆ, ಹೊರಗಡೆಯಿಂದ ಬಂದವರು ಬೇರೆ ಎಂದು ಶುರುವಾಗಿದೆ. ಇದಕ್ಕೆಲ್ಲಾ ಪುಟ ಕೊಡದ ಹಾಗೆ ನಾವೆಲ್ಲಾ ಇಲ್ಲಿಯವರೇ ಎಂಬುದಾಗಿ ತಿಳಿದುಕೊಳ್ಳುವಂತೆ ಒಂದಾಗಿ ಮಾಡುವ ಕೆಲಸವನ್ನು ಎಲ್ಲಾ ಪಕ್ಷದವರೂ ಮಾಡಬೇಕು. ಹಾಗೆ ರಾಮನಗರದಲ್ಲಿ ಆಗತಕ್ಕಂತಹ ಹಿಂದೂಗಳ ಹಬ್ಬವಾಗಲಿ, ಅಥವಾ ಮುಸ್ಲಿಮರ ಹಬ್ಬವಾಗಲಿ, ನಾವೆಲ್ಲ ಒಂದಾಗಿ

ಕೂಡಿ ಬಾಳಬೇಕು ಎಂದು ಹೇಳಿ ಸಾಗರದಲ್ಲಿ ಯಾವ ರೀತಿ ಮಾಡಿದ್ದಾರೋ ಅದೇ ರೀತಿ ಬೇರೆ ಎಲ್ಲಾ ಕಡೆಯೂ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆ ರೀತಿಯ ಭಾವನೆಗಳಿಂದ ಕೆಲಸ ಮಾಡುವುದಾದರೆ, ಈ ಕೋಮುವಾರು ಗಲಭೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯ, ಭಾಷಾ ಗೊಂದಲವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅದು ಇಲ್ಲದಿದ್ದರೆ ಒಂದೊಂದು ಪಕ್ಷ ಒಂದೊಂದು ರೀತಿಯಲ್ಲಿ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ನಮ್ಮ ಪಕ್ಷದವರನ್ನೇ ಬೆಳೆಸಿಕೊಳ್ಳಬೇಕು ಎಂದು ಹೇಳಿ ಅವರಿಗೆ ಆಗದೇ ಇರುವಂತಹವರನ್ನು ತುಳಿಯತಕ್ಕಂತಹದ್ದು ನ್ಯಾಯವಲ್ಲ, ಧರ್ಮ ಅಲ್ಲ. ಆ ದೃಷ್ಟಿಯಲ್ಲಿ ನಾನು ಹೇಳುತ್ತಿದ್ದೇನೆ. ರಾಮನಗರದಲ್ಲಿ ಜನಗಳಿಗೆ ಗೊತ್ತಿದೆ, ನಾನು ಯಾವ ಸಂದರ್ಭದಲ್ಲಿ ಹೋಗಿದ್ದೆ ಎಂದು ಇನ್ನೂ ಚಾಕು ಚೂರಿ ಹಿಡಿದುಕೊಂಡು ಓಡಾಡತಕ್ಕಂತಹ ಸಂದರ್ಭದಲ್ಲಿಯೇ ನಾನು ಅಲ್ಲಿಗೆ ಹೋಗಿದ್ದೆ. ನನ್ನ ಎದುರಿನಲ್ಲೇ ಪೋಲೀಸ್‌ನವರ ಮೇಲೆ ಕಲ್ಲನ್ನು ಎತ್ತಿ ಹಾಕಿದ್ದನ್ನು ನೋಡಿದ್ದೇನೆ. ಅಂತಹ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ಅವರಿಗೆ ಒಳ್ಳೆಯ ಮಾತುಗಳನ್ನು ಹೇಳಿ ನೀವೆಲ್ಲರೂ ರಾಮನಗರದ ಜನ, ಹಿಂದೆಯೂ ಬಾಳಿದ್ದೀರಿ. ಮುಂದೆಯೂ ಬಾಳಬೇಕಾಗುತ್ತದೆ. ಸಣ್ಣ ಪುಟ್ಟ ವಿಷಯಗಳಿಗೋಸ್ಕರವಾಗಿ ಅದನ್ನೇ ದೊಡ್ಡದನ್ನಾಗಿ ಹಚ್ಚಿಕೊಳ್ಳಬಾರದು ಎಂದು ಅವರಿಗೆ ಸಾಕಷ್ಟು ರೀತಿಯಲ್ಲಿ ಹೇಳಿದ್ದೇನೆ. ಆದರೆ ಕೆಲವು ಕಡೆ ಒಂದೇ ಕಡೆಯ ಮುಖಂಡರು ಎಂದು ಹೇಳಲಾರೆ. ಅಲ್ಲಿ ೨ ಗುಂಪುಗಳಿವೆ. ಆ ೨ ಗುಂಪುಗಳ ಮುಖಂಡರೂ ಕೂಡ ಇವೊತ್ತು ಎಲ್ಲಾ ಕಡೆ ಹೋಗಿ ಇಂತಹ ಗಲಭೆಗಳು ಆಗಕೂಡದು ಎಂದು ಹೇಳಿದ್ದಾರೆ. ಎಷ್ಟೇ ಹೇಳಿದರೂ ಅವರ ಹಿಂದುಗಡೆ ಇರತಕ್ಕಂತಹ ಜನ ಪ್ರಚೋದನೆ ಮಾಡುತ್ತಿದ್ದಾರೆ. ಆ ಒಂದು ಪ್ರಚೋದನೆಯಿಂದ ಗಲಭೆಗಳಲ್ಲಿ ಭಾಗವಹಿಸಿದ್ದಾರೆ ಜನ ಸತ್ತಿದ್ದಾರೆ, ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ. ಆ ದೃಷ್ಟಿಯಿಂದ ರಾಜಕೀಯ ಮುಖಂಡರುಗಳು ಸ್ವಲ್ಪ ಮಟ್ಟಿಗೆ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೋಸ್ಕರ ಇಂತಹ ಸಂದರ್ಭಗಳಲ್ಲಿ ಆಗಾಗ್ಗೆ ಹೋಗಿ ಜನರನ್ನು ಎತ್ತಿಕಟ್ಟತಕ್ಕಂತಹದ್ದು ಸರಿಯಾಗಿ ಕಾಣುವುದಿಲ್ಲ. ಅದಕ್ಕೋಸ್ಕರ ಮಾನ್ಯ ಸಿಂಧ್ಯಾರವರು ಏನು ಹೇಳಿದರು ಅವರ ಪ್ರಕಾರ ಇವತ್ತು ಅಂತಹದ್ದನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟುವುದಕ್ಕೆ ಎಲ್ಲಿ ಹೆಚ್ಚು ಪೋಲೀಸ್ ದಳವನ್ನು ಹಾಕಬೇಕೋ, ಎಲ್ಲಿ ಯಾವ ಕೆಲಸವನ್ನು ಮಾಡಬೇಕೋ ಆ ಕೆಲಸವನ್ನು ಮಾಡಿದ್ದೇವೆ. ಇದು ಒಬ್ಬರು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ೬-೭ ಜನ ಶ್ರೀಮಾನ್ ಲೈಕುದ್ದೀನ್‌ರವರು ಒಂದು ಸ್ಟ್ಯಾಂಡಿಂಗ್ ಕಮಿಟಿ ರೀತಿ ಬಹಳ ಅನುಭವಿಗಳಾಗಿರತಕ್ಕಂತಹವರನ್ನು ಜಾತೀಯ ವಿಷಯವನ್ನು ಕಡಿಮೆ ಮಾಡಿ, ಒಳ್ಳೆಯ ವಾತಾವರಣವನ್ನು ಏರ್ಪಾಡು ಮಾಡತಕ್ಕಂತಹ ಜನಗಳನ್ನೇ ಸೇರಿಸಿ ಈ ಒಂದು ಕೆಲಸವನ್ನು ಮಾಡಿದರೆ ಸ್ವಲ್ಪಮಟ್ಟಿಗೆ ಸಾಧ್ಯವಾಗಬಹುದು ಎಂದು ಹೇಳಿದ್ದಾರೆ. ಬಹುಶಃ ಅದನ್ನೂ ಕೂಡ ಪ್ರಯತ್ನ ಮಾಡೋಣವೆಂದು ಈ ಒಂದು ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ. ಒಟ್ಟಿನಲ್ಲಿ ಯಾರು ಏನೇ ಹೇಳಲಿ, ಜಾತೀಯತೆಯನ್ನು ಯಾರೂ ತೆಗೆದಿಲ್ಲ, ತೆಗೆಯುವುದಕ್ಕಾಗಿಯೂ ಇಲ್ಲ. ಭಾಷಾ ವ್ಯಾಮೋಹ ಗಡಿ ಸಮಸ್ಯೆ ಎಂದು ಹೇಳಿ ಅದನ್ನೂ ಬಿಡುವುದಕ್ಕಾಗುವುದಿಲ್ಲ, ಒಟ್ಟಿನಲ್ಲಿ ಇಂತಹ ಒಂದು ಸಂದರ್ಭದಲ್ಲಿ ಪ್ರತಿಯೊಬ್ಬರೂ ಇದನ್ನು ಎಷ್ಟು ಕಡಿಮೆ ಮಾಡುವುದಕ್ಕೆ ಸಾಧ್ಯವೋ ಅಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆ ವಿನಃ ಅದನ್ನು ಉಲ್ಬಣಾಸ್ಥಿತಿಗೆ ತರುವುದಕ್ಕೆ ಪ್ರಯತ್ನ ಮಾಡಿದರೆ ಅದು ಕಷ್ಟವಾಗಬಹುದು. ಗುಂಡಿನಿಂದಲೇ ಜನತೆಯಲ್ಲಿ ಶಾಂತಿಯನ್ನು ಸ್ಥಾಪಿಸುತ್ತೇವೆಂದು ಹೇಳುವ ನಂಬಿಕೆ ನನಗಿಲ್ಲ. ದ್ವೇಷವನ್ನು ದ್ವೇಷದಿಂದಲೇ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ದ್ವೇಷವನ್ನು ಪ್ರೀತಿಯಿಂದ ವಿಶ್ವಾಸದಿಂದ ಸಾಧನೆ ಮಾಡುವುದಕ್ಕೆ ಸಾಧ್ಯ ಇದೆ. ಅದನ್ನು ನಮ್ಮ ಗಾಂಧೀಜಿಯವರು ನಮಗೆಲ್ಲಾ ಹೇಳಿಕೊಟ್ಟಿದ್ದಾರೆ. ಅಂದಾಕ್ಷಣ ಕೊಲೆ ಮಾಡತಕ್ಕಂತಹವನನ್ನು ಬಿಟ್ಟುಬಿಡಬೇಕು. ದರೋಡೆ ಮಾಡತಕ್ಕಂತಹವನನ್ನು ಬಿಟ್ಟು ಬಿಡಬೇಕು ಎಂದಲ್ಲ. ಇದಕ್ಕೆ ಯಾವ್ಯಾವ ಸಂದರ್ಭದಲ್ಲಿ ಏನೇನು ಮಾಡಬೇಕೋ ಅದನ್ನು ಮಾಡಬೇಕಾಗಿ ಬರುತ್ತದೆ. ಆ ಸಂದರ್ಭದಲ್ಲಿ ಅನಿವಾರ್ಯವಾಗಿ ನಮ್ಮ ಕರ್ತವ್ಯದ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆ. ನಂತರ ಡಕಾಯಿತಿ ವಿಷಯದಲ್ಲಿ ಮಾನ್ಯ ಸದಸ್ಯರು ಮಾತನಾಡಿದರು. ಎಲ್ಲಾ ಕಡೆ ದರೋಡೆಕೋರರು ಸಿಕ್ಕಿದ್ದಾರೆ. ಬೆಂಗಳೂರಿನಲ್ಲಿ ನಡೆದ ಡಕಾಯಿತರು ಸಿಕ್ಕಿಲ್ಲ. ಆದರೆ ಅವರನ್ನು ಗುರುತಿಸಿದ್ದೇವೆ. ಅವರು ಉತ್ತರ ಭಾಗದವರು. ಅವರನ್ನು ಹಿಡಿದೇ ಹಿಡಿಯುತ್ತೇವೆಂದು ಹೇಳಬಲ್ಲೆ. ಡಕಾಯಿತಿ ಎಲ್ಲೆಲ್ಲಿ ನಡೆದಿದೆ ಅದೆಲ್ಲಾ ಪತ್ತೆಯಾಗಿದೆ ಒಂದೂ ಉಳಿದಿಲ್ಲ. ನಂತರ ಬೆಂಗಳೂರು ನಗರದಲ್ಲಿ ದರೋಡೆಕೋರರು, ಅವರವರೆ ಕೊಲೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಗೂಂಡಾಗಳು ಅವರವರೇ ಕೊಲೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಯಾರು ಏನೇ ಮಾಡಿದರೂ ಪರಿಸ್ಥಿತಿ ಬಂದಾಗ ಕಾನೂನು ಭಂಗವನ್ನು ಯಾರು ಮಾಡುತ್ತಾರೋ, ಕೊನೆಗೆ ಅದೇ ಅವರಿಗೆ ತೊಡಕಾಗುತ್ತದೆ. ಕೊಲೆಗಡುಕನನ್ನು ಮತ್ತೊಬ್ಬ ಕೊಲೆಗಡುಕ ಕೊಲೆ ಮಾಡಿದರೆ ಕೊಲೆ ಮಾಡಿ

ಥಂತಹವನನ್ನು ಹಿಡಿಯುತ್ತಿದ್ದೆವು. ಕಾನೂನು ಪ್ರಕಾರ ಅವರಿಗೆ ಶಿಕ್ಷೆ ಆಗಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ೩ ಕಡೆ ದಿವಾಕರ ಹೆಗ್ಗಡೆ ಒಬ್ಬ ವಿದ್ಯಾರ್ಥಿ ಗೂಂಡಾ ಎಂದು ಅನೇಕ ಅಪರಾಧಗಳ ತನಿಖೆ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಅವರ ಸ್ನೇಹಿತರೆ ಅವನನ್ನು ಕೊಲೆ ಮಾಡಿದ್ದಾರೆ. ಅವರನ್ನೂ ಪತ್ತೆ ಮಾಡಿದ್ದೇವೆ. ಶಾಮಣ್ಣ ರೆಡ್ಡಿ ಎಂದು ಒಬ್ಬರು, ಅವರು ವೈಯಕ್ತಿಕವಾಗಿ ಒಂದು ಮನೆಯ ಜಗಳದ ದ್ವೇಷದಿಂದ ಅವರ ಸಂಬಂಧೀಕರನ್ನೇ ಕೊಲೆ ಮಾಡಿದ್ದಾರೆ. ಅದೇ ರೀತಿ ಇಬ್ಬರು ಆಟೋ ನಡೆಸತಕ್ಕಂತಹ ಸ್ನೇಹಿತರಲ್ಲಿ ೫,೦೦೦ ರೂಪಾಯಿಗಳ ವಿಷಯದಲ್ಲಿ ಹಣವನ್ನು ಕೊಟ್ಟಿಲ್ಲವೆಂದು ಮತ್ತೊಬ್ಬರು ಅವನನ್ನು ಕೊಲೆ ಮಾಡಿದ್ದಾರೆ. ಅವರನ್ನು ಹಿಡಿದು ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಆ ದೃಷ್ಟಿಯಲ್ಲಿ ಬಹುಶಃ ಒಬ್ಬರಿಗೊಬ್ಬರು ಅವರವರಲ್ಲೇ ಜಗಳವಾಗಿ ತಮ್ಮ ತಮ್ಮಲ್ಲೇ ವೈಮನಸ್ಸು ಉಂಟಾಗಿ ಕೊಲೆಗಳಾಗಿವೆ. ಎಷ್ಟೇ ಕಷ್ಟವಾದರೂ ಕಾನೂನು ಪಾಲನೆ ಮಾಡಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಅಂತಹವರನ್ನೂ ಹಿಡಿದು ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಅವರನ್ನು ಕೋರ್ಟಿನ ಮುಂದೆ ಪ್ರೊಡ್ಯೂಸ್ ಮಾಡಿದ್ದೇವೆ. ಈ ದೃಷ್ಟಿಯಿಂದ ನಾನು ಹಿಂದಿಗಿಂತ ಇವೊತ್ತು ನೋಡಿದಾಗ ಶಾಂತಿ ಪಾಲನೆ ಮಾಡುವುದರಲ್ಲಿ ಸಾಕಷ್ಟು ಮಟ್ಟಿಗೆ ಅಧಿಕಾರಿಗಳು ಶ್ರಮವಹಿಸಿದ್ದಾರೆ ನಮ್ಮ ಅಧಿಕಾರಿಗಳು ಸಾಕಷ್ಟು ರೀತಿಯಲ್ಲಿ ಕೆಲಸ ಮಾಡಿದ್ದಾರೆ, ಆದ್ದರಿಂದ ವಿವರವಾದ ಉತ್ತರವನ್ನು ಪ್ರತಿಯೊಬ್ಬರಿಗೂ ಕೊಡದೆ ಇಲ್ಲಿ ಮುಖ್ಯವಾಗಿ ಬಂದಂತಹ ವಿಷಯಗಳಿಗೆ ಮಾತ್ರ ನಾನು ಉತ್ತರವನ್ನೂ ಹೇಳಿದ್ದೇನೆ. ದಯಮಾಡಿ ಇದುವರೆವಿಗೂ ಇಟ್ಟಂತಹ ವಿಶ್ವಾಸವನ್ನು ಇನ್ನು ಮುಂದೆಯೂ ಇಟ್ಟುಕೊಳ್ಳಿ. ಇನ್ನು ಮುಂದೆ ಈ ರೀತಿಯ ಘಟನೆಗಳು ಆಗದೇ ಇರುವ ರೀತಿಯಲ್ಲಿ ನಾವೂ ನೀವು ಒಟ್ಟಾಗಿ ಸೇರಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ ಮತ್ತು ಸರ್ಕಾರ ಈಗ ನೊಂದಂತಹವರಿಗೆ ಪರಿಹಾರ ಧನವನ್ನು ಕೊಡತಕ್ಕಂತಹ ಕಾಲದಲ್ಲಿ ಹಿಂದೆ ೬,೫೦೦ ರೂಪಾಯಿಗಳನ್ನು ಕೊಡುತ್ತಿದ್ದರು. ಅದನ್ನು ಈಗ ೭,೫೦೦ ರೂಪಾಯಿಗಳೆಂದು ಮಾಡಿದ್ದೇವೆ. ಸತ್ತಂತಹವರಿಗೆ ೨೦,೦೦೦ ರೂಪಾಯಿಗಳೆಂದು ಮಾಡಿದ್ದೇವೆ. ಇದರಿಂದ ಅವರಿಗೆ ಆದಂತಹ ನಷ್ಟವನ್ನು ಸಂಪೂರ್ಣವಾಗಿ ತುಂಬಿಕೊಡುವುದಕ್ಕೆ ಸಾಧ್ಯವಾಗದಿದ್ದರೂ ಅವರಿಗೆ ಸಹಾನುಭೂತಿ ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇದೇ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಯಾವಾಗಲೂ ನಾವು ಸಿದ್ಧವಾಗಿದ್ದೇವೆ ಸಾಮರಸ್ಯ ವಾತಾವರಣವನ್ನು ಉಂಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಸದನದಲ್ಲಿ ಆಶ್ವಾಸನೆಯನ್ನು ಕೊಡುತ್ತಿದ್ದೇನೆ ಮತ್ತೆ ಇವತ್ತು ಬೆಳಗ್ಗೆ ೩೩ರ ನಿಯಮದ ಮೇಲೆ ಶ್ರೀಮಾನ್ ವೆಂಕಟರಾಮಯ್ಯನವರು ಎತ್ತಿದಂತಹ ಪ್ರಶ್ನೆಗೆ ನನ್ನ ಲಿಖಿತ ಹೇಳಿಕೆಯನ್ನು ಸದನದ ಟೇಬಲ್ ಮೇಲೆ ಇಡುತ್ತಿದ್ದೇನೆ.

Statement by the Minister

Reg. Cases of murder, decoity etc, in Bangalore city

ಬೆಂಗಳೂರು ನಗರದಲ್ಲಿ ೧೯೮೩ ರಿಂದ ೧೯೮೫ ರವರೆಗೆ ಮತ್ತು ೧-೧-೧೯೮೬ ರಿಂದ ೩೧-೭-೧೯೮೬ ರವರೆಗೆ ಸಂಬಂಧಿಸಿದ ಅಪರಾಧಗಳ ಸಂಖ್ಯೆ ಕೆಳಗಿನಂತಿದೆ.

ಕ್ರಮ ಸಂಖ್ಯೆ.	ಅಪರಾಧಗಳು	೧೯೮೩	೧೯೮೪	೧೯೮೫	೧೯೮೬ (೩೧-೭-೧೯೮೬ರವರೆಗೆ)
೧)	ಕೊಲೆ	೬೮	೮೪	೯೨	೪೯
೨)	ದರೋಡೆ	೧೧೧	೧೫	೧೩	೧೩
೩)	ಸುಲಿಗೆ	೨೮೫	೨೪೯	೧೯೨	೧೧೫
೪)	ಕನ್ನ ಕಳವು				
	ಅ) ರಾತ್ರಿ	೧೭೬೭	೧೫೭೭	೧೩೨೧	೬೯೩
	ಆ) ಹಗಲು	೨೩೩	೨೪೯	೧೯೧	೧೦೩